"ಭ್ರಮಿ ನಾನು ಭ್ರಮರ; ನಿಃಶಂಕಿ ನೀನು. ಈ ಜಾತಶಂಕಿಯನ್ನು
ಶಮಿಯಾಗಿ ಶಮಿಸಿ, ನೀನಾಗಿ ಹೊಸೆದು ಹೊತ್ತಿಸಿದೆ ಬೆಂಕಿಯನ್ನು"

— ಬೇಂದ್ರೆ.

ಭಾವಾರ್ಜನೆ

ಕಾದಂಬರಿ

"ನಚಿಕೇತ"

1958

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್
ಉಡುಪಿ

ಮುದ್ರಕರು
ನವಯುಗ ಪ್ರೆಸ್,
ಉಡುಪಿ

ವಿಕ್ರಯಾಧಿಕಾರಿಗಳು
ನವಭಾರತ ಪುಸ್ತಕ ಭಂಡಾರ,
ಉಡುಪಿ

ಬೆಲೆ
ಒಂದೂಕಾಲು ರೂಪಾಯಿ
(1=25)

ನೆನಹು–ನಿರೀಕ್ಷೆ.

ನಾಡಿನಲ್ಲಿ ನೂರಾರು ಚಿತ್ರಗಾರರಿರುತ್ತಾರೆ. ಅವರ ಶೈಲಿಗಳೆಷ್ಟು ವೈವಿಧ್ಯಪೂರ್ಣವಾಗಿರುವವೋ ಅಷ್ಟೇ ವಿವಿಧತೆಯನ್ನು ಅವರ ಮನೋವೃತ್ತಿಗಳಲ್ಲಿಯೂ ಕಾಣಬಹುದು. ತಮ್ಮ ಮನಸ್ಸಿನ ಮೇಲೆ ಅಚ್ಚುಗೊಂಡ ರೂಪನ್ನು ಎಳೆಯ ಚಿತ್ರಗಾರರಿಗೆ ಮರೆಯಲು ಕಷ್ಟಸಾಧ್ಯ. ಕಾರಣ ಅಂತಹ ರೂಪು ಅವರ ಮನಸ್ಸು ಪಕ್ವಗೊಳ್ಳುವ ಮೊದಲೇ ಅದರ ಮೇಲೆ ಸುಮಧುರ ಗಂಭೀರ ಪರಿಣಾಮವನ್ನು ತಂದಿರುತ್ತದೆ. ಇದರಿಂದಾಗಿ ತಮ್ಮರಿವು ತಮಗೆಯೇ ಇರದಂತೆ ಅವರು ಇಂತಹ ರೂಪು ಅಥವಾ ಭಾವಗಳ ಪೂಜಾರಿಗಳಾಗುವುದು ಇದೆ. ಇದೇ ವಿಷಯ ಪ್ರತಿಪಾದನೆಯ ಸ್ಪಷ್ಟ ರೇಖೆಗಳನ್ನು ನೀವು ಈ ಕಾದಂಬರಿಯಲ್ಲಿ ಕಾಣಬಹುದು.

ಮಾನ್ಯರಾದ ಕೆ. ಯಚ್. ಶೆಟ್ಟರಲ್ಲಿ ಈ ಕಾದಂಬರಿಯ ಹಸ್ತಪ್ರತಿಯನ್ನು ಕಳುಹಿಸಿದಾಗ, ಅವರು ಅದನ್ನೋದಿ ಕೂಡಲೇ ಪ್ರಕಟಿಸಲು ಮುಂದಾದರು. ಈ ಕಾದಂಬರಿಯ ಕುರಿತು ಅವರಾಡಿದ ವಿಮರ್ಶನೀಯ ಮಾತುಗಳಿಗಾಗಿ ನಾನವರಿಗೆ ಋಣಿ.

ಇದನ್ನು ಬರೆಯುವ ಸಮಯ ಹಾಗೂ ಬರೆದಾದ ಮೇಲೆ ಓದಿಕಂಡು ವಿಮರ್ಶಿಸಿದ್ದ ಗೆಳೆಯ ವಿಲ್ಲಿ ಮತ್ತು ಯಚ್. ಯಲ್. ಭಟ್ ಇವರಿಗೂ ನಾನು ಕೃತಜ್ಞ. ಮೇಲಾಗಿ"ಗುರುನಿಲಯ "ದ ಸಹೋದ್ಯೋಗಿಗಳು ಹಿಂದಿಗಿಂತಲೂ ಹೆಚ್ಚಿನ ನೆರವನ್ನಿತ್ತಿರುತ್ತಾರೆ. ಅವರಿಗೂ ನಾನು ಋಣಿ. ಮುಖಚಿತ್ರವನ್ನು ಬರೆದುಕೊಟ್ಟ ಸಹೋದರ ವಸಂತನಿಗೂ, ಇನ್ನಿತರ ಗೆಳೆಯರಿಗೂ ನನ್ನ ನೆನಿಕೆಗಳು.

"ಸ್ನೇಹಸ್ಮೃತಿ"ಯನ್ನು ಓದಿಕಂಡ ನೀವು, ಈ ಕಾದಂಬರಿಯನ್ನೂ ಓದಿಕಂಡು ವಿಮರ್ಶಿಸುವಿರಾಗಿ ನಾನು ನಿರೀಕ್ಷಿಸಿದರೆ ತಪ್ಪಾಗಲಾರದಷ್ಟೇ?

"ನಚಿಕೇತ"

ಮಂಗಳೂರು.

ಭಾವಾರ್ಚನೆ

— ೧ —

ಹುಣ್ಣಿಮೆ!

ಕಿಟಕಿಯ ಹಿಂಗಡೆಯಲ್ಲಿ ನಾಲ್ಕಾರು ತೆಂಗಿನ ಮರಗಳ ಛಾಯೆ ಕಂಡಿತ್ತು. ನಕ್ಷತ್ರಗಳ ಮಿನುಗುವಿಕೆ ತಿಂಗಳಲ್ಲಿ ಅದ್ದಿತ್ತು. ಬಹು ದೂರದ ದೇಗುಲದ ಘಂಟಾ ನಿನಾದ ಅಲೆ ಅಲೆಯಾಗಿ ಬಂದಿತ್ತು. ನಿಶ್ಶಬ್ದ ಮೊಗಮುದ್ರೆಯಲ್ಲಿ ಮರಗಳಿದ್ದುವು.

ಮೇಜಿನ ಮೇಲೆ ಹರವಿ ಬಿದ್ದಿದ್ದ ಬಣ್ಣಗಳ ನಡುವೆ ಕೈಯೂರಿ ಕುಳಿತಿದ್ದಾತ ಕಣ್ತೆರುವಿ ಕಂಡ. ನಿಸರ್ಗ ತಾಳಿದ್ದ ಮೌನ ತನ್ನ ಮನದಲ್ಲಿ ಬರಲಾರದೇಕೆ—ಎಂಬ ಶೂನ್ಯ ನೋಟವನ್ನು ಹಾಯಿಸಿದ.

ವಿದ್ಯುದ್ದೀಪದ ಬೆಳಕಲ್ಲಿ ಅರೆ ಮುಗಿದಿದ್ದ ಚಿತ್ರ ಬಿಳಿ ಮಿಶ್ರಿತವಾಗಿ ಕಾಣಿಸುತ್ತದೆ. ತಾಯಿಯೊಬ್ಬಳು ಮಗುವನ್ನೆತ್ತಿಕೊಂಡು, ಅದರ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನು ನೆಟ್ಟು ನೋಡುವ ಚಿತ್ರ.

ನಿಟ್ಟುಸಿರಿಟ್ಟ.

ಈ ತಾಯಿ ಮಗು ಚಿತ್ರಕ್ಕಾಗಿ ಆತ ಕಂಡ ಮೊಗಗಳೆಷ್ಟೋ! ತಾಯಿಜು ನಲುಮೆ ಮೂರ್ತಿ—ಮಗು. ಲಾಲಿತ್ಯ ತಾಯಿಯ ತೋಳುಗಳಲ್ಲಿ ಕಾಣಿಸುತ್ತದೆ.

ಎಲ್ಲೋ ಹರಿದಿತ್ತು ಅವನ ಮನಸ್ಸು!

ತಾಯಿ ಮಗು ಚಿತ್ರವನ್ನು ತಾನು ಪೂರ್ಣಗೊಳಿಸಲಾರೆ ಎಂಬ ಬೇಸರ ಮೊಗದಲ್ಲಿದ್ದಂತೆ ಕಾಣಿಸುತಿತ್ತು. ಅದಕ್ಕೆಂದೋ ಏನೋ—ಮಧ್ಯಾಹ್ನದ ಬಳಿಕ ಆತ ಒಂದು ಬಾರಿಯಾದರೂ ಆ ಚಿತ್ರದ ಮೇಲೆ ಕುಂಚವನ್ನು ಓಡಿಸಿರಲಿಲ್ಲ. ದಿನದ ಕೆಲಸಗಳು ಮರೆತಿದ್ದುವು.

ಆತ ಬಹುದಿನಗಳ ಹಿಂದಲ್ಲಿ ಕಂಡ ಚಿತ್ರವದು. ಕಲಾ ಶಾಲೆಯಲ್ಲಿ ತನ್ನ ಸಹಪಾಠಿಗಳು ಚಿತ್ರಿಸುತಿದ್ದ ತಾಯಿಮಗು ಚಿತ್ರವನ್ನು

ಕಂಡು ನಗುತಿದ್ದ ಕಾಲವೊಂದಿತ್ತು. ತಾಯಿಯ ಪ್ರೀತಿಯ ಅರಿವು ಅಂದೇ ಆಗಿತ್ತಾದರೂ, ಅದನ್ನು ಚಿತ್ರಿಸುವ ಶಕ್ತಿ ಇದ್ದಿರಲಿಲ್ಲ

"ನೋಡು ಅನಂತಾ, ನಾವೆಲ್ಲರು ತಾಯಿ ಮಗು ವಸ್ತುವನ್ನು ಆರಿಸಿ ಚಿತ್ರ ಬರೆಯುತ್ತೇವೆ. ನೀನು ಮಾತ್ರ ಬರಿಯ ಮಗುವಿನ ಚಿತ್ರ ಬರೆದು ನಿಂತಿರುವಿ", ಎಂದಾತನ ಸಹಪಾಠಿಯೊಬ್ಬ ಕೆಲವು ವರುಷಗಳ ಹಿಂದೆ ಹೇಳಿದ್ದ ಮಾತು ಕಿವಿಯಲ್ಲಿ ಜಿನುಗಿತು.

ದೇಗುಲದ ಘಂಟಾನಿನಾದದ ಸ್ಪಷ್ಟತೆ ಹೆಚ್ಚಿತು.

"ತಾಯಿಯ ಚಿತ್ರ ಬಿಡಿಸಲು ನನ್ನಿಂದ ಸಾಧ್ಯವಿಲ್ಲವೆಂದು ಅನಿಸುತ್ತದೆ", ಎಂದು ನಿಸ್ಸಹಾಯ ದನಿಯಲ್ಲಿ ಅನಂತ ಅಂದು ನುಡಿದಿದ್ದ.

ಆ ಘಟನೆ ಜರಗಿ ಹಲ ವರುಷಗಳು ಉರುಳಿವೆ. ಇದೀಗ ಅದೇ ಚಿತ್ರವನ್ನು ಬಿಡಿಸಲು ಅನಂತ ಯತ್ನಿಸುತಿದ್ದಾನೆ. ಪ್ರಯತ್ನ ಫಲಕಾರಿಯಾಗಿಲ್ಲ. ತಾಯಿಯ ಚಿತ್ರಣಕ್ಕಾಗಿ ತನ್ನ ಮನದಲ್ಲೇಕೆ ಅಳುಕು ಎಂಬುದು ಅವನದೊಂದು ಸಮಸ್ಯೆ.

"ಮಿಸ್ಟರ್ ಅನಂತ್, ನಿಮ್ಮ ಈ ಮಗುವಿನ ಚಿತ್ರದ ರೇಖೆಗಳೆಲ್ಲ ಮುದ್ದು ಮುದ್ದಾಗಿವೆ. ನಮ್ಮ ಯಾರ ಚಿತ್ರದಲ್ಲೂ ಈ ಬಗೆಯ ಲಾಲಿತ್ಯವಿಲ್ಲ", ಎಂದು ಆತನ ಮಗುವಿನ ಅಪೂರ್ಣ ಚಿತ್ರವನ್ನು ಕಂಡು ಒಬ್ಬಾಕೆ ನುಡಿದಿದ್ದಳು.

ಅಂದು ರಾತ್ರಿ ಆ ಚಿತ್ರ ಬೆಂಕಿಗೆ ಆಹುತಿಯಾಗಿತ್ತು!

ಬೆಳದಿಂಗಳು ಆತನನ್ನು ಕರೆದ್ಯೊದಿತು. ನಿಶ್ಶಬ್ದ ಪ್ರಕೃತಿ ಅವನ ಮನದ ತುಮುಲತೆ ಕಂಡು ಸಹಾನುಭೂತಿ ತೋರಿತು. ಉದ್ವೇಗ ಹೆಚ್ಚಿತು. ಮಧ್ಯಾಹ್ನದ ಬಳಿಕದ ಜಡತ್ವವನ್ನು ಕಳಚಿಟ್ಟು, ಕುಂಚವನ್ನು ಕೈಗೆತ್ತಿಕೊಂಡು, ತಾಯಿಯ ತಲೆಕೂದಲನ್ನು ಚಿತ್ರಿಸತೊಡಗಿದ.

ಎರಡೇ ಕ್ಷಣ!

ಸಾಧ್ಯವಾಗಲಿಲ್ಲ.

ಕುಂಚವನ್ನು ಮೇಜಿನ ಮೇಲೊಗೆದ. ಮೇಜಿನೊಳಗಿದ್ದ ಕಾಗದದ ಹಾಳೆಯೊಂದನ್ನು ಹೊರತೆಗೆದು, ಬಣ್ಣಗಳನ್ನೂ ಕುಂಚಗಳನ್ನೂ ಅಂಗೈಯಿಂದ ದೂರಸರಿಸಿ--ಬರೆಯತೊಡಗಿದ.

ಪತ್ರ!

— ೨ —

"ಈ ಚಿತ್ರದ ಮಗುವಿನ ತಾಯೀ,

ಬಹುಶಃ ಈ ಪತ್ರವನ್ನು ಸಂಪೂರ್ಣಗೊಳಿಸಲಾರೆ. ನಿನ್ನ ಚಿತ್ರವನ್ನು ಚಿತ್ರಿಸ ಹೊರಟವ ಸೋಲನ್ನು ಅನುಭವಿಸುತಿದ್ದೇನೆ. ಹಾಗಾಗಿ ಈ ಪತ್ರದ ಬರವಣಿಗೆಯಲ್ಲಿ ಸೋತರೆ, ಅದು ಅಸ್ವಾಭಾವಿಕವಾಗಲಾರದು.

ನಿನ್ನ ಮನಸ್ಸನ್ನು ಯಾವ ರೇಖೆಗಳಿಂದ ಚಿತ್ರಿಸಲು ಸಾಧ್ಯವೋ, ನನಗೆ ತಿಳಿದಿಲ್ಲ. ಕಳೆದ ಕೆಲವು ವರುಷಗಳಿಂದ ನಡೆಯುತಿದ್ದ ಪ್ರಯತ್ನ ಇಂದು ಫಲವನ್ನು ಹೊತ್ತೀತೆಂಬ ಬಯಕೆ, ಭರವಸೆ—ಕಳೆದ ಒಂದು ಕ್ಷಣದ ತನಕವೂ ನನ್ನ ಎದೆಯಲ್ಲಿತ್ತು. ಆದರೆ ಈಗಿಲ್ಲ!

ಮನಸ್ಸಿಗೆ ಭೌತಿಕ ರೂಪು ಏಕಿಲ್ಲವೋ! ಭಾವನೆಗಳ ಚಿತ್ರಣ ಕಷ್ಟ. ಕೇವಲ ಅಳುನಗುಗಳ ಚಿತ್ರಬರವಣಿಗೆ ಸಾಧಿಸಿದೊಡನೆ, ಮಾನವ ಕೋಟಿಯ ಭಾವನೆಗಳನ್ನು ಚಿತ್ರಿಸಲು ಸಾಧ್ಯ ಎಂಬ ತಿಳಿವು ತಪ್ಪು—ಎಂದು ನಾನು ಕಲಿಯುತಿದ್ದಾಗ ನನ್ನ ಗುರುಗಳಾಗಿದ್ದ ನಂಬಿಯಾರ್ ಹೇಳಿದುದು ಈಗ ನೆನಪಿಗೆ ಬರುತ್ತಿದೆ. ಆದರೂ ಒಳ ಮನಸ್ಸು ನನ್ನನ್ನು ಚುಚ್ಚುತ್ತಿದೆ. ನಾನು ನಿನ್ನ ಚಿತ್ರವನ್ನು ಬರೆದು ಮುಗಿಸದಿದ್ದರೆ, ನನ್ನ ಗುರುಗಳ ಸ್ನೇಹಪೂರ್ಣ ಪಾಠವನ್ನು ಮರೆತು ಬಿಟ್ಟಂತೆಯೇ ಸರಿ.

ಜೀವನದಲ್ಲಿನ ಕಷ್ಟಗಳನ್ನು ಇದುರಿಸಿ ನಿನಗೆ ಗೊತ್ತು. ನಿನ್ನ ಪತಿಯ ನಿಂದನೀಯ ಮಾತು, ಹೊಡೆತಗಳನ್ನು ಸಹಿಸಿರುವೆ. ಏಕಾಗಿ? ಮಗುವಿಗಾಗಿ! ಅಂತಹ ಮಗುವನ್ನು ನೀನೆತ್ತಿಕೊಂಡು ಆಡಿಸುವ ವೇಳೆಯ ನಿನ್ನ ಮನದ ಸೌಮ್ಯ ಸುಖವನ್ನು ನಾನು ಚಿತ್ರಿಸಲಾರೆನೇ? ಹೇಳು—ಮಗುವಿನ ತಾಯೀ.

ಮುಗ್ಧ ಮೊಗವನ್ನು ಚಿತ್ರಿಸಬಲ್ಲೆ. ಆದರೆ ನಿನ್ನ ಮೊಗದ ಚಿತ್ರಣ ಅಸಾಧ್ಯ. ನಿಶ್ಚಯವಾಗಿಯೂ ಅಸಾಧ್ಯ......"

ಬರವಣಿಗೆ ನಿಂತಿತು.

ಕಳೆದ ದಿನಗಳ ಕನಸು—ರೂಪುಗಳು ಮನದೆದುರು ಬಂದು ನಿಲ್ಲತೊಡಗಿದುವು. ಅತೃಪ್ತಿ! ಅಸಂತೋಷ! ತಾನು ಇದುತನಕ ಬದುಕಿದುದೇ ಅಸ್ವಾಭಾವಿಕ ಎಂಬ ಯೋಚನೆ ಮೂಡಿತು.

ತೆಳ್ಳಗಿನ ಗಾಳಿ ಪರೆಯ ಸ್ಪರ್ಶವಾಯಿತು. ಪತ್ರಬರೆಯಲು ತೊಡಗಿದ್ದಾತ ಕಾಗದ ಪೆನ್ನುಗಳನ್ನು ಹಾಗೆಯೇ ತೆಗೆದಿರಿಸಿ ಹೊರ ತೆರಳಿದ.

— ೩ —

ಚಿತ್ರದಲ್ಲಿ ಮೂಡಿದ್ದ ಅವ್ಯಕ್ತ ತಾಯಿ ಹೊಗೆಯಂತೆ ಇಳಿದು ಬಂದಳು. ಅನಂತ ಬರೆದಿಟ್ಟಿದ್ದ ಪತ್ರಕಂಡಳು. ನಗು ತುಟಿಗಳೆಡೆಯಲ್ಲಿ ಮೂಡಿತು.

ಪತ್ರದ ಮೇಲೆ ತನ್ನ ಮೃದುಗೈಯನ್ನು ಎಳೆದಳು. ಮಗು ಕರೆಯಿತು. ಇಳಿದು ಬಂದಿದ್ದಾಕೆ ಹಿಂತಿರುಗಿ ಚಿತ್ರದಲ್ಲಿ ಐಕ್ಯಗೊಂಡಳು.

— ೪ —

ಬಹಳಷ್ಟು ಹೊತ್ತಿನ ಬಳಿಕ ಅನಂತ ಒಳಬಂದ. ಚಿತ್ರವನ್ನು ಕಂಡ. ಮೂಡಿದ್ದ ಉದ್ವೇಗ ಕೊಂಚ ಇಳಿದಿತ್ತು. ವಿದ್ಯುದ್ದೀಪವನ್ನು ಚಿತ್ರದ ಬಳಿಗೊಯ್ದ. ಬಿಳಿಯ ಬೆಳಕು ಚಿತ್ರದ ಮೇಲೆ ಚೆಲ್ಲಿತು. ತಾಯಿಯ ರೂಪು ಸ್ಪಷ್ಟವಾಗಿರಲಿಲ್ಲ.

ಎಳೆದು ತಂದಿದ್ದ ದೀಪದ ಕೈಬಿಟ್ಟ. ಅದು ತೂಗತೊಡಗಿತು. ದೀಪ ಸ್ವಸ್ಥಾನಕ್ಕೆ ಹಿಂತಿರುಗಿದೊಡನೆ ಅರೆಬರೆದಿಟ್ಟಿದ್ದ ಪತ್ರವನ್ನು ಕೈಗೆತ್ತಿಕೊಂಡು ಓದಿದ. ತಾನು ಯಾರಿಗಾಗಿ ಪತ್ರ ಬರೆಯುತಿದ್ದೇನೆಂದು ಆತಗೆಯೇ ತಿಳಿಯದು. ಹುಚ್ಚು ಮನಸ್ಸು. ಪುನಃ ಕಾಗದ ಬರೆಯಲು ತೊಡಗಿದ.

"ನೀನು ಅವ್ಯಕ್ತೆ. ನಿನ್ನ ಸಾಮಿಪ್ಯ ಚಿರನೂತನ. ಜೀವನವೆಂದರೆ ನೀನೇ. ಆದರೆ ಮನುಷ್ಯನ ಮನಸ್ಸು ಎಷ್ಟು ದುರ್ಬಲ ನೋಡು. ಆತಗೆ ತನ್ನ ಸಮೀಪವರ್ತಿಯ ಹೃದಯದ ತಿಳಿವೂ ಸಾಧ್ಯವಿಲ್ಲ; ಕಣ್ಣಿನ ಹೊಳಪಿನ ಚಿತ್ರಣ ಶಕ್ಯವಿಲ್ಲ. ಕೈಕಾಲುಗಳಲ್ಲಿ, ಮೈರೇಖೆ

ಗಳಲ್ಲಿ ಲಾಲಿತ್ಯವನ್ನು ಮೂಡಿಸಬಹುದಾದರೂ, ಮನಸ್ಸನ್ನು ಚಿತ್ರಿಸಲು ಸಾಧ್ಯವಿಲ್ಲ- ಕ್ಷಮಿಸು. ನಿನ್ನ ಚಿತ್ರ ಬರೆಯಲಾರೆ. ಈ ಪತ್ರವನ್ನು ಬರೆಯಲಾರೆ."

ಅಲುಗಾಡಿಕೊಂಡು ಮುಂದರಿಯುತಿದ್ದ ಕೈ ನಿಂತಿತು.

ಹಾಳು ಉದ್ವೇಗದ ಒತ್ತಡ ತಾಳಲಾರದೆ, ಕುಂಚ ತುಂಬಾ ಬಣ್ಣವನ್ನು ಎತ್ತಿಕೊಂಡು, ಚಿತ್ರದಲ್ಲಿದ್ದ ಮಗುವಿನ ಮೇಲೆ ಬಳಿದ. ರೂಪು ಕೆಟ್ಟಿತು. ಇಡಿಯ ಚಿತ್ರವನ್ನು ನಿಲುವೆಯಿಂದ ಎತ್ತಿ ಮೂಲೆಯಲ್ಲಿರಿಸಿದ—ಇಸಿಚೆಯರಿನಲ್ಲಿ ಬಿದ್ದ.

ದೇಗುಲದ ಘಂಟಾಸ್ವರ ಕೇಳಿಸುತ್ತಿರಲಿಲ್ಲ.

ಬಲು ದೂರದ ಕಡಲು ಕರೆಯುತಿತ್ತು!

— ೫ —

ಫೆಬ್ರವರಿ ತಿಂಗಳ ನಸು ಚಳಿ. ಅನಂತನ ಎಚ್ಚರವಾಗಿ ಹೊತ್ತು ಕಳೆದಿತ್ತು. ಮೇಲಕ್ಕೇಳುವ ಮನಸ್ಸಿರಲಿಲ್ಲ. ಕಿಟಕಿಯ ಕಂಬಿಗಳೆಡೆಯಿಂದ ಸೂರ್ಯನ ಸವಿ ಬೆಳಕು ಬಂದಿರಲಿಲ್ಲ.

ಹಿಂದಿನ ರಾತ್ರೆ ತಾನು ಬರೆದಿಟ್ಟಿದ್ದ ಪತ್ರವನ್ನು ಎಣಿಸಿದ. ಹೊದಿಕೆಯನ್ನು ಮೊಗದ ಮೇಲೆಳೆದುಕೊಂಡು, ಮಗ್ಗುಲು ಬದಲಿಸಿ ಯೋಚಿಸಿದ. ಹಿಂದಿನ ರಾತ್ರೆ ಅನಾಗರಿಕನಂತೆ ತಾನು ವರ್ತಿಸಿದುದು ತಪ್ಪಾಯಿತೆಂದು ತಿಳುವಿಗೆ ಬರಹತ್ತಿತು.

ಕಟ್ಟಿಕೊಂಡಿದ್ದ ಮುಸಿಬಲೆಯನ್ನು ತಲೆಯ ಬಳಿ ಮೇಲಕ್ಕೆ ಎತ್ತಿ, ಮೂಲೆಯಲ್ಲಿದ್ದ ಚಿತ್ರವನ್ನು ಕಂಡ. ಮಗುವಿನ ಚಿತ್ರದ ಮೇಲೆ ಹಲವಾರು ಬಣ್ಣಗಳ ಧಾಳಿಯಾಗಿತ್ತು. ತಾಯಿಯ ಚಿತ್ರ ಇನ್ನೂ ಮೂಡಿರಲಿಲ್ಲ. ತನ್ನ ಹಲವು ದಿನಗಳ ಶ್ರಮ ಬರಿದಾಯಿತು—ಎಂದು ತಿಳಿಯಿತು.

ಮುಸಿಬಲೆಯಿಂದ ಹೊರ ನುಸುಳಿ, ಮೇಜಿನ ಮೇಲೆ ಬರೆದಿಟ್ಟಿದ್ದ ಪತ್ರವನ್ನು ಎತ್ತಿಕೊಂಡು, ಮತ್ತೊಮ್ಮೆ ಹಾಸುಗೆಗೆ ಸೇರಿದ.

"ಈ ಚಿತ್ರದ ಮಗುವಿನ ತಾಯೇ", ಎಂಬ ಬರವಣಿಗೆ ಕಂಡು ನಗು ಬಂತು. ಮಗು ಇದ್ದರಲ್ಲವೇ ತಾಯಿಯ ಅಸ್ತಿತ್ವ? ಬರೆದಿದ್ದ

ಸಾಲುಗಳನ್ನು ಓದಿದ. ಏಕೋ—ಎಲ್ಲವೂ ಮಂಕಾಗಿ ಕಾಣಿಸಿತು. ಪತ್ರವನ್ನು ದಿಂಬಿನ ಬಳಿ ಇಟ್ಟು. ಬಳಿಯನ್ನು ನೋಡತೊಡಗಿದ

ಹಿಂದಿನ ರಾತ್ರೆ ಹುಣ್ಣಿಮೆ. ನಿನ್ನಿನ ಬೆಳದಿಂಗಳು ಈಗಿಲ್ಲ. ಇನ್ನು ಸ್ವಲ್ಪ ಹೊತ್ತಲ್ಲಿ ಸೂರ್ಯಪ್ರಕಾಶ ಬರಬಹುದು. ಇರುಳಿನ ಅಪ್ರಬುದ್ಧ ಮನೋದ್ವೇಗಗಳಿಗೆ ಬೆಳದಿಂಗಳು ಕಾರಣ ಎಂದೆನಿಸಿತು.

ಪತ್ರವನ್ನು ಬರೆದು ಮುಗಿಸಿ ಕಳುಹಿಸುವುದಾದರೂ ಯಾವ ತಾಯಿಗೆ? ಎಲ್ಲಿಗೆ? ಮನಸ್ಸು ಕೆಲವು ವರುಷಗಳ ಹಿಂದಿನ ಚಿತ್ರವನ್ನು ನೆನಪಿಗೆ ತಂದುಕೊಂಡಿತು.

ಅಂದು—

ಮುಂದಿನ ನಿಲುಗಡೆಯನ್ನು ನಿರ್ಧರಿಸಲಾರದೆ ಬಳಲುತ್ತಿದ್ದ ಪರಿಸ್ಥಿತಿಯಲ್ಲಿ ಅನಂತನಿದ್ದ. ಪ್ರೌಢ ವಿದ್ಯಾಭ್ಯಾಸ ಮುಗಿದಿತ್ತು. ತನ್ನ ಬಾಳನ್ನು ಚಿತ್ರಕಲೆಗಾಗಿ ಮೀಸಲಾಗಿಡಬೇಕೆಂಬ ಬಯಕೆ ಆಗ ಇದ್ದಿಲ್ಲವಾಗಿದ್ದರೂ, ನಾಲ್ಕು ಜನರು ತನ್ನ ಕೃತಿಯನ್ನು ಕಂಡು ವಿಮರ್ಶಿಸಬೇಕು—ಹೊಗಳಬೇಕು—ಎಂಬ ಆಶಯವಿದ್ದಿತ್ತು. ಇಂತಹ ತೊಡಕಿನ ಪರಿಸ್ಥಿತಿಯ ಸಮಯದಲ್ಲೇ ಅನಂತ ಮೊದಲಬಾರಿ ಆ ತಾಯಿಯನ್ನು ಕಂಡುದು. ಆದರೆ ಅಂದಾಕೆ ತಾಯಿಯಾಗಿರಲಿಲ್ಲ. ಕನ್ಯೆಯಾಗಿದ್ದಳು...

ನೆನಪು ಹಿತವೆನಿಸಲಿಲ್ಲ. ಮೇಲಕ್ಕೆದ್ದು ಹೊರತೆರಳಿ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬಂದ. ಅರೆ ಮುಗಿದಿದ್ದ ಪತ್ರವನ್ನು ಪುನಃ ಬರೆಯತೊಡಗಿದ.

'ಬಹಳಷ್ಟು ವರುಷಗಳ ಹಿಂದಲ್ಲಿ ನಾನು ನಿನ್ನನ್ನು ಪ್ರಥಮ ಬಾರಿ ಕಂಡುದುದು. ಅಂದು ನೀನು ತಾಯಿಯಾಗಿರಲಿಲ್ಲ. ಆದರೂ ಮುಂದಿನ ದಿನಗಳ ತಾಯ್ತನದ ಹೆಮ್ಮೆ ಆಗಲೂ ಕಣ್ಣಲ್ಲಿ ಮಿನುಗುತಿತ್ತು. ಈ ಊರಿನ ದೇಗುಲದಲ್ಲಿ ಉತ್ಸವ. ದೇವಸ್ಥಾನದ ಹೊರಬದಿಯಲ್ಲಿ ವಿಶಾಲವಾಗಿ ಹಬ್ಬಿಸಿದ್ದ ಚಪ್ಪರ ಒಂದರ ಮೂಲೆಯಲ್ಲಿ, ನೆಟ್ಟಿದ್ದ ಕಂಬವನ್ನು ಆತುಕೊಂಡು ನೀನು ನಿಂತಿದ್ದೆ. ಅಲ್ಲೇ ಉರಿಯುತಿದ್ದ ಪೆಟ್ರೋಮೇಕ್ಸ್ ದೀಪದ ಬೆಳಕು ನಿನ್ನ ಮೊಗದಮೇಲೆ ಚೆಲ್ಲಿತ್ತು. ನಿನ್ನ ದೇಹದ ರೇಖೆಗಳ ಲಾಲಿತ್ಯವನ್ನು ನಾನು ಅಂದು ಮೆಚ್ಚಿದ್ದೆನೋ

ಇಲ್ಲವೋ–ಇಂದೀಗ ನೆನಪಿಗೆ ಬರದು. ಆದರೂ ನಿನ್ನನ್ನು ಬಾರಿ ಬಾರಿಗೆ ನೋಡಿದ್ದೆ. ಅದೇ ಮೊದಲಬಾರಿ ನಾನು ನಿನ್ನನ್ನು ಕಂಡದ್ದು.

ಸ್ವಲ್ಪ ಹೊತ್ತಲ್ಲಿ ದೇವರು ಹೊರಸುತ್ತಿಗೆ ಬಂದರು. ದೇವರು ನಿನ್ನೆದುರಿಂದ ಹಾದುಹೋಗುವ ವೇಳೆ ಆದೆಂತಹ ಅನನ್ಯಮನಸ್ಕಳಾಗಿ ದ್ದಿಯೇ. ಕೈಗಳನ್ನು ಜೋಡಿಸಿದ್ದು, ಕಣ್ಣುಗಳನ್ನು ಅರೆ ಮುಚ್ಚಿದ್ದು, ತಲೆಯನ್ನು ಎದುರುಗಡೆ ಸ್ವಲ್ಪ ಬಾಗಿ ನಿನ್ನ ವಂದನೆಗಳನ್ನು ದೇವರಲ್ಲಿ ಸಲ್ಲಿಸಿದ್ದಿ.

ನಾನು ದೂರದಲ್ಲಿ ನಿಂತಿದ್ದು ಇವೆಲ್ಲವನ್ನು ನೋಡುತ್ತಿದ್ದೆ. ಉತ್ಸವದಂದು ನಿನಗಿಂತ ಚೆಲುವೆಯರು ಬಂದಿದ್ದರು. ಆದರೆ ನೀನು ಮಾತ್ರವೇಕೋ ನನ್ನ ಕಣ್ಣಿಗೆ ಬಿದ್ದಿದ್ದೆ.

ಇದೀಗ ಸುಮಾರು ಎಂಟು ವರುಷಗಳ ಹಿಂದಿನ ಮಾತು. ಎಷ್ಟೋ ಜಾತ್ರೆ ಉತ್ಸವಗಳಲ್ಲಿ ಭಾಗವಹಿಸಿರುವ ನಿನಗೆ ಈ ಘಟನೆಯ ನೆನಪಿರ ಲಾರದು. ನಿನ್ನಿಂದ ಸ್ವಲ್ಪ ದೂರದಲ್ಲಿ ಖಾಕೀ ಚಡ್ಡಿ, ಬಿಳಿಯ ಶರ್ಟು ಗಳನ್ನು ತೊಟ್ಟುಕೊಂಡಿದ್ದ ನನ್ನ ನೆನಪಿರಲಾರದು. ಅದಕ್ಕಾಗಿ ನನಗೆ ಬೇಸರವೂ ಇದ್ದಿರಲಿಲ್ಲ. ನಿನ್ನ ತಾಯ್ತನದ ಮನ ಅರಳುವ ಮುನ್ನ ಹೊಂದಿದ್ದ ಆ ನೋಟವನ್ನು ನಾನು ಮರೆಯುವಂತಿಲ್ಲ.

ಮುಖ ತೊಳೆದೊಡನೆ ಕುಡಿಯಬೇಕಾಗಿದ್ದ ಕಾಫಿಯನ್ನು ಕುಡಿ ದಾಗಿರಲಿಲ್ಲ. ಹಾಗಾಗಿ ಅನಂತನ ಕೈಬೆರಳುಗಳು ತುಸುವೇ ನಡುಗ ತೊಡಗಿದುವು–ಹಿಡಿತವನ್ನು ತಪ್ಪಿಸತೊಡಗಿದುವು.

ಕೋಣೆಯಿಂದ ಹೊರಬಂದ.

ಅಂಗಳಕ್ಕಿಳಿದ—

ಮುಂಜಾವಿನ ಎಳೆ ಬಿಸಿಲಲ್ಲಿ ನಾಲ್ಕಾರುಬಾರಿ ಅತ್ತಿತ್ತ ತಿರುಗಿದ. ಬಿಸಿ ಬೆಳಕಿನ ಪರಿಚಯವಾದೊಡನೆ ತಿರುಗಾಟ ಅಹಿತವೆನಿಸಿತು. ನೆಲ್ಲನೆ ಒಳ ತೆರಳಿ ಕಾಫಿಯನ್ನು ಸುರುವಿಕೊಂಡ. ಹಿಂದಿನ ರಾತ್ರೆ ತಾನು ಮಗುವಿನ ಚಿತ್ರಕ್ಕೆ ಬಣ್ಣ ಬಳಿದುದು ಆಯೋಗ್ಯವೆಂಬ ವಿಚಾರ ನೂರಾರು ಬಾರಿ ಮನದೊಳಗೆ ಪ್ರತಿಧ್ವನಿಸುತಿತ್ತು. ಆದರೆ ಅವನಾದರೂ ಏನು ಮಾಡಲು ಸಾಧ್ಯ?

ತನ್ನ ಕೋಣೆಯಲ್ಲಿ ಪ್ರವೇಶಿಸಿದರೆ ಈ ಎಲ್ಲಾ ತುಮುಲಗಳು ಇಲ್ಲ ವಾದರೆ ಇವುಗಳಿಲ್ಲ—ಸಂತುಷ್ಟನಾಗಿ ಇರಬಹುದು. ಸರಿ. ಮನಸ್ಸಿನ ಕಹಿ ಕಳೆಯಲು ಪೇಟೆಯ ಕಡೆಗೆ ಹೋಗೋಣ ಎಂದೆನಿಸಿತು. ಸ್ವಲ್ಪ ಹೊತ್ತಲ್ಲಿ ಪೇಟೆಯ ದಾರಿ ಹಿಡಿದೂ ಆಗಿತ್ತು.

— ೬ —

ಮುಂಜಾನೆಯಲ್ಲಿ ಅನಂತನನ್ನು ಪೇಟೆಯ ನಡುವೆ ಆತನ ಗೆಳೆಯರು ಕಾಣುವುದೆಂದಿರಲಿಲ್ಲ. ಶುದ್ಧ ಆಲಸಿ. ತಾನಾಯಿತು – ತನ್ನ ಕೊಠಡಿಯಾಯಿತು—ಎನ್ನುವಷ್ಟು ಸಂಕುಚಿತ ಮನೋಭಾವಿ. ಆತ ಮನೆ ಬಿಟ್ಟು ಹೊರ ಬರುವುದು ಸಂಜೆಯ ಹೊತ್ತಲ್ಲಿ ಮಾತ್ರ.

ಕೃಷ್ಣಪ್ಪನ ಅಂಗಡಿ ಬಾಗಿಲು ತೆರೆದಾಗಿತ್ತು. ಹಲಮಂದಿ ಕೊಳ್ಳುಗರು ಅಲ್ಲಿದ್ದರು. ಕೃಷ್ಣಪ್ಪ ಅವರಲ್ಲಿ ಹಿತವಾಗಿ ಮಾತನಾಡಿ, ಅವರವರ ಪೂರೈಕೆಗಳನ್ನು ತೆಗೆದಿತ್ತು, ಕಳುಹಿಸಿ ಕೊಡುತಿದ್ದ. ಅನಂತ ಬಂದುದನ್ನು ಕಂಡು ಆತನಿಗೆ ಆಶ್ಚರ್ಯ.

"ಇದೇನಾದರೂ ಸಂಜೆ ಎಂಬ ಭ್ರಮೆಯೋ ನಿನ್ನದು?" ಎಂದು ಅನಂತನನ್ನು ಹಾಸ್ಯಾಸ್ಪದವಾಗಿ ಕೆಣಕಿದ ಕೃಷ್ಣಪ್ಪ. ಒಗೆದಿದ್ದ ಶುಭ್ರವಾದ ಕುತ್ತಿಗೆ ಪಟ್ಟಿ ಇಲ್ಲದ ಶರ್ಟು ತೊಟ್ಟು, ಅಷ್ಟೇ ಬಿಳುಪಾದ ಬಟ್ಟೆಯನ್ನು ಅಡ್ಡವಾಗಿ ಉಟ್ಟಿದ್ದ ಕೃಷ್ಣಪ್ಪನ ಅಗಲವಾದ ಹಣೆಯಲ್ಲಿ ಓಡಾಟದಿಂದ ಮೂಡಿದ್ದ ನಾಲ್ಕಾರು ಬೆವರ ಹನಿಗಳು ಸೊಗಸಾಗಿ ಕಂಡುವು ಅನಂತನಿಗೆ. ಆ ಶುಭ್ರ ಕಣ್ಣುಗಳು, ನಯವಾದ ಗಲ್ಲ—ತುಂಬು ಕೂದಲು—ಯಾವಾಗಲೂ ನಗುತ್ತಿರುವಂತೆ ಭಾಸವಾಗುವ ತುಟಿಗಳು, ಅತಿ ಒರಟಾಗಿ ಕಾಣಿಸದಿದ್ದ ಕೈಗಳು. ಕೃಷ್ಣಪ್ಪನನ್ನು ನೋಡುತ್ತ ಚಕಾರವನ್ನೆತ್ತದೆ ಎಂದಿನಂತೆ ಅಲ್ಲೇ ಇದ್ದ ಸ್ಟೂಲಿನಲ್ಲಿ ಕುಳಿತ. ಕೃಷ್ಣಪ್ಪನಿಗೆ ಅನಂತನ ಒಳ ಮನಸ್ಸಿನ ಹೊಯ್ದಾಟಗಳ ಅರಿವಾಗಿರಬೇಕು. ಕೊಳ್ಳುಗರೆಲ್ಲರು ಹೋದ ಬಳಿಕ, ಕೊಳೆ ತುಂಬಿದ ಕೈಗಳನ್ನು ತಂಬಿಗೆಯ ನೀರಲ್ಲಿ ಮುಳುಗಿಸಿ ತೊಳೆದು, ಕರಿಬಟ್ಟೆಯೊಂದಕ್ಕೆ ಒರಸುತ್ತ ಅನಂತನ ಬಳಿ ಬಂದು ಕುಳಿತ. ಅನಂತನ ವಿಮುಖತೆ ಇನ್ನೂ ಕಳೆದಿರಲಿಲ್ಲ.

“ಕಾಫಿಗೆ ಹೇಳಲೇ?”

“ಬೇಡ, ಈಗ ತಾನೇ ಮುಗಿಸಿ ಬಂದೆ.”

“ಚಿಂತೆಯೇ?”

“ಚಿಂತಿಸಿ ಫಲವಿಲ್ಲ”

ತಮ್ಮಿಬ್ಬರ ಚುಟುಕು ಮಾತುಗಳ ಸಂವಿಧಾನ ಕಂಡು ಕೃಷ್ಣಪ್ಪನಿಗೆ ನಗು ಬಂತು. ಅನಂತ ಉಳಿದವರಂತಲ್ಲ. ಬಾಯಿ ತುಂಬಾ ಮಾತನಾಡುವವ.

ಭಿಕ್ಷುಕಳೊಬ್ಬಳು ಅಕ್ಕಿ ಕೊಳ್ಳಲೆಂದು ಬಂದಳು. ಅನಂತನ ಕಣ್ಣಿಗೆ ಆಕೆಯ ಸೊಂಟದಲ್ಲಿದ್ದ ಮಗು ಕಾಣಿಸಿತು. ಕೃಷ್ಣಪ್ಪನೊಡನೆ ಏನೋ ಕಿವಿ ಮಾತು ಹೇಳಿದ. ಆಕೆ ಅಕ್ಕಿಯ ಬೆಲೆ ಕೇಳಲು ತೊಡಗಿದಳು.

ಕೃಷ್ಣಪ್ಪನೊಡನೆ ಆಕೆಯ ಚರ್ಚೆ ಬೆಳೆಯಿತು.

ಅನಂತ ಅಲ್ಲೇ ಇದ್ದ ಮೇಜಿನೊಳಗಿಂದ ಬಿಳಿ ಕಾಗದವನ್ನೂ, ಮೇಜಿನ ಮೇಲಿನ ಪೆನ್ಸಿಲನ್ನೂ ಕೈಗೆತ್ತಿಕೊಂಡು, ಆ ತಾಯಿ ಮಕ್ಕಳ ರೇಖಾ ಚಿತ್ರ ಬಿಡಿಸಿದ. ಮಗು ತುಂಬಿ ಕೊಂಡಿತ್ತು. ಅದರ ಕರಿಮೈ ಭಿಕ್ಷುಕಳ ಹಳೆಯ ಮಾಸಿದ ನಸು ಕಂದು ಬಣ್ಣದ ವಸ್ತ್ರದ ಹಿನ್ನಲೆಯಲ್ಲಿ ಸೊಗಸಾಗಿ ಕಾಣಿಸುತಿತ್ತು

ಅವರಿಬ್ಬರ ಚರ್ಚೆ ಮುಗಿದಿರಲಿಲ್ಲ.

“ಎರಡು ಪಾವಾಣೆ ಕಡಿಮೆಯಾದರೆ ಏನು ಕೆಟ್ಟೊ? ಅಕ್ಕಿ ಕೊಟ್ಟುಬಿಡು” ಎಂದ ಅನಂತ ಚಿತ್ರ ಮುಗಿಸಿ ಗೆಳೆಯನ ಮಾತಿನತ್ತ ವಿಶೇಷ ಗಮನ ಕೊಡದೆ ಕೃಷ್ಣಪ್ಪ ಅಕ್ಕಿ ಅಳೆದು ಕೊಟ್ಟು, ಆಕೆ ಕೊಟ್ಟ ಪಾವಾಣೆ ಪೈಗಳನ್ನು ಎತ್ತಿಕೊಂಡು ಎಣಿಸತೊಡಗಿದ. ಆಕೆ ಹೊರಟು ಹೋದಳು

‘ನಾನು ಮನೆಗೆ ಹೋಗುತ್ತೇನೆ”, ಎಂದವನೇ ರೇಖಾಚಿತ್ರದ ಕಾಗದವನ್ನು ಮಡಚಿಕೊಂಡು ಕೆಳಗಿಳಿದ. ಕೃಷ್ಣಪ್ಪ “ಸಂಜೆಗೆ ಬಾ” ಎಂದಾತನನ್ನು ಕರೆಯಲು ಮರೆಯಲಿಲ್ಲ.

ಮನೆ ಮುಟ್ಟಿದವನೇ ಕೋಣೆಯೊಳಗೆ ಹೊಕ್ಕ. ಹೊಸ ತುಂಡು ಕೆನ್‌ವಾಸ್ ಹುಡುಕಿ, ಹಲಗೆಗೆ ಚುಚ್ಚಿ, ನಿಲುವಿಗೆ ಏರಿಸಿದ.

ರೇಖೆಯ ಬಳಿಕ ಬಣ್ಣಕ್ಕೆ ತೊಡಗಿದುವು ಕೈಗಳು.

— ೭ —

ಹೊತ್ತು ಹೊತ್ತಿನ ಊಟ ತಿಂಡಿಗಳ ಕಡೆಗೆ ಅನಂತನ ಗಮನ ಸಾಲದಾಯಿತು ಆತನ ಅಕ್ಕ ಹಲವು ಬಾರಿ ಕರೆದಳು. ಆಕೆಗೆ ಆತನ ಈ ತರದ ವಿಚಿತ್ರ ಮನೋವೃತ್ತಿಯ ನಿಕಟ ಪರಿಚಯವಿತ್ತು. ಹಾಗಾಗಿ ವಿಶೇಷ ಒತ್ತಾಸೆಗೂ ತೆರಳಲಿಲ್ಲ. ಕಾಫಿ ಮಾತ್ರ ಆಗೊಮ್ಮೆ ಈಗೊಮ್ಮೆ ಆತನ ಕೋಣೆಗೆ ಹೋಗಬೇಕಿತ್ತು

ಕತ್ತಲು ತೊಡಗಿತು.

ಅವನ ಕೈಗಳು ಸೋತಿದ್ದುವು. ಅದಕ್ಕೂ ಮಿಗಿಲಾಗಿ ಮನಸ್ಸು ಆಯಾಸಗೊಂಡಿತ್ತು. ಬಣ್ಣದ ತಟ್ಟೆ—ಕುಂಚಗಳನ್ನು ಮೇಜಿನ ಮೇಲೊಗೆದ. ಕುಂಚದಲ್ಲಿನ ಕೆಲವು ಬಣ್ಣಗಳ ಸಿಂಚನ ಆತನ ಅಪೂರ್ಣ ಚಿತ್ರದ ಮೇಲಾಯಿತು. ಅನಂತ ಒಮ್ಮಿಂದೊಮ್ಮೆ ಪತ್ರ ವನ್ನು ಎಣಿಸಿದ.

ಮನಸ್ಸನ್ನು ಚುಚ್ಚಲೆಂದು ಸಾವಿರಾರು ವಸ್ತು-ವಿಚಾರಗಳು ವ್ಯಕ್ತಿಯ ಸುತ್ತಲಲ್ಲಿ ಹೊಂಚುತ್ತಿರುತ್ತವೆ ಎಂದು ತೋಚಿತು. ಅದು ತನಕದ ಏಕಾಗ್ರ ಮನಸ್ಸಿಗೆ ಬೇರೇನೋ ಅನಿಸಿತು. ಪತ್ರವನ್ನು ಪೂರ್ಣಗೊಳಿಸಲೇ ಬೇಕೆಂದು ನಿಶ್ಚಯಿಸಿದ.

ಹುಣ್ಣಿಮೆಯ ಮರುದಿನ.

ಚಂದ್ರ ಇಂದು ಮೂಡಿರಲಿಲ್ಲ.

ಕೋಣೆಯ ದೀಪವನ್ನು ಉರಿಸಿ, ಪತ್ರದ ಮೇಲೆ ಒಗೆದಿದ್ದ ಕುಂಚ ಗಳನ್ನು ಸರಿಸಿ, ಮತ್ತೊಮ್ಮೆ ಬರೆಯತೊಡಗಿದ.

"ನಿನ್ನನ್ನು ಇದುತನಕ ನಾನು ಕಂಡುದುದು ಕೆಲವೇ ಬಾರಿ. ವ್ಯಕ್ತಿಗತ ಪರಿಣಾಮ ನಿನ್ನನ್ನು ನೋಡಿದ ನನ್ನನ್ನು ನೋಡಿದರೆ ತಿಳಿದೀತು. ನಾನು ನಿನ್ನನ್ನು ನಿರೀಕ್ಷಿಸಿದ್ದು ಹತ್ತು ಬಾರಿಯಾದರೆ, ನೀನು

ನನ್ನನ್ನು ನೋಡಿದ್ದು ನಾಲ್ಕೇ ಬಾರಿ. ಚಿತ್ರಗಾರನೊಬ್ಬನ ಬಾಳಿನ ಕುರಿತಾಗಿ ನಿನಗೆ ಅಭಿಮಾನ ಇರಲಾರದು. ಅವನ ವೈಯುಕ್ತಿಕ ಜೀವನದ ಕಡೆ ನಿನ್ನದು ನಿಸ್ಸಾರ ನೋಟವಾಗಿರಬಹದು. ಅದಾವುದನ್ನೂ ನಾನೀಗ ಎಣಿಸುತ್ತಿಲ್ಲ. ಜಾತ್ರೆಯ ಸಮಯ ನಿನ್ನನ್ನು ನಾನು ಬೇಕೆಂಬಷ್ಟು ಬಾರಿ ನೋಡಿದೆ. ಆದರೆ ನೀನು ಮಾತ್ರ ನನ್ನೆಡೆಗೆ ದೃಷ್ಟಿಹರಿಸಲಿಲ್ಲ. ಅಂದು ನೀನು ಬೆಳೆದಾಕೆ–ಗಂಡುಸಿನ ಪ್ರೀತಿಗೆ ಆಕರ್ಷಣೀಯ ಪ್ರತಿಫಲವನ್ನು ಕೊಡಬಲ್ಲಾಕೆ ಆಗಿದ್ದಿ. ನಾನಾದರೋ ಅಂತಲ್ಲ. ಕೇವಲ ಹುಡುಗ. ಖಾಕಿ ಚಡ್ಡಿ, ಬಿಳಿ ಶರ್ಟುಗಳ ನನ್ನಲ್ಲಿ ನೀನು ಔಚಿತ್ಯವನ್ನು ಕಾಣದಿದ್ದುದು ಸ್ವಾಭಾವಿಕವೇ ನಿನ್ನ ಕಣ್ಣು, ಎದೆ, ದೇಹಗಳನ್ನು ನನಗಿಂತ ಹಸಿದ ಕಣ್ಣುಗಳು ನೋಡುತಿದ್ದಾಗ, ಬರಿಯ ಲಾಲಿತ್ಯಮಯ ರೇಖೆಗಳನ್ನು ನೋಡಿ ಮೆಚ್ಚುತಿದ್ದ ನನ್ನೆಡೆಗೆ ನಿನ್ನ ದೃಷ್ಟಿ ಬೀಳಲಿಲ್ಲ. ಮನುಷ್ಯ ಸಹಜವದು.

ಪ್ರೀತಿಯ ಪರಿಚಯ ನನಗಿದ್ದಿರಲಿಲ್ಲ. ಗಂಡು ಹೆಣ್ಣುಗಳೊಳಗನ ಅವಶ್ಯ ಆಕರ್ಷಣೆಗಳ ಅನುಭವ ಸೊನ್ನೆಯಾಗಿತ್ತು. ಹಾಗಾಗಿ ನಿನ್ನನ್ನು ಅಂದು ನಾನು ಕಂಡುದುದು ಬರಿಯ ರೇಖಾಲಾಲಿತ್ಯದ ದೃಷ್ಟಿಯಿಂದಲೇ ಇರಬಹುದೋ ಏನೋ.

ನನ್ನ ಈ ಮಾತು ನಿನಗೆ ನಗಲು ಆಸ್ಪದವಾಡಿಕೊಟ್ಟೀತು. ಹದಿನಾರು, ಹದಿನೇಳರ ಹುಡುಗನಿಗೆ ಹೆಣ್ಣು ಗಂಡುಗಳ ಆಕರ್ಷಣೆಯ ಕುರಿತು ತಿಳಿದಿರಲಾರದೇ ಎಂದು ನೀನೆಣಿಸಬಹುದು. ಹುಡುಗರಾದ ನಮ್ಮ ಬೆಳವಣಿಗೆಗೂ, ಹುಡುಗಿಯರಾದ ನಿಮ್ಮ ಬೆಳವಣಿಗೆಗೂ ಇರುವ ಅಂತರ ಇದೇ........"

ಹೊರಗಿನಿಂದ ಕೃಷ್ಣಪ್ಪ ಕರೆದ.

ಬರವಣಿಗೆ ನಿಂತಿತು. ಕೃಷ್ಣಪ್ಪನ ಕಣ್ಣಿಗೆ ಪತ್ರ ಬೀಳಬಾರದೆಂದು ಅದನ್ನು ಅಲ್ಲೇ ಹುದುಗಿಸಿಟ್ಟ.

"ಏನು, ಇವತ್ತು ಇಡಿಯ ದಿನ ಕೋಶಾವಸ್ಥೆಯೇ?" ಎನ್ನುತ್ತಾ ಒಳಬಂದ ಕೃಷ್ಣಪ್ಪ. ಆತನ ಬೆನ್ನು ತಟ್ಟಿದ. ಅನಂತನ ನಟನೆಗೆ ತೊಡಗಿತು. ತೊದಲುತ್ತಾ ಏನೋ ಅಂದು.

"ಎಲ್ಲಾದರೂ ಹೋಗೋಣ, ಬರುತ್ತಿಯಾ?"

ಅನಂತ ಕಿಟಿಕಿಯ ಹೊರಕಂಡ. ಪೂರ್ಣಿಮೆಯ ಮರುದಿನದ ಚಂದ್ರ ದೂರದ ತೆಂಗು--ಗಾಳಿ ಮರಗಳೆಡೆಯಲ್ಲಿ ಸಿಲುಕಿದ್ದ.

"ಹ್ಞೂಂ"

ಇಬ್ಬರೂ ಹೊರಟರು. ಅಂಗಳಕ್ಕೆ ಇಳಿಯುವ ವೇಳೆ ಅಕ್ಕ ಊಟದ ನೆನಪು ಕೊಟ್ಟಳು. ಕೃಷ್ಣಪ್ಪ ಊಟ ತೀರಿಸಿ ಬಾ ಎಂದು ಒತ್ತಾಯಿಸಿದ. ಆದರೆ ಅನಂತ ಉಣ್ಣುವ ಸ್ಥಿತಿಯಲ್ಲಿರಲಿಲ್ಲ.

"ಬೆಳಗಿನಿಂದಲೂ...."

ಕೃಷ್ಣಪ್ಪ ಮಾತಿಗೆ ತೊಡಗಿದಾಗಲೇ ಅನಂತ ಕುಸಿದ. ಕೂಡಲೇ ಕೃಷ್ಣಪ್ಪ ಆಧರಿಸಿ ಹಿಡಿದ.

"ಏನಾಯಿತು ಅನಂತಾ?"

"ಏನಿಲ್ಲ...", ಎಂದು ಸ್ವಲ್ಪಹೊತ್ತು ಹಾಗೆಯೇ ನಿಂತಿದ್ದು, ಅನಂತ ಮುಂದರಿದ. ಹೋಟೇಲಿನಲ್ಲಿ ಬೇಕೆಂಬಷ್ಟನ್ನು ತಿಂದ. ಬೇಕಷ್ಟು ಕಾಫಿ ಕುಡಿದ. ಇಬ್ಬರೂ ತಿರುಗಾಟದ ಮೊದಲನೆ ಹಂತದಲ್ಲಿದ್ದರು.

"ನೀನು ಏಕಾಗಿ ಹೀಗಿರುವಿ?"

"ನನಗೆಯೇ ತಿಳಿದಿಲ್ಲ."

"ನೋಡು ಅನಂತಾ, ನಿನ್ನ ಆರೋಗ್ಯ ಚೆನ್ನಾಗಿಲ್ಲ. ನೀನು ಮನಸ್ಸಿಗೆ ಈ ಬಗೆಯ ಯೋಚನೆಗಳನ್ನು ಹಚ್ಚಿಕೊಳ್ಳಬಾರದು. ತಿಳಿಯಿತೇ?"

ಅನಂತ ಸುಮ್ಮಗಿದ್ದ.

ಇಬ್ಬರೂ ಮೈದಾನಿನ ಒಣಗಿದ ಕುರುಚಲು ಹುಲ್ಲಿನ ಮೇಲೆ ಕುಳಿತಬಳಿಕ ಅನಂತ ಮೆಲ್ಲನೆ ನುಡಿದ "ಹೌದು ಕಿಟ್ಟೂ, ನನ್ನಂತಹ ಕ್ಷಯರೋಗಿ ಈ ರೀತಿಯಾಗಿ ಯೋಚಿಸಬಾರದು. ಆದರೆ ನಾನು ಬದುಕಿರುವುದಾದರೂ ಏಕೆ?"

— ೮ —

ಕೃಷ್ಣಪ್ಪನಿಗೆ ಅನಂತನ ಮಾತು ಕಹಿಯಾಗಿ ಕೇಳಿಸಿತು. ಅವರಿಬ್ಬರು ಚಿಕ್ಕಂದಿನಿಂದ ಗೆಳೆಯರು. ಕೃಷ್ಣಪ್ಪ ಪ್ರಾಯಪ್ರಬುದ್ಧ

ನಾಗುವ ಮೊದಲೇ ತಂದೆಯನ್ನು ಕಳೆದುಕೊಂಡಿದ್ದ. ಪರಿಣಾಮವಾಗಿ ವಿದ್ಯಾಭ್ಯಾಸವನ್ನು ಅಲ್ಲೇ ನಿಲ್ಲಿಸಿದ್ದ. ತಂದೆಯ ವೃತ್ತಿಯಾದ ವ್ಯಾಪಾರಕ್ಕೆ ತೊಡಗಿದ್ದ. ಅನಂತನ ಓದು ಪ್ರೌಢಶಾಲೆಯ ತನಕ ಮುಂದರಿದಿತ್ತು. ಅದರ ಬಳಿಕ ಮನೆಯವರ ಅಸಮಾಧಾನದ ಮನೋಭಾವದ ಎದುರು ಹೋರಾಡಿ, ಮದ್ರಾಸಿನ ಕಲಾಶಾಲೆಯಲ್ಲಿ ಐದು ವರ್ಷಗಳ ವಿದ್ಯಾಭ್ಯಾಸವನ್ನು ನಾಲ್ಕು ವರ್ಷಗಳಲ್ಲಿ ಮುಗಿಸಿ ಮನೆಗೆ ಹಿಂತಿರುಗಿದ್ದ. ಮದ್ರಾಸಿಗೆ ಹೋಗುವ ಮೊದಲು ಆತ ನಿರೋಗಿಯಾಗಿದ್ದ. ಅಲ್ಲಿಂದ ಹಿಂತಿರುಗುವ ವೇಳೆ ಕ್ಷಯರೋಗಿ. ತನ್ನ ಜೀವನದ ದುರಂತ ಗೀತಕ್ಕೆ ಆತ ದಿನವೂ ತಲೆದೂಗುವುದೆಂದಿತ್ತು. ಆತ ರೋಗಿಯಾದುದರಿಂದಲೋ ಏನೋ— ಮನೆಯವರ ಆರೈಕೆ ಬಹಳವಿತ್ತು.

"ನೋಡು ಅನಂತಾ, ನೀನು ರೋಗಿ ರೋಗಿ ಎಂದು ಯೋಚಿಸಿ ನರಳುವುದು ಹಿತವಲ್ಲ. ಲೋಕದಲ್ಲಿ ರೋಗದ ಹೊರತಾಗಿ ಇರುವವರು ವಿರಳ. ಆದರೆ ಎಲ್ಲರೂ ನಿನ್ನಂತೆ ತಮ್ಮ ರೋಗವನ್ನು ಮನಸ್ಸಿಗೆ ಹಚ್ಚಿಕೊಂಡಿರುವರೇ? ಇಲ್ಲ. ರೋಗಿಯಾದವನು ನಿರೋಗಿಯಂತೆ ಬದುಕಬೇಕು."

ಅನಂತ ಬೆರಳಿಗೆ ಸಿಗುತಿದ್ದ ಒಣ ಹುಲ್ಲನ್ನು ಕೀಳುತಿದ್ದ. ಕೃಷ್ಣಪ್ಪನ ಮಾತಿಗೆ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ.

"ನಾನೆಂದುದು ತಿಳಿಯಿತೇ?"

"ತಿಳಿಯಿತು ಕಿಟ್ಟೂ. ನಾನು ರೋಗಿ—ಎಂದು ಬೇಸರಿಸುತ್ತಿರುವೆನೇ? ಇಲ್ಲ. ನನ್ನ ಬೇಸರ ಬೇರೆಯೇ ಬಗೆಯಾದುದು."

"ಬೇರೆ? ಹೇಗೆ?"

"ನನ್ನ ಮನಸ್ಸಿನ ಭಾವನೆಗಳನ್ನು ಚಿತ್ರಿಸಲು ನನಗೆಯೇ ಅಸಾಧ್ಯವಾಗುತ್ತಿರುವುದನ್ನು ಕಂಡು ಬೇಸರವಾಗುತ್ತದೆ. ಕ್ಷಯವಾದರೂ ಚಿಂತಿಲ್ಲ. ಈ ಬಗೆಯ ಮನಸ್ಸಿನ ದಳ್ಳುರಿಯನ್ನು ಅಮುದಿಕ್ಕಲು ನನ್ನಿಂದ ಸಾಧ್ಯವಿಲ್ಲ."

ಚಿತ್ರ ಮತ್ತು ಕೃಷ್ಣಪ್ಪ!

ಕೃಷ್ಣಪ್ಪನಿಗೆ ಚಿತ್ರವೆಂದರೆ ಏನೆಂದು ತಿಳಿಯದು. ತನ್ನ ಮನಸ್ಸಿನ ಭಾವನೆಗಳನ್ನು ರೇಖೆ ಬಣ್ಣಗಳ ಮೂಲಕ ಕಲಾವಿದ ಚಿತ್ರಿಸಲು ಪಡುವ ಶ್ರಮದ ಹಿನ್ನಲೆ ಅವನಿಗೆ ಅವೇದ್ಯ. ಬಹಳಷ್ಟು ಹೊತ್ತು ಇಬ್ಬರೂ ಸುಮ್ಮನಿದ್ದರು.

"ನಾನೊಂದು ತಾಯಿ ಮಗು ಚಿತ್ರವನ್ನು ಬಿಡಿಸಿದುದನ್ನು ನೀನು ನೋಡಿರುವಿಯಲ್ಲಾ........"

"ಹೌದು, ಅದರಲ್ಲಿ ತಾಯಿಯ ಚಿತ್ರ ಆಗಿರಲಿಲ್ಲ. ಅದು ಪೂರ್ಣವಾಯಿತೇ?"

"ಇಲ್ಲ."

"ಎಂದಿಗಾಗುತ್ತದೆ?"

"ಅದನ್ನು ಹಾಳುಮಾಡಿಬಿಟ್ಟೆ."

"ಏನು? ನಿನ್ನ ಮನಸ್ಸಿಗೆ ನೆಮ್ಮದಿ ಇಲ್ಲವೆಂದು ಈಗ ಸಂಪೂರ್ಣ ತಿಳಿಯಿತು. ಇಲ್ಲವಾದರೆ ಪ್ರಯತ್ನಪಟ್ಟು ಬಿಡಿಸಿದ ಚಿತ್ರವನ್ನು ಯಾರಾದರೂ ಹಾಳು ಮಾಡಿಯಾರೇ?"

ಅನಂತ ನಿರುತ್ತರಿ.

"ಮನೆಯ ಕಡೆಗೆ ಹೋಗೋಣ ಕಿಟ್ಟೂ. ಅಲ್ಲಿ ನಿನಗೊಂದು ಪತ್ರ ತೋರಿಸುತ್ತೇನೆ", ಎಂದವನೇ ಅನಂತ ಮೇಲಕ್ಕೆದ್ದ. ಕೃಷ್ಣಪ್ಪ ಅವನ ಜೊತೆ ಸೇರಿ ಮನೆಯ ತನಕ ಬಂದ. ಗೇಟಿನ ಸಮೀಪ ಬಂದೊಡನೆ ಅನಂತ ತಟಕ್ಕನೆ ನಿಂತು ಬಿಟ್ಟು ಹೇಳಿದ.

"ಆ ಪತ್ರವನ್ನು ನಿನಗೀಗ ತೋರಿಸಲಾರೆ. ಇನ್ನೊಂದು ದಿನ, ಅದರ ಬರವಣಿಗೆ ಮುಗಿದ ಮೇಲೆ ಓದಲು ಕೊಡುತ್ತೇನೆ"

ಕೃಷ್ಣಪ್ಪನಿಗೆ ಅನಂತನ ವರ್ತನೆ ಸಂಶಯಾಸ್ಪದವಾಗಿ ಕಂಡಿತು. ಹೊರ ತೋರಗೊಡದೆ, ಅನಂತನೊಡನೆ ಕೋಣೆಯೊಳಗೆ ಹೊಕ್ಕಿದ.

ಮೇಜಿನ ಮೇಲೆ ಹುದುಗಿಸಿಟ್ಟಿದ್ದ ಪತ್ರವನ್ನು ಛಕ್ಕನೆ ಅಲ್ಲಿಂದೆತ್ತಿ, ಮಡಚಿ, ತನ್ನ ಕಿಸೆಯೊಳಗೆ ತುಂಬಿಕೊಂಡ ಅನಂತ. ಕೃಷ್ಣಪ್ಪ ಅನಂತನನ್ನು ನೋಡುತ್ತಾ ಕುರ್ಚಿಯಲ್ಲಿ ಕುಳಿತ. ಕೆಲವು ಹೊತ್ತಿನ ಬಳಿಕ

ಅನಂತ ವಿದ್ಯುದ್ದೀಪ ಬೆಳಗಿದ. ಹೊಸತಾಗಿ ನಿಂತಿದ್ದ ತಾಯಿ ಮಗು ಚಿತ್ರವನ್ನು ಆಗ ಕಂಡ ಕೃಷ್ಣಪ್ಪ.

"ಹೊಸತೇ?"

"ಅಲ್ಲ. ಅದೇ ವಸ್ತುವನ್ನು ಬೇರೆ ಬೇರೆ ವಿಧವಾಗಿ ಚಿತ್ರಿಸಲು ಪ್ರಯತ್ನಿಸುತ್ತಿರುವೆನಷ್ಟೇ. ಒಂದಲ್ಲ ಒಂದು ದಿನ ನನ್ನ ಶ್ರಮ ಏಕೆ ಫಲ ಕಾರಿಯಾಗಬಾರದು........?" ಎಂದು ಹೇಳುತಿದ್ದಂತೆ ಮಾತು ನಿಲ್ಲಿಸಿದ. ತನ್ನ ಮನದಲ್ಲಿ ಮೂಡಿದ್ದ ಆಶಾವಾದಿತ್ವ ಕಂಡು ಆತನಿಗೆಯೇ ಆಶ್ಚರ್ಯ.

"ನಿಶ್ಚಯವಾಗಿಯೂ" ಎಂದ ಕೃಷ್ಣಪ್ಪ.

— ೯ —

ರಾತ್ರಿಯ ಊಟ ಅನಂತನಿಗೆ ಬೇಡವೆನಿಸಿತು ಅವನ ಅಕ್ಕ ತನ್ನ ಮಮತೆಯನ್ನು ಬಿಚ್ಚಿಟ್ಟು, ಒಂದಿಷ್ಟು ಕಠು ಮಾತುಗಳನ್ನು ಹೇಳಬೇಕಾಯಿತು. ತಾಯಿ-ತಂದೆಗಳಿಲ್ಲದಾತ ಎಂಬ ಪ್ರೀತಿ ಆಕೆಗೆ. ಮೇಲಾಗಿ ರೋಗಿ ಎಂಬ ಕನಿಕರ.

ಮನಸ್ಸಿಲ್ಲದ ಮನಸ್ಸಿನಿಂದ ಊಟ ತೀರಿಸಿದ. ಸಂಜೆಗೆ ಕುಡಿದಿದ್ದ ಕಾಫಿಯ ಪರಿಣಾಮವಾಗಿ ದಿನವೂ ಹತ್ತುತಿದ್ದ ನಿದ್ದೆ ಅಂದು ಹೊತ್ತಿಗೆ ಬರಲಿಲ್ಲ. ಕೋಣೆಯ ದೀಪವನ್ನು ಬೆಳಗದೆ ಹಾಗೆಯೇ ಕುಳಿತ. ಸ್ವಲ್ಪ ಹೊತ್ತಲ್ಲಿ ಬೆಳಗ್ಗಿನಿಂದ ಚಿತ್ರಿಸುತಿದ್ದ ಹೊಸ ತಾಯಿ ಮಗು ಚಿತ್ರವನ್ನು ಕಿಟಕಿಯಿಂದ ತೂರಿ ಬರುತಿದ್ದ ಬೆಳದಿಂಗಳ ಎದುರಿಟ್ಟು ದೃಷ್ಟಿಸ ತೊಡಗಿದ. ಚಿತ್ರದಲ್ಲಿದ್ದ ಭಿಕ್ಷುಕಿ ಅಲುಗಿದಂತಾಯಿತು. ಇವನತ್ತ ಮೊಗ ತಿರುವಿದಳು. ಆಕೆಯ ತೋಳನ್ನು ಏರಿದ್ದ ಮಗು ಮುಗ್ಧ ನಗು ಚೆಲ್ಲಿತು.

"ನೀನೊಬ್ಬ ಹುಚ್ಚನಿರಬೇಕು. ನನ್ನಲ್ಲಿ ನಿನ್ನ ಕಲಾತ್ಮಕ ಕಣ್ಣಿಗೆ ಕಾಣಿಸುವ ಚೆಲುವಾದರೂ ಏನಿದೆ? ನಾನು ಕೊಳಕು ಜೀವಿ. ನಿನಗೆ ಬೇಕಾಗುವ ಲಾಲಿತ್ಯ ಪೂರ್ಣ ರೇಖೆಗಳಾಗಲೀ, ಉಬ್ಬಿದ ಮಾಂಸ ಖಂಡಗಳಾಗಲೀ, ಮೃದುವಾದ ಬಣ್ಣವಾಗಲೀ ನನ್ನಲ್ಲಿಲ್ಲ. ನನ್ನ ಮಗು

ಚೆನ್ನಾಗಿದೆ ನಿಜ. ಅದರ ಚಿತ್ರವನ್ನು ಮಾತ್ರ ನೀನು ಚಿತ್ರಿಸಬಹುದಿತ್ತು."

ಅನಂತ ಬಾಯ್ತೆರೆದು ಕೇಳುತಿದ್ದ.

"ನೋಡು, ನೀನು ದೂರವಿಟ್ಟ ಚಿತ್ರದ ಹೆಂಗುಸು ನನಗಿಂತ ಚೆಲುವೆಯಾಗಿರಬಹುದು. ಅವಳ ಮೊಗವನ್ನು ನೀನು ಚಿತ್ರಿಸಿಲ್ಲ. ಚಿಂತಿಲ್ಲ. ಪ್ರಯತ್ನಿಸು. ನಿನ್ನಿಂದ ಚಿತ್ರಿಸಲು ಸಾಧ್ಯ. ಪಾಪ. ಅವಳ ಮಗು ನಿನಗೆ ಮಾಡಿದ ಅಪಚಾರವಾದರೂ ಏನು? ಅದರ ಮೇಲೆ ಬಣ್ಣ ಬಳಿದು ಸುಮ್ಮಗೆ ಹಾಳು ಮಾಡಿ ಬಿಟ್ಟೆ."

ಅವನ ಅಕ್ಕ ಕರೆದಳು. ಅನಂತನಿಗೆ ಅಸಮಾಧಾನವಾಯಿತು. ಭಿಕ್ಷುಕಳ ಮಾತನ್ನು ಕೇಳುತ್ತಾ ಕುಳಿತಿರಬೇಕೆಂಬ ಆತನ ಮನಸ್ಸಿಗೆ ಅಕ್ಕನ ಒಂದು ಹೊಡೆತ. ಮೊದಲು ಓಗೊಡಲಿಲ್ಲ. ಅವಳ ಕರೆಯ ದನಿ ಏರಿತು. ಮೆಲ್ಲನೆ ಮೇಲಕ್ಕೆದ್ದು ಕೋಣೆಯ ಬಾಗಿಲಾಚೆ ನಿಂತಿದ್ದ ಅಕ್ಕನಿಂದ ಹಾಲು ತೆಗೆದುಕೊಂಡು ಬಂದ, ಮೇಜಿನ ಮೇಲಿರಿಸಿದ, ಬಾಗಿಲು ಇಕ್ಕಿಕೊಂಡ.

"ನೀನು ಈಗಲೂ ಹಾಲು ಕುಡಿಯುತ್ತಿಯಾ? ಚಿಕ್ಕಂದಿನಿಂದಲೂ ಬೇಕಷ್ಟು ಕುಡಿದಿರುವೆ. ಆದರೆ ಈ ನನ್ನ ಮಗುವನ್ನು ನೋಡು. ನಿನ್ನಂತೆ ಎಲುಬು ಕಾಣಿಸುವುದಿಲ್ಲ ನನ್ನ ಎದೆ ಹಾಲಿನ ಹೊರತು ಅದಕ್ಕೆ ಬೇರೆ ಹಾಲಿನ ರುಚಿ ತಿಳಿದಿಲ್ಲ. ಮುಂದಕ್ಕೂ ತಿಳಿಯುವಂತಿಲ್ಲ."

ಭಿಕ್ಷುಕಳ ಮಗು ಹಾಲಿನತ್ತ ಕೈಚಾಚಿತು.

"ಬೇಡ ಮಗೂ ನಿನಗದು. ನಾವು ಬಡವರು ಬೇಡುವವರು. ನಮಗೆ ಸೂರ್ಯ ಚಂದ್ರರ ಬೆಳಕೇ ಹಾಲು. ಅವರು ಶ್ರೀಮಂತರು ಹಾಲು ಕುಡಿದರೆ ಅವರ ದೇಹಕ್ಕೆ ಒಗ್ಗುತ್ತದೆ. ನಮಗೆ ಒಗ್ಗಲಾರದು ಹಟಮಾಡಬೇಡ," ಎನ್ನುತ್ತಾ ತನ್ನ ಇಳಿದುಹೋಗಿದ್ದ ಮೊಲೆಯನ್ನು ಮಗುವಿನ ಬಾಯಿಗೆ ತುರುಕಿದಳು.

"ಹಾಲು ಕುಡಿಯಬೇಕೆಂಬ ಆಸೆ ನಮಗಿಲ್ಲ. ದಿನನಿತ್ಯದ ತೆಳು ಗಂಜಿಯಲ್ಲಿ ನಮಗೆ ತೃಪ್ತಿ. ಆದರೆ ನಮ್ಮ ಅಸಹಾಯಕತೆ—ಅತೃಪ್ತಿಗಳನ್ನು ಕಂಡು ನಗುವ ನಿಮ್ಮಂಥವರನ್ನು ಕಂಡರೆ ಓಕರಿಕೆ ಬರುತ್ತದೆ.

ನಾವು ಮನುಷ್ಯರೆಂದು ನೀವು ತಿಳಿದಿರುತ್ತೀರಿ. ಮನುಷ್ಯರಿಗೆ ಮನುಷ್ಯರಲ್ಲದೆ ಮರಗಿಡಗಳು ನೆರವು ಕೊಡಲಾರವೆಂದು ವಾದಿಸುತ್ತೀರಿ. ಇವೆಲ್ಲಕ್ಕೂ ಪ್ರತಿಯಾಗಿ ನಮ್ಮನ್ನು ಹಂಗಿಸುತ್ತೀರಿ. ನಾವೆಂದರೆ ನಿಮಗೆಷ್ಟು ಅಸಹ್ಯವೋ - ನೀವೆಂದರೆ ನಮಗೂ ಅಷ್ಟೇ ಅಸಹ್ಯ."

ಆ ತಾಯಿಯ ಚಿತ್ರವನ್ನು ಚಿತ್ರಿಸಿದುದು ಕೆಡುಕೆನಿಸಿತು. ಆಕೆಯ ಮಾತೃತ್ವದ ಸೊಗಸನ್ನು ವೈರ ಗೆದ್ದುಬಿಟ್ಟಿತ್ತು. ಮನುಷ್ಯಕುಲದ ಮೇಲೆಲ್ಲಾ ಉರಿಕಾರುವಾಕೆಯ ಹೃದಯಲ್ಲಿ ನಲುಮೆ ಇದ್ದೀತೇ?

"ಇನ್ನು ಸಾಕಪ್ಪಾ" ಎಂದು ತನ್ನೆದೆಯನ್ನು ಮಗುವಿನ ಬಾಯೊಳಗಿನಿಂದ ಹೊರಗೆಳೆದು, ನಿಶ್ಶಬ್ದಳಾಗಿ ನಿಂತಳು. ಅನಂತ ದಿಗ್ಗನೆ ಮೇಲೆದ್ದ. ಹಿಂದಿನ ದಿನ ಚಿತ್ರಿಸಿದ್ದ ಚಿತ್ರವನ್ನು ಕಿಟಕಿಯ ಬಳಿ ತಂದ. ತಿಂಗಳ ಬೆಳಕಲ್ಲಿ ಆ ತಾಯಿಯ ಕೂದಲು ಮತ್ತು ರೂಪುಗೆಟ್ಟಿರುವ ಮಗುವನ್ನು ಕಂಡ.

ದೀಪ ಉರಿಸಿದ. ಕಿಸೆಯ ಪತ್ರ ಹೊರಬಂತು. ಬರೆಯತೊಡಗಿದ.

"ನೀನು ನನ್ನ ಜೀವನದಲ್ಲಿ ಬೇಕೆಂಬಷ್ಟು ಬಾರಿ ನನ್ನ ದೃಷ್ಟಿಯಿಂದ ಮೊಗ ಹಾಕಿರುತ್ತೀ. ನಿನ್ನ ನೆನಪಿಗಾಗಿ ನಾನು ಕೃತಜ್ಞ. ಇಂತಹ ಸಿಹಿ ನೆನಪುಗಳು ಒಮ್ಮೊಮ್ಮೆ ನಮ್ಮನ್ನು ತೃಪ್ತಿಯ ತುದಿಗೇರಿಸುತ್ತವೆ.

ಜಾತ್ರೆಯ ದಿನದ ನಿನ್ನ ನಿಲುಮೆಯನ್ನು ಮುಂದಕ್ಕೆ ನಾನು ಕಲಾಶಾಲೆಯಲ್ಲಿ ಕಲಿಯುತಿದ್ದಾಗ ಹಲವಾರು ರೀತಿಯಲ್ಲಿ ಚಿತ್ರಿಸಿದ್ದೆ. ನಮ್ಮೆದುರಿಗೆ ನಿಲ್ಲುತಿದ್ದ ಎಳೆ ಹರೆಯದ ರೂಪುಗಳು ಹಲವಿದ್ದರೂ, ನಿನ್ನ ನೆನಪು ಹಸುರಾಗಿಯೇ ಇರುತಿತ್ತು. ನೀನು ನನ್ನ ಚಿಕ್ಕ ಮನಸ್ಸಿನ ಮೇಲೆ ಮೂಡಿಸಿದ್ದ ಪರಿಣಾಮಕ್ಕೆ ಇದಕ್ಕೂ ಮಿಗಿಲಾದ ಸಾಕ್ಷಿ ಬೇಕೇ?

ಒಮ್ಮೆ ನಿನ್ನ ಚಿತ್ರ ಬರೆದಿದ್ದೆ. ಆ ಚಿತ್ರದಲ್ಲಿದ್ದ ಬಣ್ಣಗಳ ಮೇಳ ಲಾಲಿತ್ಯವನ್ನು ಕಂಡು ನನ್ನ ಸಹಪಾಠಿಯೊಬ್ಬಳು ಚಕಿತಳಾಗಿದ್ದಳು. ಇಂತಹ ರೂಪು ನನಗೆ ನೋಡಲು ಎಲ್ಲಿ ದೊರೆಯಿತೆಂದು ಕೇಳಿದಳು. ನಾನವಳಿಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ನಿನ್ನ ರೂಪನ್ನು ನಾನು ಮೆಚ್ಚುವುದಂತಿರಲಿ—ನಿನ್ನ ಜಾತಿಯವಳೇ ಆದ ಹೆಂಗುಸೊಬ್ಬಳು ಹೊಗಳಿದುದು ಎಷ್ಟು ಅಭಿಮಾನಾಸ್ಪದ ನೋಡು. ನಿನ್ನಲ್ಲಿರುವ

ಮಾಧುರ್ಯವನ್ನು ನಾನು ಅನವರತ ಬಳಸಿಕೊಳ್ಳಲು ಸಾಧ್ಯ. ಆದರೆ ನನ್ನಲ್ಲಿ ಬೇಕೆಂಬಷ್ಟು ಚೈತನ್ಯವಿಲ್ಲ. ಹಾಗಾಗಿ ಚಿತ್ರಿಸಲಾರೆ. ಆದರೆ ಈಗಷ್ಟೇ ಒಬ್ಬ ಬಿಕ್ಷುಕಿ ನಿನ್ನ ಕುರಿತು ಕೆಲವು ಮಾತುಗಳನ್ನು ಹೇಳಿದಳು. ನಿನ್ನ ಜೀವನದಲ್ಲಿ ನೀನಾಕೆಯನ್ನು 'ಎಂದೂ ಕಂಡಿರಲಿಕ್ಕಿಲ್ಲ. ನಿನ್ನ ಕೇಶರಾಶಿಯನ್ನು ಕಂಡೇ ಅವಳಿಗೆ ಸಂತೋಷವಾಗಿತ್ತು........"

ಪೆನ್ನಿನ ಶಾಯಿ ಮುಗಿಯಿತು. ನಾಲ್ಕಾರು ಬಾರಿ ಕುಲುಕಿದ. ಪ್ರಯೋಜನವಾಗಲಿಲ್ಲ. ಮೇಲೆದ್ದು ದೀಪವನ್ನು ಆರಿಸಿದ.

— ೧೦ —

ದಿನದಂತೆ ಬೆಳಗಾಗಿದ್ದರೂ ಅನಂತ ಬೇರೆಯಾಗಿದ್ದ. ದೂರದಲ್ಲಿದ್ದ ಕ್ರಿಶ್ಚಿಯನ್ ಕುಟುಂಬದ ಮನೆಯ ಕೋಳಿ ಅವನನ್ನು ಎಚ್ಚರಿಸಿತ್ತು. ಮನೆಮಂದಿ ಎದ್ದಿರಲಿಲ್ಲ. ದೀಪ ಉರಿಸಿ ಸಮಯ ನೋಡಿದ. ನಾಲ್ಕುವರೆಯಾಗಿತ್ತು. ಸಾಧ್ಯವಿದ್ದಷ್ಟು ಚಿಕ್ಕ ಶಬ್ದನಡೆಯಿಂದ ಹೊರತೆರಳಿದ. ಮುಂಜಾವಿನ ತಂಗಾಳಿಯೊಡನೆ ಚಂದ್ರನ ನಸುಕೆಂಪು ಬಿಂಬ ಕಾಣಿಸಿತು. ತಾಯಿ ಮಗು ಚಿತ್ರಣದ ಬದಲು ಈ ಬಗೆಯ ಸೌಮ್ಯ ಸೃಷ್ಟಿಯ ಚಿತ್ರಣ ಉತ್ತಮವೆಂದೆನಿಸಿತು.

ಹವೆ ಸಾಕಷ್ಟು ತಣ್ಣಗಿತ್ತು. ಅಂತಹ ಸಮಯ ಬರಿಮೈಯಲ್ಲಿ ಇರಬಾರದೆಂದು ಡಾಕ್ಟರರು ಕೊಟ್ಟಿದ್ದ ಸೂಚನೆ ನೆನಪಿಗೆ ಬಂತು. ತಾನೇಕೆ ರೋಗಿಯಾದೆ? ಇಂತಹ ಭಯಂಕರ ರೋಗಕ್ಕೇನೇ ಬಲಿಯಾಗಬೇಕೆ?

ಉತ್ತರ ಕೋಳಿಕೂಗಲ್ಲಿ ಸಿಗಲಿಲ್ಲ
ತಂಗಾಳಿ ಕೊಡಲಿಲ್ಲ.
ಚಂದ್ರ ನಿರುತ್ತರಿಯಾಗಿದ್ದ.

ಮೊಗದ ಮೇಲೆ ತಣ್ಣಗಿನ ನೀರನ್ನು ಎರಚಿಕೊಂಡು ಕೋಣೆಯೊಳಕ್ಕೆ ಬಂದ. ದೀಪ ಉರಿಯುತ್ತಲೇ ಇತ್ತು. ಭಿಕ್ಷುಕಳ ಚಿತ್ರ ಇದುರಿತ್ತು. ಚಿತ್ರದ ತಾಯಿಗೆಂದು ಬರೆದಿದ್ದ ಪತ್ರ ಮತ್ತೊಮ್ಮೆ ಅನಂತನನ್ನು ತನ್ನೆಡೆಗೆ ಆಹ್ವಾನಿಸಿತು. ಪೆನ್ನಿಗೆ ಶಾಯಿ ತುಂಬಿಕೊಳ್ಳಲು

ಯತ್ನಿಸಿದ, ಆದರೆ ಶಾಯಿ ಮುಗಿದಿತ್ತು. ಕುಳಿತು ಯೋಚಿಸತೊಡಗಿದ—ಆಕೆ ಇದುರಲ್ಲಿದ್ದಾಳೆ ಎಂಬ ಭ್ರಮೆಯಿಂದ.

‘‘ಇದೀಗ ಮುಂಜಾನೆ ನಿನಗೆ ಪತ್ರ ಬರೆಯಲು ಯತ್ನಿಸಿದೆ. ಆಗಲಿಲ್ಲ. ನಿನ್ನಿನ ರಾತ್ರಿ ನಿನ್ನ ಯೋಚನೆಯಲ್ಲಿ ಮಲಗಿದ್ದೆ. ಕನಸು ನಿನ್ನದೇ. ನಿನ್ನ ಮಗು ಯಾವುದೋ ಅಪಾಯದಲ್ಲಿತ್ತು. ಆ ಸ್ಥಳದಿಂದ ಸ್ವಲ್ಪ ದೂರದಲ್ಲಿ ನಾನು ಕುಳಿತಿದ್ದೆ. ಮಗುವನ್ನು ಉಳಿಸಬೇಕೆಂಬ ಆಶಯ ನನ್ನಲ್ಲಿ ಮೂಡಲಿಲ್ಲ. ಬದಲಾಗಿ ನಿನ್ನನ್ನು ಕಾಣಲು ತವಕಿಸುತಿದ್ದೆ. ಎಲ್ಲಿಂದಲೋ-ನೀನು ಬಂದೆ. ಕೂದಲು ಬಿಚ್ಚಿದ್ದು ಮೊಗದ ಮೇಲೆ ಸಾಕಷ್ಟು ಹರಿದಾಡುತಿತ್ತು. ಬಂದವಳೇ ಹಿಂದು ಮುಂದು ಯೋಚಿಸದೆ ಮಗುವಿನೆಡೆಗೆ ಧಾವಿಸಿದೆ. ನಾನು ನಿನ್ನನ್ನು ಕಂಡು ನಗಲು ಯತ್ನಿಸಿದೆ—ಆದರೆ ನಗು ಬರಲಿಲ್ಲ. ಫಲವಾಗಿ ಕನಸು ನಿಂತಿತು ದೂರದ ಸಮುದ್ರದ ಗರ್ಜನೆ ಕಿವಿಗ ಕೇಳಿಸುತಿತ್ತು. ಇಂತಹ ಕನಸನ್ನು ನಾನು ಇದು ಮೊದಲ ಬಾರಿಗೆ ನೋಡುವುದಲ್ಲ. ಆದರೆ ನಿನ್ನ ಚಿತ್ರಣದ ದೃಷ್ಟಿಯಿಂದ ಮಹತ್ವವಾದ ಕನಸಿದು. ನಿನ್ನ ಮೊಗದ ಮೇಲೆಲ್ಲಾ ಕೂದಲು ಹರಡಿದ್ದರೆ ನಿನ್ನ ಕಣ್ಣಲ್ಲಿ ಯಾವ ಬಗೆಯ ಮಾತೃತ್ವದ ಮಿರುಗು ಇದ್ದೀತು ಎಂಬ ಪರಿಚಯವಾಯಿತು. ಕಾರಣ ಕಣ್ಣಿನ ಬಿಳಿಯ ಬಣ್ಣಕ್ಕೆ ಹಿನ್ನಲೆಯಾಗಿ ಕೂದಲಿನ ಕಪ್ಪಿತ್ತು, ಹುಬ್ಬಿನ ಬಾಗಿತ್ತು.

ಹ್ಞಾಂ, ಮೇಲೇಳಬೇಡ. ನೋಡು, ಇದೀಗ ಬೆಳಕು ವಿಸ್ತರಿಸತೊಡಗುತ್ತಿದೆ. ಬಹಳ ಸಮೀಪದಲ್ಲಿ ನಗಾರಿಯ ದನಿ ಕೇಳಿಸುತ್ತದೆ. ಅದರ ಜೊತೆಗೆ ಚರ್ಚಿನ ಗಂಟಾದನಿ ಅಲೆ ಅಲೆಯಾಗಿ ಬರುತ್ತಿದೆ.ದೇವರ ಆಶೀರ್ವಾದ ಪಡೆಯಲು ಬಯಸುವ ಮನಸ್ಸಿನ ನೂರಾರು ಕೂಗಾಟ, ಚೀರಾಟ, ಬೊಬ್ಬಾಟಗಳಂತೆ ಕೇಳಿಸುತ್ತಿವೆ ಈ ದನಿಗಳು.

ನನ್ನನ್ನು ಚಿತ್ರಗಾರನನ್ನಾಗಿ ಮಾಡಿದ ಶ್ರೇಯಸ್ಸು ನಿನ್ನದು. ಸೌಂದರ್ಯವೆಂದರೇನೆಂದು ತಿಳಿಯದವನ ಕಣ್ಣುಗಳಿಗೆ ನಿನ್ನಿಂದ ಸೌಂದರ್ಯದ ಅರಿವಾಯಿತು. ತಾಯಿತನದ ಮಮತೆ ಅರಿಯದವನಿಗೆ,

ಆದರ ಸ್ಪಷ್ಟ ಚಿತ್ರಣ ನೋಡ ದೊರಕಿತು. ನನ್ನ ತಾಯಿ ನನ್ನ ಚಿಕ್ಕಂದಿನಲ್ಲಿ ಹೋಗಿರುತ್ತಾರೆ. ಹಾಗಾಗಿ ತಾಯಿಯ ಪ್ರೀತಿಯ ಸ್ಪರ್ಶ ನನ್ನ ಬಾಳಿಗಿಲ್ಲ. ಆದರೆ ನನ್ನಕ್ಕನ ಬಾಳು ಹಿರಿದು--ಮನಸ್ಸು ಹಿರಿದು. ತಾಯಿಯ ಪ್ರೀತಿಯ ಬದಲು ಅವಳ ಪ್ರೀತಿ ಪಡೆದೆ. ಅವಳು ನನಗೆ ತಾಯಿ. ಅವಳೇ ನನಗೆ ಅಕ್ಕ. ಎಲ್ಲಕ್ಕೂ ಹಿರಿದಾಗಿ ಇಂದು ನನ್ನಂತಹ ರೋಗಿಯೊಬ್ಬನ ಮಗ್ಗುಲಲ್ಲಿ ಕುಳಿತು ಆರೈಕೆ ನಡೆಸುತ್ತಿರುವ ಯೋಗಿ

ಎಷ್ಟೋ ಬಾರಿ ನಿನ್ನ ರೂಪನ್ನು ನಾನು ಚಿತ್ರಿಸಿದ್ದೇನೆ ನಿನ್ನ ಮೊಗದ ಸೌಂದರ್ಯವನ್ನು ಶುದ್ಧ ಭಾರತೀಯ ಶೈಲಿಯಲ್ಲಿ, ತಾದ್ರೂಪಿಕ ಶೈಲಿಯಲ್ಲಿ, ಆಧುನಿಕ ಶೈಲಿಯಲ್ಲಿ ಚಿತ್ರಿಸಿರುವೆ. ಎಲ್ಲಾ ಶೈಲಿಗಳಲ್ಲಿಯೂ ಒಂದೇ ಸೊಬಗು, ಒಂದೇ ಬಗೆಯ ಆಕರ್ಷಣೆ. ಮಾನವರಲ್ಲಿ ಈ ಬಗೆಯ ಸೊಬಗನ್ನು ಕಾಣುವುದು ಅಸಾಧ್ಯ ಎಂದು ನನ್ನೊಬ್ಬ ಕಲಾ ಪ್ರಾಧ್ಯಾಪಕರು ನುಡಿದಿದ್ದರು. ಎಲ್ಲವೂ ನಿನಗೆ ಮೀಸಲು. ಬಹುಶಃ ಸೃಷ್ಟಿಯಲ್ಲಿರುವ ಸ್ವಾಭಾವಿಕ ಸೊಗಸಿಗಿಂತ ಮಿಗಿಲಾದ ಸೊಗಸನ್ನು ಕಲಾವಿದ ಚಿತ್ರಿಸಬಲ್ಲ ಎಂಬ ಅಭಿಪ್ರಾಯ ಅವರಲ್ಲಿ ಅದುತನಕ ಇದ್ದಿತ್ತೋ ಏನೋ. ಆ ಘಟನೆಗಳನ್ನು ನೆನಪಿಸುವಾಗ ಒಂದೆಡೆ ದುಃಖ ಒಂದೆಡೆ ಸಂತೋಷವೆನಿಸುತ್ತದೆ. ನೀನು ಎಲ್ಲಾ ಚಿತ್ರಗಾರರ ಕಣ್ಣಿಗೆ ಬೀಳದಿದ್ದುದು ಒಳಿತೇ ಆಯಿತೆನ್ನು. ಚಿತ್ರಗಾರರು ಸ್ವಾರ್ಥಿಗಳು. ಕಲಾವಿದರೆಲ್ಲರೂ ಸ್ವಾರ್ಥಿಗಳು. ಬಾಳಿನ ಚಿತ್ರ, ಘಟನೆ, ವ್ಯಕ್ತಿಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಹಂಬಲ ಅವರಲ್ಲಿ ಬಹಳ........"

ಯೋಚನೆ ತನ್ನಿಂದ ತಾನಾಗಿ ನಿಂತಿತು. ಆ ತಾಯಿ ಎದುರಿಂದ ಎದ್ದು ಹೊರಟಂತಾಯಿತು. ಕಣ್ಣುಗಳು ಬಾಗಿಲ ಬಳಿ ತೆರಳಿದುವು.

ಅವನಕ್ಕ ಎದ್ದು ಸ್ಪಷ್ಟ ದನಿಯಲ್ಲಿ ಉದಯರಾಗ ಹೇಳ ತೊಡಗಿದಳು. ಈ ಹಿಂದೆ ಎಷ್ಟೋ ಬಾರಿ ಅವಳ ಹಾಡನ್ನು ಕೇಳಿದ್ದ. ಆದರೆ ಇಂದೇಕೋ ಆದರ ಸೊಗಸು ಮನಸಲ್ಲಿ ಹಿಡಿಯಲಾರದಷ್ಟಿದೆ ಎಂದಾಯಿತು.

"ಸೌಂದರ್ಯ ಸೃಷ್ಟಿಯಲಿ ಹೊಸ ಬಗೆಯ ನೋಟ
ಮನರಾಗಲಹರಿಯಲಿ ಹೊಂದಿ ಕೂಟ
ಚಿರಸತ್ಯ ಮೌನದಲಿ ಬೆರೆತಿತ್ತು ಮನವು
ಹರಡಿತ್ತು ಚೈತನ್ಯ ಹೂಡಿ ಆಟ........"

ಬಹಳ ಹಿಂದಕ್ಕೆ ಶಾಲೆಯಲ್ಲಿ ಕಲಿಯುತಿದ್ದಾಗ ಶಾಲಾ ವರ್ಧಂತಿ ಉತ್ಸವದ ಅಧ್ಯಕ್ಷರಾಗಿ ಬಂದಿದ್ದ ಕವಿಗಳೊಬ್ಬರು ಹಾಡಿದ್ದ ಹಾಡು—ಬೇರೆಲ್ಲವನ್ನು ತೇಲಿಸಿ ಬಿಟ್ಟು ಆತನ ಕಿವಿಯಲ್ಲಿ ಜಿನುಗ ತೊಡಗಿತು.

ಅಂತಹ ದಿನಗಳು ಬರಲಾರವು........ಬರಲಾರವು........

— ೧೧ —

ಇರುಳು ಕಂಡಿದ್ದ ಕನಸನ್ನು ಚಿತ್ರಿಸಬಾರದೇಕೆ ಎಂದು ಅನಂತನಿಗೆ ಅನಿಸಿತು. ಕನಸಲ್ಲಿ ಕಾಣುವ ವಿಲಾಸದ ವಿಶಾಲತೆಯನ್ನು ಬಣ್ಣ ರೇಖೆಗಳು ಸೆರೆ ಹಿಡಿಯಲಾರವು ಎಂದು ಅವನಿಗೆ ಗೊತ್ತು. ಕಾರಣ ಈ ಹಿಂದೆ ಅಂತಹ ಪ್ರಯತ್ನಗಳಲ್ಲಿ ಅಯಶಸ್ವಿಯಾಗಿದ್ದ.

ಆದರೂ ಈ ಕನಸನ್ನು ಏಕೆ ಚಿತ್ರಿಸಬಾರದು?

ಬಹುದು.

ಅವನಕ್ಕ ಹಾಲು ತಂದಿತ್ತಳು. ಅನಂತ ಅಂದು ಅಷ್ಟು ಬೇಗನೆ ಎದ್ದುದು ಆಕೆಯ ಕಲ್ಪನೆಗೆ ಮಿಗಿಲಾದುದು. ಜಡ ಪ್ರಕೃತಿ ಆತನದು. ಮೇಲಾಗಿ ಹೇಳಿಸಿಕೊಳ್ಳುವಂತಹ ಯಾವ ಕೆಲಸಗಳಿಲ್ಲದವ.

"ಎರಡು ಮೂರು ದಿನಗಳಿಂದ ನಿನ್ನನ್ನು ನೋಡುತಿದ್ದೇನೆ. ಏನೋ ಬೇಸರದಲ್ಲಿ ಇರುವಂತೆ ಕಾಣಿಸುತ್ತದೆ," ಎಂಬ ಆಕೆಯ ಮಾತಿಗೆ ವಿಷಾದಪೂರ್ಣ ನಗುವಿನ ಉತ್ತರವನ್ನಿತ್ತ.

"ನೀನು ಈ ರೀತಿ ಕೊರಗುವುದನ್ನು ನನಗೆ ನೋಡಲಾಗುವುದಿಲ್ಲ. ಅಮ್ಮ ಇರುತಿದ್ದರೆ ನಿನ್ನನ್ನು ಈ ರೀತಿಯಾಗಿರಲು ಬಿಡುತಿದ್ದಿಲ್ಲ."

ಮುಂಜಾವಿನ ಹೊತ್ತು ಉದಯರಾಗವನ್ನು ಸ್ಪಷ್ಟವಾಗಿ ಹಾಡುತಿದ್ದ ಆಕೆಯ ಕಂಠ ಆಗ ನಡುಗುತಿತ್ತು. ಅನಂತನಿಗೆ ಅಕ್ಕನ ಮಾತು ಕಹಿಯಾಯಿತು. ತನ್ನನ್ನು ಇದುತನಕ ಸ್ನೇಹಪೂರ್ಣವಾಗಿ ನೋಡಿ

ಕೊಂಡು ಬಂದಿದ್ದ ಅಕ್ಕನಿಂದ ಇಂತಹ ಮಾತುಗಳನ್ನು ಕೇಳಲು ಆತ ಸಿದ್ಧನಿರಲಿಲ್ಲ.

"ಅಮ್ಮನ ವಿಚಾರ ಈಗ ಹಳೆಯದಾಗಿದೆ, ಅಕ್ಕಾ."

ಅನಂತನ ಮಾತಿನ ಮಾರ್ಮಿಕತೆ ಆಕೆಗೆ ತಿಳಿಯಲಿಲ್ಲ. ತಿರುವು ತಿರುವಾದ ಮಾತುಗಳ ಅರ್ಥವನ್ನು ತಿಳಿದುಕೊಳ್ಳಬಲ್ಲ ವಿಚಕ್ಷಣತೆ ಆಕೆಯಲ್ಲಿರಲಿಲ್ಲ.

"ಮೊದಲು ಹಾಲು ಕುಡಿ."

ಅನಂತ ಹಾಲು ಕುಡಿದ. ಆಕೆ ಕೋಣೆಯ ಅಶುಚಿಯನ್ನು ಗಮನಿಸಿ, ಒಳತೆರಳಿ ಕಸಬರಿಗೆ ತಂದಳು. ಆತ ಸಧ್ಯ ಬೇಡವೆಂದರೂ ಕೇಳದೆ ನೆಲದ ಕಸ ಜಾಡಿಸಿದಳು. ಅನಂತ ಆಕೆಯನ್ನು ನೋಡುತ್ತಲೇ ಇದ್ದ.

"ನಾನು ಈ ರೀತಿಯಾಗಿದ್ದರೆ ನಿನಗೆ ಬೇಸರವೇ?"

"ಬೇಸರವಲ್ಲದೆ ಮತ್ತೇನು?"

"ನಾನು ಹೇಗಿರಬೇಕೆಂದು ನಿನ್ನ ಯೋಜನೆ?"

"ಸಂತೋಷದಿಂದ ಇರಬೇಕು."

"ನನ್ನಂತಹ ರೋಗಿ......?"

ಅವನ ಮಾತಲ್ಲಿ ಮೂಡಿದ್ದ ಕಹಿಯನ್ನು ಕೇಳಲಾಗದೆ ಆಕೆ ಬರಿದಾಗಿದ್ದ ಲ್ಯೋಟಿಯನ್ನು ಎತ್ತಿಕೊಂಡು ಒಳತೆರಳಿದಳು. ಇಂತಹ ಅಕ್ಕನನ್ನು ಪಡೆದಿರಬೇಕಾದರೆ ತಾನು ಹಲವಾರು ಬಾರಿ ಮಂದಾಕಿನಿಯಲ್ಲಿ ಮುಳುಗಿರಬೇಕೆಂದು ಅನಿಸಿತು ಅವನಿಗೆ.

ಮೇಜಿನ ಮೇಲಿದ್ದ ಪತ್ರವನ್ನು ಕೈಗೆತ್ತಿಕೊಂಡು ಸಮಗ್ರವಾಗಿ ಓದಿದ. ತಾನು ಬರೆದುದು ಹಿತವಾಗಿ ಕಂಡಿತು. ಚಿತ್ರಗಾರನಾಗುವ ಬದಲು ಲೇಖಕನಾಗುತಿದ್ದರೆ ಸಾರ್ಥಕವಾಗುತಿತ್ತೆಂದು ಅನಿಸಿತು. ಬಾಗಿಲು ಮುಚ್ಚಿ ಪತ್ರವನ್ನು ಮೇಜಿನ ಮೇಲಿರಿಸಿ, ಕಿಟಕಿಯ ಹೊರ ಕಂಡ.

ಹೌದೋ ಅಲ್ಲವೋ ಎಂಬಂತೆ ತೂಗುತಿದ್ದ ಗಾಳಿಮರಗಳು

ಮುಂಜಾವಿನ ಕತೆಯನ್ನು ಹೇಳುತಿದ್ದುವು. ಹಕ್ಕಿಗಳ ಚಿಲಿಪಿಲಿಯಲ್ಲಿ ಕೋಮಲತೆಯೊಡನೆ ಕರ್ಕಶ ಬೆರೆತಿತ್ತು.

ಕನಸು!

ಮನಸ್ಸಿಗೆ ತೃಪ್ತಿಕೊಡಬಲ್ಲ ವಿಚಿತ್ರ ಆಟ. ಹೊತ್ತಾರೆಯಿಂದ ಕತ್ತಲಿನ ತನಕದ ಬೆಳಕಿಗೆ ಇರುಳುಕೊಡುವ ಅಮೂಲ್ಯ ಕಾಣಿಕೆ. ಹಿಂದಿನ ದಿನದ ಕನಸನ್ನು ಚಿತ್ರಿಸಬಾರದೇಕೆ?

ಮನಸ್ಸಿಗೆ ತೋಚಿದುದನ್ನು ಆ ಕ್ಷಣ ಗೀಚುವ ಉತ್ಸಾಹ ಅನಂತನದು. ತಾಯಿ ಮಗು ಚಿತ್ರಣವನ್ನು ಅಸಾಧ್ಯವೆಂದು ತಿಳಿದಾತ ಕನಸಿನ ಚಿತ್ರಣಕ್ಕೆ ತೊಡಗಿದ.

ಇನ್ನೇನು—ರೇಖೆಗಳು ಮೂಡಿದುವು. ಬಣ್ಣದ ಕೆಲಸಕ್ಕೆ ತೊಡ ಗಬೇಕು ಎನ್ನುವುದರಲ್ಲಿ ಹೊತ್ತು ಹತ್ತಾಯಿತು. ಅಷ್ಟರಲ್ಲಿ ತನ್ನನ್ನು ಯಾರೋ ಕರೆಯುತ್ತಿರುವರೆಂದು ಅಕ್ಕ ಸೂಚಿಸಿದಳು. ಅಸಹನೆಯಿಂದ ಹೊರಬಂದ.

ಅವನ ಉಪಾಧ್ಯಾಯರು ಕುಳಿತಿದ್ದರು. ನಲುವತ್ತು—ನಲುವ ತ್ತೈದರ ಜೀವಿ. ಕೆಲವು ವರುಷಗಳ ಹಿಂದಿನ ಕಡು ನೀಲಿ ಬಣ್ಣದ ದಪ್ಪದ ಬುಷ್ ಕೋಟು ಧರಿಸಿದ್ದರು. ಕೊಳೆಯಾದ ಪಂಚೆ ಬೇರೆ. ತಲೆಯ ಮೇಲೆ ನುಣ್ಣಗಿನ ಬಿಳಿ ಬಣ್ಣದ ಕೂದಲುಗಳು—ಕಣ್ಣ ಮೇಲಿನ ಕನ್ನಡಕ—ವಿಶಾಲವಾದ ಹಣೆಯಲ್ಲಿ ಮೂಡಿದ್ದ ಪ್ರಬುದ್ಧ ನೆರಿಗೆಗಳು— ಅವರನ್ನು ಸದಾ ವ್ಯಸನಿ ಎಂಬಂತೆ ಮಾಡಿದ್ದುವು. ಅನಂತನಿಗೆ ಮೊದಲು ಸಂಕೋಚವೆನಿಸಿತಾದರೂ, ಕೈ ಎತ್ತಿ ಮನಪೂರ್ವಕ ವಂದಿಸಿದ. ತನ್ನ ಶಿಷ್ಯನ ವಂದನೆ ಸ್ವೀಕರಿಸಿದರು—ಅವನನ್ನು ಕಣ್ತುಂಬಾ ಕಂಡರು.

"ನಿನ್ನಿಂದ ಒಂದು ಕೆಲಸ ಆಗಬೇಕಿತ್ತು."

"ಹೇಳಿ ಸರ್."

"ನನ್ನ ತಾಯಿಯವರ ಒಂದು ಚಿತ್ರ ಬಿಡಿಸಿಕೊಡಬಹುದೇ?" ಎಂದೆನ್ನುತ್ತಾ ಬುಷ್ ಕೋಟಿನ ಕಿಸೆಯಲ್ಲಿ ಭದ್ರವಾಗಿ ಇರಿಸಿದ್ದ ಹಳೆಯ ಫೋಟೋ ಒಂದನ್ನು ಹೊರತೆಗೆದು ಅವನ ಬಳಿ ಚಾಚಿದರು. ಅನಂತ ಚಿತ್ರವನ್ನು ಕಂಡ.

"ನನ್ನಲ್ಲಿ ನಿನಗೆ ಕೊಡಲು ಸಾಕಷ್ಟು ಹಣವಿಲ್ಲ. ತಾಯಿಯ ಚಿತ್ರವನ್ನು ಮನೆಯಲ್ಲಿ ಇರಿಸಬೇಕೆಂಬ ಆಸೆ ಇದೆ. ಹೇಗೂ ನೀನು ನನ್ನ ವಿದ್ಯಾರ್ಥಿ. ನಿನಗೆ ತಗಲುವ ವೆಚ್ಚವನ್ನು ಕೊಡುತ್ತೇನೆ. ಹೆಚ್ಚು ಕೊಡಲು ಸಾಧ್ಯವಾಗಲಾರದು" ಎಂದು ಅವನ ಉತ್ತರಕ್ಕಾಗಿ ನಿರೀಕ್ಷಿಸಿದರು. ಅದು ತನಕ ಚಿತ್ರವನ್ನು ಸೂಕ್ಷ್ಮವಾಗಿ ನೋಡುತಿದ್ದ ಅನಂತ, ಅವರ ಮಾತು ಮುಗಿದ ಬಳಿಕ ತಲೆ ಎತ್ತಿ ಕಂಡ. ನೋವಿನ ಮೊಗ ಅವರದ್ದಾಗಿತ್ತು.

"ಸರಿ ಸರ್, ಎಷ್ಟೆಂದರೂ ನಿಮ್ಮಿಂದ ಹಲವಾರು ವಿಚಾರಗಳನ್ನು ಕಲಿತಿರುತ್ತೇನೆ. ನೀವೇ ಇಲ್ಲಿಗೆ ಬಂದು ಈ ಕೆಲಸವನ್ನು ಮಾಡಲು ಒಪ್ಪಿಸಿದಾಗ ನಾನು ಅಲ್ಲ ಎಂದು ಹೇಳಲಾರೆ. ಆದರೆ ನಿಮಗೆ ಚಿತ್ರ ಬೇಗನೇ ಸಿಗಲಾರದು."

"ಎಷ್ಟು ಸಮಯ ಬೇಕಾದೀತು?"

"ಅದನ್ನು ಹೇಳಲು ಸಾಧ್ಯವಾಗದು. ನೀವು ಎರಡೆಣಿಸಬಾರದು. ಮನಸ್ಸು ಬಂದಾಗ ಮಾತ್ರ ಚಿತ್ರಿಸುವ ಕ್ರಮ ನನ್ನದು. ಇಲ್ಲವಾದರೆ........"

"ಚಿಂತಿಲ್ಲ."

"ಚಿತ್ರದ ಕೆಲಸ ಮುಗಿದೊಡನೆ ನಿಮ್ಮಲ್ಲಿಗೆ ತಂದು ಕೊಡುತ್ತೇನೆ."

ಉಪಾಧ್ಯಾಯರು ಬಹಳ ಸಂತೋಷದಿಂದ ಮೇಲೆದ್ದರು. ಒಳ ಕೋಣೆಯಿಂದ ಅನಂತನ ಅಕ್ಕ ನೋಡುತಿದ್ದಳು. ಅಲ್ಲಿಂದಲೇ ಅವರಿಗೆ ವಂದಿಸಿದಳು.

"ಸರಿಯಪ್ಪಾ, ನೀನು ಇಷ್ಟಾದರೂ ನೆನಪು ಇಟ್ಟುಕೊಂಡಿರುತ್ತೀ. ನನಗೆ ಮೊದಲೇ ಗೊತ್ತಿತ್ತು—ನೀನು ಇದನ್ನು ಖಂಡಿತವಾಗಿ ಮಾಡಿ ಕೊಡುತ್ತೀ ಎಂದು", ಎಂದು ನುಡಿಯುತ್ತಾ ಅನಂತನ ಮೊದಲಾಗಿ ತಾವೇ ನಮಸ್ಕರಿಸಿ, ಮೆಟ್ಟಿಲ ಮೇಲಿದ್ದ ಜೋಡನ್ನು ಮೆಟ್ಟಿಕೊಂಡರು. ಅನಂತ ನಾಚಿದ. ಅವರನ್ನು ಗೇಟಿನ ತನಕ ಕಳುಹಿಸಿ ಕೊಟ್ಟ.

ಕೋಣೆಗೆ ಹಿಂತಿರುಗಿದ ಬಳಿಕ ಫೊಟೋವನ್ನು ನೋಡತೊಡಗಿದ. ಅದೂ ಒಬ್ಬಾಕೆ ತಾಯಿಯ ಚಿತ್ರ. ಇದೇ ಉಪಾಧ್ಯಾಯರು ಕೆಲವು ವರುಷಗಳ ಹಿಂದೆ ವಿಷಮ ಜ್ವರದಲ್ಲಿ ಮಲಗಿದ್ದಾಗ, ತಾನು ಅವರಲ್ಲಿಗೆ ತೆರಳಿ ಎರಡು ಕಿತ್ತಳೆಗಳನ್ನು ಕೊಟ್ಟುದುದು ನೆನಪಿಗೆ ಬಂದಿತು. ಅಂದವರು ಹೇಳಿದ್ದ ಮಾತು ಕಿವಿಯಲ್ಲಿ ಮರ್ಮರಿಸಿತು.

"ವಿಷಮ ಜ್ವರ ಸಾಂಕ್ರಾಮಿಕವಾದುದು. ನೀನು ಹೀಗೆಲ್ಲಾ ಇಲ್ಲಿಗೆ ಬರಬಾರದಪ್ಪಾ," ಎಂದಿದ್ದರು. ಅಂದು ಅವರು ರೋಗಿಯಾಗಿದ್ದರೆ, ಇಂದು ತಾನು ರೋಗಿ. ಅಂದು ರೋಗಿಯ ಬಳಿ ತಾನು ಹೋಗಿದ್ದರೆ, ಇಂದು ರೋಗಿಯ ಬಳಿ ಅವರು ಬಂದಿದ್ದರು. ನಗು ಮೂಡಿತು.

"ಬದುಕಬೇಕು ಎಂಬ ಉತ್ಸಾಹದಿಂದ ಇರುವವರ ಚಿತ್ರವನ್ನು ಕಂಡರೆ, ಚಿತ್ರಿಸಿದರೆ, ನಮಗೂ ಬದುಕೋಣ ಎಂದಾಗುತ್ತದೆ," ಎಂದು ತನ್ನ ಕಲಾ ಶಾಲೆಯ ಪ್ರಾಧ್ಯಾಪಕರು ಹೇಳಿದ್ದ ಮಾತನ್ನು ನೆನಪಿಸಿಕೊಂಡ.

— ೧೨ —

ತಾಯಿ ಮಗು, ಕನಸು, ಎಲ್ಲವೂ ಹಿಂದೆ ಬಿತ್ತು. ಈ ಮೊದಲು ಆತ ಊರಿನ ಹಲವರಿಗೆ ಚಿತ್ರ ಬಿಡಿಸಿಕೊಟ್ಟುದುದೆಂದಿತ್ತು. ಅವುಗಳಿಗೆ ಆತ ಅಪೇಕ್ಷಿಸಿದ ಸಂಭಾವನೆಯೂ ಸಿಕ್ಕಿತ್ತು. ಉಪಾಧ್ಯಾಯರ ತಾಯಿಯ ಚಿತ್ರಕ್ಕೆ ತನಗೆ ಸಂಭಾವನೆ ಸಿಗಲಾರದೆಂದು ತಿಳಿದಿದ್ದರೂ, ತನಗೆ ಹಲ ವರುಷ ಪಾಠ ಹೇಳಿಕೊಟ್ಟಿರುವ ಅವರಿಗೆ ತೃಪ್ತಿಯಾಗಬಲ್ಲ ಚಿತ್ರ ಬರೆದುಕೊಡಬೇಕೆಂಬ ಉತ್ಸಾಹ ಮೂಡಿತು. ಆ ಉಪಾಧ್ಯಾಯರು ರಾಘವಾಂಕನ ಕಾವ್ಯವನ್ನು ಚೆಲುವಾಗಿ ಓದಿ ವಿವರಿಸಿ ಹೇಳುತಿದ್ದ ಬಗೆಯನ್ನು ಆತ ಮರೆತಿರಲಾರ.

ಮೂರು ದಿನಗಳ ತನಕ ಕೃಷ್ಣಪ್ಪನಿಗೆ ಅನಂತ ನೋಡಸಿಗಲಿಲ್ಲ. ಅನಂತನ ಇಂತಹ ನಡತೆ ಆತನಿಗೆ ಹೊಸತಲ್ಲ. ಹಾಗಾಗಿ ನಾಲ್ಕನೆಯ ದಿನ ರಾತ್ರಿ ಅಂಗಡಿ ಮುಚ್ಚಿದ ಬಳಿಕ ಅನಂತನಲ್ಲಿಗೆ ತೆರಳಿದ.

ಕೋಣೆಯಲ್ಲಿ ದೀಪವಿತ್ತು. ನಾಲ್ಕು ದಿನಗಳ ಪರಿಶ್ರಮದಿಂದಾಗಿ ಉಪಾಧ್ಯಾಯರ ತಾಯಿಯ ಚಿತ್ರ ಮುಗಿಯುವ ಹಂತದಲ್ಲಿತ್ತು. ಕೃಷ್ಣಪ್ಪ ವಿಶೇಷ ಮಾತನಾಡದೆ, ಕುರ್ಚಿಯನ್ನೆಳೆದು ಕುಳಿತ. ಅನಂತನ ಕೆಲಸ ಸಾಗುತ್ತಲೇ ಇತ್ತು.

ಅರ್ಧ ಗಂಟೆ ಕಳೆದಿರಬೇಕು.

"ನಿನಗೆ ಬೇಸರವಾಯಿತೋ ಏನೋ. ಈ ಚಿತ್ರವನ್ನು ಇಂದೇ ಮುಗಿಸಬೇಕೆಂಬ ಹಟವಿತ್ತು. ಹಾಗಾಗಿ ನಿನ್ನಲ್ಲಿ ಮಾತನಾಡಲಾಗಲಿಲ್ಲ".

"ಮುಗಿಯಿತೇ?"

"ಇಲ್ಲ, ಇನ್ನು ಸ್ವಲ್ಪ ಕೆಲಸ ಉಳಿದಿದೆ."

'ಅದನ್ನು ಬೇಗ ಮುಗಿಸಬಹುದಲ್ಲಾ?"

"ಬೇಡ, ನಾಳೆ ಮಾಡುತ್ತೇನೆ."

ಮಾತನಾಡಲು ವಿಷಯಗಳಿರಲಿಲ್ಲ. ಹಾಗಾಗಿ ಮಾತು ನಿಂತಿತು. ಅದು ತನಕ ಮೇಜಿನ ಮೇಲೆ ತೆರೆದುಕೊಂಡು ಬಿದ್ದಿದ್ದ ಪತ್ರವನ್ನು ಅನಂತ ಮೆಲ್ಲನೆ ಕೈಗೆತ್ತಿಕೊಂಡು ಪ್ಯಾಜಾಮದ ಕಿಸೆಯೊಳಗೆ ತುಂಬಿದ. ಕೃಷ್ಣಪ್ಪ ಪ್ರಶ್ನಾತ್ಮಕವಾಗಿ ನೋಡಿದ.

"ಏನಿಲ್ಲ, ಅದೇ ಪತ್ರ."

"ಸರಿ."

ಅನಂತನನ್ನು ಹೊರಡಿಸಿ, ಹೊಟೆಲಲ್ಲಿ ಅವನಿಗೊಂದಿಷ್ಟು ಕಾಫಿ ಕುಡಿಸಿ ಕೃಷ್ಣಪ್ಪ ತನ್ನ ಮನೆ ಕಡೆ ತೆರಳಿದ. ಅನಂತ ಹಿಂತಿರುಗಿದ.

— ೧೩ —

ಸುಕ್ಕುಗಟ್ಟಿದ ಕೈಗಳು, ಜೀವನದ ಕಹಿಯನ್ನು ತನ್ನಲ್ಲಿ ಹರಿಯ ಬಿಡುತ್ತಿರುವ ಹಣೆಯ ನೆರಿಗೆಗಳು, ತುಂಬಿದ ಆಳವಾದ ದೃಷ್ಟಿ, ಮನದ ಮೂಲೆಯೊಂದರಲ್ಲಿ ಕುಳಿತು ಕೆಣಕುತ್ತಿರುವ ನೋವು ತುಟಿಯ ಕೆಳ ಬಾಗುವಿಕೆಯಿಂದ ತಿಳಿಯುತಿತ್ತು.

ಈಕೆಯೂ ಒಬ್ಬ ತಾಯಿ. ತಾನು ಚಿತ್ರಿಸಬೇಕೆಂದು ಹೊರಟಾಕೆ ಎಳೆ ಹರೆಯದಾಕೆ. ಈಕೆ ತುಂಬಿದ ಜೀವನದವಳು. ಅವಳು ಅನುಭವಿಸಿರಲಾರದ ಏರಿಳಿತಗಳನ್ನು ಈಕೆ ಅನುಭವಿಸಿರಬಹುದು.

"ಪ್ರಯತ್ನಿಸಬೇಕು ಮಗೂ, ಇನ್ನೂ ಪ್ರಯತ್ನಿಸಬೇಕು. ಜೀವನದಲ್ಲಿ ಪ್ರಯತ್ನಕ್ಕೆ ದೊರೆಯುವ ಪ್ರತಿಫಲ—ಗೆಲುವು. ನನ್ನ ಚಿತ್ರವನ್ನು ಸೊಗಸಾಗಿ ಚಿತ್ರಿಸಿದ್ದಿಯಾ. ಇದೇ ಬಗೆಯಾಗಿ ನಿನ್ನ ಮನಸ್ಸಿನಲ್ಲಿರುವ ಆ ಎಳೆಯ ತಾಯಿಯ ಚಿತ್ರವನ್ನು ಬಿಡಿಸು."

"ನಿನ್ನಲ್ಲಿರುವ ಅರ್ಥಪೂರ್ಣ, ಭಾವಪೂರ್ಣ ನೋಟ ಆಕೆಗಿಲ್ಲಮ್ಮಾ. ಹಾಗಾಗಿ ಚಿತ್ರಿಸಲು ಸಾಧ್ಯವಾಗಿಲ್ಲ."

"ಸುಳ್ಳದು ಮಗೂ, ಹೆಂಗುಸು ಒಂದು ಹೆತ್ತರೂ ತಾಯಿ, ಹತ್ತು ಹೆತ್ತರೂ ತಾಯಿ ಒಂದರ ಅನುಭವ ಹತ್ತಕ್ಕೆ ದಾರಿ. ಒಂದರ ನೋವು ಮುಂದಿನ ಹತ್ತು ನೋವುಗಳ ಸೂಚನೆ."

"ನನಗೆ ಹಾಗೆ ಕಾಣಿಸುತ್ತಿಲ್ಲ."

"ನಿನ್ನ ನೋಟ ಹಾಗಿಲ್ಲ. ಆ ತಾಯಿಯ ಕುರಿತಾಗಿ ನಿನ್ನಲ್ಲಿ ಇರುವ ಅಭಿಪ್ರಾಯಗಳನ್ನು ನೆನಪಿಸಿಕೋ. ಅವಳಲ್ಲಿರುವ ತಾಯ್ತನಕ್ಕೆ ನೀನು ಪಟ್ಟಕಟ್ಟುತ್ತಿಲ್ಲ, ಬದಲಾಗಿ ಅಂದಕ್ಕೆ ಸೋತಿರುತ್ತಿ."

ಇಂತಹ ವಿಮರ್ಶೆ ಉಪಾಧ್ಯಾಯರ ತಾಯಿಯೊಬ್ಬಳಿಂದ ಬಂದೀತೆಂದು ಆನಂತ ನಿರೀಕ್ಷಿಸಿರಲಿಲ್ಲ. ಅಷ್ಟು ಸಹಜವಾಗಿತ್ತು.

"ಪ್ರಯತ್ನಿಸುತ್ತೇನೆ ತಾಯೇ" ಎಂದು ನುಡಿಯುತ್ತಾ ಕುಂಚವನ್ನು ಚಿತ್ರದ ಮೇಲೆ ಓಡಿಸಲು ತೊಡಗಿದ. ಒಂದು ಗಂಟೆಯೊಳಗೆ ಚಿತ್ರಪೂರ್ಣಗೊಂಡಿತು. ನಿಟ್ಟುಸಿರುಗಳೊಡನೆ ಕುಂಚಗಳನ್ನು ತೊಳೆದಿಟ್ಟು ಕುರ್ಚಿಯಲ್ಲಿ ಕುಳಿತ.

ಚಿತ್ರಗಾರನಿಗೆ ಹೇಳುವವರು ಅದೆಷ್ಟು ಮಂದಿ. ಅದೇ ಕವಿಗೋ ಸಂಗೀತಗಾರನಿಗೋ, ಹೇಳುವವರಿಲ್ಲ. ತಾದ್ರೂಪಿಕತೆಯ ಅರಿವು ಎಲ್ಲರಲ್ಲಿರುವುದೇ ಚಿತ್ರಗಾರನಿಗೆ ಕೇಡು.

— ೧೪ —

"ಸರ್........"

"ಬಂದೇ"

ಅನಂತ ಜಗಲಿಯಲ್ಲಿ ಕುಳಿತ. ಇದೇ ಮನೆಗೆ ಕೆಲವು ವರುಷಗಳ ಹಿಂದೆ ಬಂದಿದ್ದ. ಅಂದು ಉಪಾಧ್ಯಾಯರು ಮೂಲೆಯ ಕೋಣೆ

ಯಲ್ಲಿ ಮಲಗಿಕೊಂಡು ಏಸನ್ನೋಧ್ಯಾನಿಸುತಿದ್ದ ದೃಶ್ಯ ಮನದ ಎದುರು ಹಾಯಿತು.

ಅಡ್ಡವಸ್ತ್ರ ಉಟ್ಟುಕೊಂಡು, ಹೆಗಲ ಮೇಲೆ ಬೈರಾಸನ್ನು ಹೇರಿಕೊಂಡು ಉಪಾಧ್ಯಾಯರು ಹೊರಬಂದರು. ಅನಂತ ಭಕ್ತಿಪೂರ್ವಕವಾಗಿ ನಮಸ್ಕರಿಸಿದ. ಅವರು ಪ್ರತಿ ನಮಸ್ಕರಿಸಿ, ಆತನನ್ನು ಕುಳಿತಿರಲು ಹೇಳಿ ಒಳ ತೆರಳಿದರು

"ಚಿತ್ರ ನಿನ್ನೆ ಮುಗಿದಿತ್ತು. ಇವತ್ತು ಬೆಳಿಗ್ಗೆ ಬರಲಾಗಲಿಲ್ಲ." ಎಂದು ಅವರು ಹೊರ ಬಂದೊಡನೆ ಕೈಯಲ್ಲಿದ್ದ ಸುರಳಿಯನ್ನು ಮುಂದು ಚಾಚಿ ನುಡಿದ. ತುಂಬಿದ ಮನಸ್ಸಿನಿಂದ ಅವರದನ್ನು ಕೈಗೆತ್ತಿಕೊಂಡು ನೋಡಿದರು. ಮನಸ್ಸಿನಲ್ಲಿ ಸಂತೋಷ ತುಂಬಿ ತುಟಿ ಅಗಲಗೊಂಡಿತು.

"ನೋಡು ಅನಂತಾ, ನಿನ್ನನ್ನು ಹೊಗಳುತ್ತೇನೆಂದು ತಿಳಿಯಬೇಡ. ನನ್ನ ತಾಯಿಯ ಚಿತ್ರ ಇಷ್ಟು ಚೆನ್ನಾದೀತೆಂದು ನಾನೇ ಯೋಚಿಸಿರಲಿಲ್ಲ."

ಅನಂತ ನಾಚಿದ.

"ವೆಚ್ಚ ಎಷ್ಟಾಯಿತು?"

"ನೀವು ಬೇಸರಿಸದಿದ್ದರೆ ಒಂದು ಮಾತು, ಸರ್"

"ಹೇಳಪ್ಪಾ—ಬೇಸರವೇನು?"

"ಈ ಚಿತ್ರಕ್ಕಾಗಿ ನನಗೆ ತಗಲಿದ ವೆಚ್ಚ ಸ್ವಲ್ಪ. ಹಾಗಾಗಿ ನೀವು ನನಗೆ ಹಣ ಕೊಡಬಾರದು ಸರ್. ನನ್ನ ನೆನಪಿಗೆಂದು ಇದು ನಿಮ್ಮಲ್ಲಿ ಇರಲಿ."

"ನಿನ್ನ ಗುಣ ನನಗೆ ಗೊತ್ತು ಅನಂತಾ" ಎಂದರು ಉಪಾಧ್ಯಾಯರು. ಅವರ ಅಂತಃಕರಣದ ಮಾತುಗಳನ್ನು ಅನಂತನಿಗೆ ನುಂಗಲಾಗಲಿಲ್ಲ. ಒಳ ತೆರಳಿ ತನ್ನ ಹೆಂಡತಿಯನ್ನು ಕರತಂದು ಅವಳಿಗೆ ಚಿತ್ರ ತೋರಿಸಿದರು. ಮಕ್ಕಳೂ ನೋಡಿದರು. "ಅಜ್ಜಿ....ಅಜ್ಜಿ..." ಎಂಬ ಗದ್ದಲ ಮನೆ ತುಂಬಿತು.

ಒಂದು ಗಿಂಡಿ ಪಾನಕ ಮತ್ತು ನಾಲ್ಕಾರು ಟೋಸ್ಟುಗಳು

ಬಂದುವು. ಸಂಕೋಚವಿಲ್ಲದೆ ಅವುಗಳನ್ನು ತೀರಿಸಿದ ಅನಂತ. ಬಳಿಕ ಆವರಿಗೆ ವಂದಿಸಿ, ಹೊರಬಂದ.

— ೧೫ —

ಕೃಷ್ಣಪ್ಪನಲ್ಲಿ ಅನಂತ ತಲಪುವ ವೇಳೆ ಗಂಟೆ ಎಂಟಕ್ಕೆ ಸಮೀಪಿಸಿತ್ತು. ದಿನದ ದುಡಿಮೆಯನ್ನು ಎಣಿಸುತಿದ್ದ ಕೃಷ್ಣಪ್ಪ. ಅನಂತನನ್ನು ಕಂಡೊಡನೆ ಕಾಫಿಗೆ ಹೇಳಿಕಳುಹಿಸಿದ.

ನಿಟ್ಟುಸಿರಿಡುತ್ತಾ ಅನಂತ ಸ್ಟೂಲಲ್ಲಿ ಕುಳಿತ. ಹಣದ ಎಣಿಕೆಯ ಬಳಿಕ ಕೃಷ್ಣಪ್ಪನ ಗಮನ ಇವನತ್ತ ತಿರುಗಿತು.

"ಬಹಳ ದಿನಗಳ ಬಳಿಕದ ದರ್ಶನ."

"ನಾಲ್ಕು ದಿನಗಳು ಬಹಳ ದಿನಗಳೆಂದು ಆಗಲಾರವು. ಇವತ್ತು ಹೊರ ಬರಲೇಬೇಕಿತ್ತು."

"ಕಾರಣ?"

"ಉಪಾಧ್ಯಾಯರಲ್ಲಿ ಅವರ ತಾಯಿಯ ಚಿತ್ರವನ್ನು ಕೊಂಡು ಹೋಗಿದ್ದೆ. ಆವರಿಗೆ ಚಿತ್ರ ಕಂಡು ಸಂತೋಷವಾಯಿತು."

"ಸ್ವಾಭಾವಿಕವದು."

ಅನಂತನೆಡೆ ವಿಶೇಷ ಗಮನ ಕೊಡದೆ ಕೃಷ್ಣಪ್ಪ ಅಂಗಡಿ ಮುಚ್ಚುವ ಸಿದ್ಧತೆಗೆ ತೊಡಗಿದ. ಕುಳಿತಲ್ಲಿಂದ ಅನಂತ ಎಲ್ಲವನ್ನು ನೋಡುತಿದ್ದ. ಮಾರ್ಗದ ವಿದ್ಯುದ್ದೀಪಗಳು ಉರಿಯುತಿದ್ದುವು.

"ಕಿಟ್ಟೂ" ಎಂದು ಉದ್ವೇಗದಿಂದ ಕೂಗಿ ಮೇಲಕ್ಕೆದ್ದ ಅನಂತ. ಕೃಷ್ಣಪ್ಪ ಬೆಚ್ಚಿ ಬಿದ್ದ. ಅನಂತನ ದೃಷ್ಟಿ ಮಾರ್ಗದಲ್ಲಿ ಮಗುವೊಂದನ್ನು ಸೊಂಟದಲ್ಲಿ ಏರಿಸಿ ಬರುತಿದ್ದಾಕೆಯಲ್ಲಿ ನೆಟ್ಟಿತ್ತು.

"ಏನು ಅನಂತಾ?"

"ಅವಳೇ ಅಲ್ಲವೇ?"

"ಯಾರು?"

"ಅಲ್ಲಿ ಬರುತಿದ್ದಾಳೆ ನೋಡು."

ಅಷ್ಟರಲ್ಲಿ ಆಕೆ ವಿದ್ಯುದ್ದೀಪದ ಬೆಳಕಿನ ವರ್ತುಲದೊಳಗೆ ಬಂದಿ

ದ್ದಳು. ಅವಳ ಮೇಲೆ ಬಿದ್ದ ಬೆಳಕಿನಿಂದ ಕೃಷ್ಣಪ್ಪ ಅವಳನ್ನು ಕಂಡು ಗುರುತಿಸಿದ.

"ಓ, ಅವಳೇ?"

ಅನಂತ ಮೊಗದಿರುವಿ ಕೃಷ್ಣಪ್ಪನನ್ನು ಕಂಡ. ತಾತ್ಸಾರದ ಚಿನ್ಹೆ ಅಲ್ಲಿತ್ತು. ಸುತ್ತಲೊಮ್ಮೆ ನೋಡಿ ಕೆಳ ಧಾವಿಸಿದ. ಕೃಷ್ಣಪ್ಪನಿಗೆ ಆಶ್ಚರ್ಯ. ಧಾವಿಸಿದ ಅನಂತ ಅವಳೊಡನೆ ಏನೋ ತೊದಲುವಂತೆ ಕಂಡಿತು. ಆಕೆ ಇವನೆಡೆಗೆ ವಿಶೇಷ ಗಮನಹರಿಸದೆ ಮುಂದೇದಳು. ಅನಂತ ಸೋತ ಮೊಗ ಹಾಕಿಕೊಂಡು ಅವಳ ಬೆನ್ನು ಕಾಣುತಿದ್ದ. ಮುಂದುವರಿದಿದ್ದಾಕೆ ಅಪರಿಚಿತನೊಬ್ಬನ ತೊದಲಿಕೆ ಕಂಡು ಹೆದರಿರ ಬೇಕು. ಕಾರಣ ನಾಲ್ಕಾರುಬಾರಿ ಹಿಂತಿರುಗಿ ಕಂಡಳು. ಸಮೀಪದ ಅಂಗಡಿಯವರ ಗಮನ ಅನಂತನಲ್ಲಿ ಕೇಂದ್ರೀಕೃತವಾಗಿತ್ತು. ಕೃಷ್ಣಪ್ಪ ಅವನ ಬಳಿ ತೆರಳಿ ಭುಜದ ಮೇಲೆ ಕೈ ಇರಿಸಿದ. ಅನಂತನ ಎದೆ ಹೊಡೆತ ಕೇಳಿಸುವಷ್ಟು ದನಿಗೊಂಡಿತ್ತು.

"ಹೀಗೆಲ್ಲಾ ಏಕೆ ಮಾಡುತ್ತೀ ಅನಂತಾ?"

ಕನಸಿಂದ ಎಚ್ಚರಗೊಂಡ ಅನಂತ. ಕೃಷ್ಣಪ್ಪನ ತೋಳುಗಳನ್ನು ಬಿಗಿಯಾಗಿ ಹಿಡಿದುಕೊಂಡು ಮಿದುವಾದ ದನಿಯಲ್ಲಿ ಹೇಳಿದ—

"ಆಕೆಯ ಪರಿಚಯ ನಿನಗಿದೆಯೆ ಕಿಟ್ಟೊ?"

"ಇದೆ. ಸಣ್ಣ ತರಗತಿಯಲ್ಲಿ ನನ್ನ ಸಹಪಾಠಿ."

"ನನಗೊಮ್ಮೆ ಅವಳ ಪರಿಚಯ........"

ಕೃಷ್ಣಪ್ಪ ವಿಷಾದಪೂರ್ಣ ನಗು ಸೂಸಿದ. ಆತನ ಕಾಲುಗಳು ಅನಂತನ ಕಾಲುಗಳಿಗೆ ಬಲಕೊಟ್ಟುವು. ಇಬ್ಬರೂ ಅಂಗಡಿಯ ಬಳಿ ತೆರಳಿದರು. ಕಾಫಿ ಅದಾಗಲೇ ಬಂದಿತ್ತು. ಕೃಷ್ಣಪ್ಪನಿಗೆಂದು ಬಂದಿದ್ದ ಕಾಫಿಯನ್ನು ಅನಂತ ತಾನೇ ಬರಿದು ಮಾಡಿದ.

"ನಿನಗೆ ಅವಳ ಪರಿಚಯ ಏಕೆ?"

"ಬೇಕು."

"ನನ್ನಲ್ಲಿ ಹೇಳಬಾರದೇ?"

ಅನಂತ ಹೇಳಲಿರುವುದಾದರೂ ಏನನ್ನು? ಯಾರು ಆತನನ್ನು ಪರೋಕ್ಷವಾಗಿ ಚಿತ್ರಗಾರರನ್ನಾಗಿ ಮಾಡಿದ್ದರೋ, ಯಾರು ಆತನನ್ನು ಇಂದಿಗೂ ಸಜೀವಿಯಾಗಿ ಇರಿಸಿರುವರೋ, ಅಂತಹವರ ಪರಿಚಯು ಏಕೆ ಬೇಕೆಂದು ಕೇಳಿದರೆ ಏನು ಉತ್ತರ ಸಿಗಬಲ್ಲುದು?

"ನಿನಗೆ ನನ್ನ ಮನಸ್ಸಿನ ಪರಿಚಯು ಇನ್ನೂ ಆಗಿಲ್ಲ ಕಿಟ್ಟೂ. ನಾನು ಮದ್ರಾಸಿಂದ ಬಂದು ತಿಂಗಳಾರಾದರೂ ಇವಳನ್ನು ಒಮ್ಮೆ ಯಾದರೂ ನೋಡಿಲ್ಲ, ಆಶ್ಚರ್ಯವಲ್ಲವೇ?"

ಕೃಷ್ಣಪ್ಪನಿಗೆ ಅನಂತನ ಹುಚ್ಚಿಗಾಗಿ ಆಶ್ಚರ್ಯ.

"ಒಮ್ಮೆ ಅವಳ ಪರಿಚಯು ಮಾಡಿಸಿಕೊಡಬಲ್ಲೆಯಾ?"

"ಅವಳ ಪರಿಚಯು ಇರುವುದು ಒಳ್ಳೇಯದಲ್ಲ"

"ಏಕೆ?"

"ಅವಳ ಜೀವನದ ಆ ರೀತಿಯುದು."

ಅನಂತ ಮೂಕನಾದ. ತಾನು ಯಾರಲ್ಲಿ ಇದುತನಕ ವಿಶ್ವಾಸ ಇರಿಸಿದ್ದೆನೋ, ಯಾರ ಸ್ಫೂರ್ತಿಯಿಂದ ಬದುಕುತಿದ್ದೆನೋ, ಅಂತಹ ವ್ಯಕ್ತಿಯು ಜೀವನ ಈ ಬಗೆಯುದೇ?

ಮುಂದಿನ ಮಾತು ಕೇಳಲಾರದೆ ಅನಂತ ಅಂಗಡಿಯಿಂದ ಹೊರ ಬಂದ. ಅವನ ಮನದ ತುಮುಲತೆಯು ಪರಿಚಯು ಆದಾಗಲೇ ಆಗಿದ್ದ ಕೃಷ್ಣಪ್ಪ, ಆಳಿಗೆ ಬಾಗಿಲು ಹಾಕಲು ಹೇಳಿ, ತಾನು ಹಣದ ಚೀಲದೊಡನೆ ಅನಂತನನ್ನು ಹಿಂಬಾಲಿಸಿದ. ಅನಂತ ನೇರವಾಗಿ ಹೋಗುತಿದ್ದ.

"ನೀನು ಈ ರೀತಿ ವರ್ತಿಸಬಾರದು ಅನಂತಾ......"

ಅನಂತ ಹಿಂತಿರುಗಿ ಕಂಡ. ಅವನ ಕಣ್ಣಿನಂಚು ಮಿನುಗು ತಿತ್ತು. ಕೃಷ್ಣಪ್ಪನಿಗೆ ನೋವೆನಿಸಿತು.

— ೧೬ —

"ನನ್ನ ಮನಸ್ಸಿನ ವೇದನೆಯು ಪರಿಚಯು ನಿನಗೆ ಆಗಿಲ್ಲ .....ಅವಳ ಜೀವನದ ಕುರಿತಾಗಿ ಅಷ್ಟು ಕಹಿ ಮಾತುಗಳನ್ನು ಕೇಳಲು ನಾನು ಸಿದ್ಧ ನಿರಲಿಲ್ಲ. ನಾನವಳನ್ನು ಮೊದಲಾಗಿ ಕಂಡ ದಿನದ ನೆನಪು ಇನ್ನೂ ಮಾಸಿ ಹೋಗಿಲ್ಲ. ನನ್ನ ತಾಯಿ ಮಗು ಚಿತ್ರ........"

"ಆಕೆಯ ವಿಚಾರ ನಾನು ಒಮ್ಮೆಂದೊಮ್ಮೆ ಹೇಳಿದುದು ತಪ್ಪಾಯಿತು ಅನಂತಾ. ಆದರೂ ನಾನದನ್ನು ಅಡಗಿಸಿಡಲು ಸಾಧ್ಯವಿಲ್ಲವಿತ್ತು. ಇಂದಲ್ಲ, ನಾಳೆಯಾದರೂ ನಿನಗೆ ಅವಳ ಜೀವನದ ಪರಿಚಯ ಆಗಲೇ ಬೇಕಿತ್ತು."

ಅನಂತನ ಕೈ ಬೆರಳುಗಳು ತುಣುಕು ಹುಲ್ಲು ಕೀಳುತಿದ್ದವು. ಕೃಷ್ಣಪ್ಪ ಬಹಳಷ್ಟು ಹೊತ್ತು ಮೌನಿಯಾಗಿದ್ದ.

"ಅವಳ ಪರಿಚಯವನ್ನು ನಿನಗೆ ಮಾಡಿಕೊಡಲು ಕಷ್ಟವಿಲ್ಲ. ಆದರೆ ನಿನ್ನ ಗೌರವಕ್ಕೆ ಅದರಿಂದ ಹಾನಿ ಇದೆ."

"ನನಗೆ ಗೌರವ ಎಂಬುದಿಲ್ಲ.

"ಸುಳ್ಳದು."

"ನನ್ನ ಗೌರವದ ಕುರಿತು ನೀನು ಹೇಳ ಬೇಕಾಗಿಲ್ಲ," ಅನಂತನ ದನಿಯು ಬಿರುಸು ಏರಿತ್ತು. ಕೃಷ್ಣಪ್ಪ ತೆಪ್ಪಗಾದ. ಅವರಿಬ್ಬರ ಪರಿಚಯದ ಇದಿಷ್ಟು ವರ್ಷಗಳಲ್ಲಿ ಅನಂತನ ಕೋಪದ ಪರಿಚಯವಾದುದು ಕೃಷ್ಣಪ್ಪನಿಗೆ ಕೆಲವೇ ಬಾರಿ. ಅನಂತನಿಗೆ ಸಿಟ್ಟು ಬಂದಾಗಲೆಲ್ಲಾ ಮೌನಿಯಾಗಿರುವ ಅಭ್ಯಾಸವನ್ನು ಕೃಷ್ಣಪ್ಪ ಬೆಳೆಸಿಕೊಂಡುದು ಹೀಗೆ.

ದೊಡ್ಡದೊಂದು ಉಲ್ಕೆ ಕೆಳಗುರುಳಿತು. ಕೃಷ್ಣಪ್ಪನ ಬಾಯಿಯಿಂದ 'ಅಬ್ಬಾ' ಎಂಬ ಮಾತು ಹೊರಬಿತ್ತು.

'ಇನ್ನು ಹೋಗೋಣ ಅನಂತಾ?'

'ನಾನು ಬರುವುದಿಲ್ಲ.'

'ನಿನ್ನ ಆರೋಗ್ಯದ ದೃಷ್ಟಿಯಿಂದ......'

'ನನಗೆ ಆರೋಗ್ಯವಿಲ್ಲ, ಗೌರವವಿಲ್ಲ, ಸ್ಥಾನವಿಲ್ಲ, ಧನವಿಲ್ಲ, ನನ್ನಂಥವನನ್ನು ನೀನು ಏಕೆ ಗೆಳೆಯನಾಗಿ ಸ್ವೀಕರಿಸಿದೆ?'

ಅನಿರೀಕ್ಷಿತ ಪ್ರಶ್ನೆಗೆ ಕೃಷ್ಣಪ್ಪ ಉತ್ತರಿಸಲಿಲ್ಲ.

'ಮನೆಯ ಕಡೆ ಹೋಗೋಣ' ಎಂದು ಸ್ವಲ್ಪ ದನಿ ಏರಿಸಿ ಕೃಷ್ಣಪ್ಪ ನುಡಿದ. ಅನಂತನಿಗೆ ಮಾತಿನ ಕಾವಿನ ಪರಿಚಯವಾಯಿತು. ಮೆಲ್ಲನೆ ಮೇಲಕ್ಕೆದ್ದ. ಅವನ ಮನೆಯ ಗೇಟಿನ ತನಕ ಅನಂತನನ್ನು ತಲುಪಿಸಿದ ಆ ಗೆಳೆಯ.

— ೧೭ —

"ಐದಾರು ವರ್ಷಗಳ ಬಳಿಕ ನಿನ್ನನ್ನು ಇಂದು ನಾನು ಕಂಡೆ. ಕಂಡ ಬಳಿಕ ಅನಿಸಿತು—ಕಾಣಬಾರದಾಗಿತ್ತು ಎಂದು. ಎಷ್ಟು ಇಳಿದು ಹೋಗಿದ್ದಿಯಾ. ಜೀವನ ಅಸಹನೀಯವಾಗಿದೆಯೇ? ನೀನೊಬ್ಬಳೇ ನೋವುಗೊಂಡವಳೆಂದು ತಿಳಿಯಬೇಡ........ನಿನಗಿಂತ ನೂರು ಪಾಲು ನೋವುಗೊಂಡವರಿದ್ದಾರೆ.

"ನಿನ್ನ ಪರಿಚಯ ನನಗಿದೆ. ಆದರೆ ನನ್ನ ಪರಿಚಯ ನಿನಗಿಲ್ಲ. ನೋಡು, ಮಗುವಿನ ತಾಯೀ. ನಿನ್ನ ಪರಿಚಯ ಮಾಡಿಕೊಳ್ಳೋಣ ಎಂದರೆ ಗೌರವ ಇದಿರು ಬರುತ್ತದಂತೆ. ನಾನು ರೋಗಿ ನಿಜ. ರೋಗಿಯಾದೊಡನೆ ಜಗತ್ತಿನ ವ್ಯಾಮೋಹಗಳಿಂದ ದೂರವಿರಬೇಕೆಂದು ಇದೆಯೇ? ಒಂದೇ ಒಂದು ಬಾರಿ ನಿನ್ನ ಪರಿಚಯ ನನಗೆ ಆಗುತಿದ್ದರೆ........"

ಪತ್ರದ ಒಕ್ಕಣೆ ಮನಸ್ಸಲ್ಲಿ ಮೂಡುತಿತ್ತು. ಬರೆಯಲು ಅಸಾಧ್ಯವಾಗಿತ್ತು. ದೀಪವನ್ನು ಉರಿಸಿ, ಮೂಲೆಯಲ್ಲಿ ತೆಗೆದಿರಿಸಿದ್ದ ಹಳೆಯ ಚಿತ್ರವನ್ನು ಮೇಲಕ್ಕೆತ್ತಿದ. ಮಗುವಿನ ಮೊಗ ಬಣ್ಣದ ಕೆಸರಿಂದ ತುಂಬಿಕೊಂಡಿತ್ತು.

"ನಾನು ಹೀಗೆ ಮಾಡಬಾರದಾಗಿತ್ತು. ಇದರಿಂದ ಆಕೆಗೆ ದ್ರೋಹ ಆದಂತಾಯಿತು. ಇಲ್ಲ. ನಿಮ್ಮಿಬ್ಬರ ಚಿತ್ರವನ್ನು ಇನ್ನೊಮ್ಮೆ ಸಂಪೂರ್ಣವಾಗಿ, ಪರಿಪೂರ್ಣವಾಗಿ ಚಿತ್ರಿಸುತ್ತೇನೆ," ಎಂದು ಚಿತ್ರವನ್ನು ಕಣ್ಣಿನ ಸಮೀಪಕ್ಕೆ ತಂದು ನುಡಿದ. ಅಕ್ಕ ಊಟಕ್ಕೆ ಕರೆದಳು.

"ಹಸಿವಿಲ್ಲ ಅಕ್ಕಾ."

"ಸ್ವಲ್ಪ ಊಟ ಮಾಡು," ಎಂಬ ಗದರಿಕೆಯ ಮಾತು ಬಂತು. ನಿರುಪಾಯನಾಗಿ ಮೇಲಕ್ಕೆದ್ದ. ಅಂಗೈ ಬೆವರಿತ್ತು.

— ೧೮ —

ಮನಸ್ಸಿನ ಒಕ್ಕಣೆಯನ್ನು ಪತ್ರದಲ್ಲಿ ಅಂದು ಮೂಡಿಸಲಿಲ್ಲ. ಕೃಷ್ಣಪ್ಪ ಆಕೆಯ ಮೇಲೆ ಹೊರಿಸಿದ್ದ ನೈಯುಕ್ತಿಕ ನಿಂದನೆಯ ಪುನರಾ

ವರ್ತನೆ ಮನದಲ್ಲಿ ನಡೆಯುತಿತ್ತು. ಆಕೆ ಗೌರವರಹಿತ ಎಂದರೇನು? ಅವಳಿಗೆ ಗಂಡನಿಲ್ಲವೇ? ಈ ಮಗುವನ್ನು ಯಾರಿಂದಲಾದರೂ ಪಡೆದುದೇ?

ಮಗುವನ್ನು ಯಾರಿಂದ ಪಡೆದಳು ಎಂಬುದು ಅಮಾನ್ಯ. ಮುಖ್ಯವಾಗಿ ಆಕೆ ತಾಯಿ. ತಾಯಿಗೆ ತನ್ನ ಮಗುವಿನ ಮೇಲೆ ಮಮತೆ ಇರಬೇಕಾದುದು ಸಹಜ. ಅಂತಹ ಮಮತೆಯನ್ನು ತಾನು ಚಿತ್ರಿಸಲು ಶಕ್ತನೆಂದಾದರೆ, ಚಿತ್ರಿಗನಾದುದು ಸಾರ್ಥಕ್ಯ ಹೊಂದಿದಂತೆ.

ಈಕೆಯ ಮಗು ಯಾರದೋ........

ಮದ್ರಾಸಿನಲ್ಲಿ ನೀತಿಯ ನಿಮ್ನಾವಸ್ಥೆಯನ್ನು ಕಂಡಿದ್ದ ಅನಂತನಿಗೆ ಈಕೆ ತ್ಯಾಜಳು ಎಂದು ತೋರಲಿಲ್ಲ. ನಡು ಮಧ್ಯಾಹ್ನದ ಹೊತ್ತಲ್ಲಿ ಅಲ್ಲಿ ನಡೆಯುವ ಅಸ್ವಾಭಾವಿಕ, ಅನುಚಿತ ಕೃತ್ಯಗಳು, ಅನಂತನನ್ನು ಮೊದಮೊದಲು ನಡುಗಿಸಿ ಬಿಟ್ಟಿದ್ದವು. ಒಂದು ದಿನ ಅನಂತ ಏಕೋ ಸೆಂಟ್ರಲ್ ಸ್ಟೇಷನಿನ ಬಳಿ ನಿಂತಿದ್ದ. ಅವನಿಂದ ಸ್ವಲ್ಪ ದೂರದಲ್ಲಿ ಒಬ್ಬಾಕೆ ನಿಂತಿದ್ದಳು. ಈತನನ್ನು ಹಲಬಾರಿ ಕೆಣಕುವ ನೋಟದಿಂದ ಕಂಡಳು. ಅಂತಹ ನೋಟಗಳನ್ನು ತಿಳಿದುಕೊಳ್ಳುವಷ್ಟು ಚೈತನ್ಯ ಅನಂತನ ಕಿಸೆಗೆ ಇರಲಿಲ್ಲ. ಎಲ್ಲಿಂದಲೋ ತರುಣನೊಬ್ಬ ಬಂದ. ಕಾಣಲು ಕೋಲೇಜ್ ವಿದ್ಯಾರ್ಥಿಯಂತಿದ್ದ. ಆಕೆ ಆತನನ್ನು ಕಂಡೊಡನೆ ಸಮೀಪದ ಹಾಳು ಕೋಣೆಗೆ ಸಂಶಯ ಬಾರದಂತೆ ಸರಿದಳು. ಈತನೂ ಅಲ್ಲೋಡಿದ. ಸ್ವಲ್ಪ ಹೊತ್ತಲ್ಲಿ ಆತ ಹಿಂತಿರುಗಿದ. ಇದಾದ ಕೆಲ ನಿಮಿಷಗಳಲ್ಲಿ ತನ್ನ ನಿತಂಬದ ಮೇಲಿನ ಸೆರಗಿನ ಭಾಗವನ್ನು ಸರಿಪಡಿಸಿಕೊಳ್ಳುತ್ತಾ ಆಕೆ ಹೊರ ಬಂದಳು. ಅನಂತ ಆಗ ಕಣ್ತೆರೆದ. ಇಂತಹ ಕೃತ್ಯಗಳನ್ನು ತನ್ನ ಮಕ್ಕಳಂತೆ ಸಾಕುತಿದ್ದ ಆ ಮೂಕ ಸ್ಟೇಷನಿನ ದೊಡ್ಡ ದೊಡ್ಡ ಗೋಡೆಗಳನ್ನು ಕಂಡು ನಿಟ್ಟುಸಿರು ಹಾಕಿದ್ದ.

ಅವಳಿಗಿಂತ ಈ ತಾಯಿ ಕೀಳೇ?

ಇರಲಾರದು. ಇವಳ ಮೊಗದಲ್ಲಿ ಹೀನತೆ ಕಂಡು ಬರುತ್ತಿಲ್ಲ. ಹಲವು ವರುಷಗಳ ಹಿಂದೆ ತಾನು ಜಾತ್ರೆಯಲ್ಲಿ ಕಂಡಿದ್ದಾಗ ಇದ್ದ

ಮುಗ್ಧತೆಯ ಬದಲು ಪ್ರೌಢತೆ ಬಂದಿತ್ತು. ಹಿಂದಿಗಿಂತ ಇಳಿದು ಹೋಗಿದ್ದಳು. ಅಷ್ಟೇ.

ಕೃಷ್ಣಪ್ಪನಿಂದ ಹೇಗಾದರೂ ಅವಳ ಪರಿಚಯ ದೊರಕಿಸಿಕೊಳ್ಳಬೇಕೆಂಬ ನಿಶ್ಚಯಕ್ಕೆ ಬಂದ. ಹೊರ ತೆರಳಲು ಸಿದ್ಧನಾದ. ಅಕ್ಕ ಎಲ್ಲಿಗೆಂದು ಕೇಳಿದಳು. ಇಲ್ಲಿಯೇ—ಹೀಗೆಯೇ--ಎಂದು ಉತ್ತರಿಸಿದ. ಅಕ್ಕ ಹೇಳುತಿದ್ದ ಎಚ್ಚರಿಕೆಯ ಮಾತುಗಳು ಕಿವಿಗೆ ಬೀಳುವ ಮುನ್ನ ಆತ ಗೇಟಿನ ಬಳಿ ಸರಿದಿದ್ದ. ಅವನ ಮನಸ್ಸು ಆದಾಗಲೇ ಕೃಷ್ಣಪ್ಪನ ಮನೆ ಸೇರಿತ್ತು.

— ೧೯ —

ಅನಿರೀಕ್ಷಿತವಾಗಿ ಬಂದ ಅನಂತನನ್ನು ಇದಿರುಗೊಳ್ಳಲು ಕೃಷ್ಣಪ್ಪ ಸಿದ್ಧನಿರಲಿಲ್ಲ. ಕಾರಣ ದಿನದ ಕೆಲಸ ಮುಗಿಸಿ, ಮನೆಗೆ ಬಂದವನೇ ಸ್ನಾನ ತೀರಿಸಿ, ಊಟದ ಮೊದಲು ತನ್ನ ಕೋಣೆ ಸೇರಿ ಸ್ವಲ್ಪವಷ್ಟೇ ಮದ್ಯ ಕುಡಿಯುವ ಅಭ್ಯಾಸ ಅವನದು. ಮನೆಯವರಿಗೆ ಹೊರತು ಬೇರೆಯವರಿಗೆ ತಿಳಿಯದಿದ್ದ ವಿಷಯವದು. ಅನಂತ ಆತನ ಸಮೀಪವರ್ತಿಯಾಗಿದ್ದರೂ, ಈ ದಿಸೆಯಲ್ಲಿ ಅಜ್ಞಾನಿ.

ಕೋಣೆಯ ಒಳಬಂದ ಅನಂತನಿಗೆ ಮದ್ಯದ ವಾಸನೆ ಮೂಗಿಗೆ ಹೊಡೆಯಿತು. ಪ್ರಶ್ನಾರ್ಥಕ ದೃಷ್ಟಿಯಿಂದ ಕೃಷ್ಣಪ್ಪನನ್ನು ಕಂಡ. ತನ್ನ ಅಭ್ಯಾಸದ ಪರಿಚಯ ಅನಂತನಿಗಾದುದು ಕೃಷ್ಣಪ್ಪನಿಗೆ ಬೇಸರವೆನಿಸಲಿಲ್ಲ.

“ನಿನಗೆ ಬೇಸರವಾಯಿತೋ ಏನೋ?”

“ಎಕೆ?”

“ನಾನು ಕುಡಿಯುತ್ತಿರುವುದನ್ನು ಕಂಡು”

“ಹೌದು, ಬೇಸರವಾಗಿದೆ. ಆದರೆ ನಾನು ಏನು ಹೇಳಲೂ ಬಯಸುವುದಿಲ್ಲ. ಕೆಲವರು ದುಃಖ ದೂರಮಾಡಲೆಂದು ಕುಡಿಯುತ್ತಾರೆ, ಕೆಲವರು ವಿನೋದಕ್ಕಾಗಿ ಕುಡಿಯುತ್ತಾರೆ, ಇನ್ನು ಕೆಲವರು ಅಭ್ಯಾಸಬಲದಿಂದ ಕುಡಿಯುತ್ತಾರೆ. ನೀನು ಯಾವ ಪಂಗಡಕ್ಕೆ ಸೇರಿದವ?”

"ಹಿಂದೆ ವಿನೋದಕ್ಕೆಂದು ಕುಡಿದು ಈಗ ಅಭ್ಯಾಸಬಲದಲ್ಲಿ ಬಿದ್ದಿರುವವರ ಪಂಗಡಕ್ಕೆ ಸೇರಿದವ."

"ಕುಡಿದಿದ್ದರೂ ಎಷ್ಟು ಸ್ಪಷ್ಟ ಮಾತನಾಡುತ್ತೀ?"

"ನಾನು ಹೆಚ್ಚು ಕುಡಿಯುವುದಿಲ್ಲ."

"ಮನಸ್ಸಿನಲ್ಲಿ ತುಂಬಾ ಬೇಸರವಿದ್ದರೆ ಕುಡಿತದಿಂದ ಸಮಾಧಾನ ಸಿಗುತ್ತದೆ ಎನ್ನುತ್ತಾರೆ. ನಿಜವೇ?"

"ಇರಬಹುದು."

"ನನ್ನ ಮನಸ್ಸಿನಲ್ಲಿ ಈಗ ತುಂಬಾ ಬೇಸರವಿದೆ ಕಿಟ್ಟೊ. ನನಗೂ ಸ್ವಲ್ಪ ಕುಡಿಯೋಣ ಎಂದಾಗುತ್ತದೆ."

ಕೃಷ್ಣಪ್ಪ ತನ್ನ ಬಳಿ ಇದ್ದ ಬಾಟ್ಲಿಯನ್ನು ಚಾಚೂ ಎನ್ನದೆ ಒಳ ತೆಗೆದುಕೊಂಡು ಹೋದ. ಅನಂತ ತಡೆಯಲಿಲ್ಲ. ಸ್ವಲ್ಪ ಹೊತ್ತಲ್ಲಿ ಕೃಷ್ಣಪ್ಪ ಹಿಂತಿರುಗಿ ಬಂದು ಅನಂತನನ್ನು ನೋಡಿ ನಕ್ಕ.

"ಬ್ರಾಂಡಿ ಮತ್ತು ಇಸ್ಪೀಟನ್ನು ಹತ್ತಿರ ಇಟ್ಟುಕೊಂಡಿರಬಾರದು ಎಂದು ಹಲವರು ಹೇಳಿದ್ದನ್ನು ಕೇಳಿದ್ದೇನೆ. ಅದಕ್ಕಾಗಿ ಒಳ ತೆಗೆದು ಕೊಂಡು ಹೋದೆ" ಎಂದು ತಾನು ಉಟ್ಟಿದ್ದ ಬಣ್ಣಬಣ್ಣದ ಅಡ್ಡವಸ್ತ್ರ ದಿಂದ ಮೊಗ ಒರಸಿಕೊಂಡ.

"ನನಗದು ಬೇಕೇಬೇಕು ಎಂದು ಹಟಮಾಡಿದರೆ ನೀನು ತಂದು ಕೊಡಲಾರೆಯಾ?"

"ಇಲ್ಲ."

"ನಾನು ಬೇರೆಲ್ಲಿಂದಾದರೂ ದೊರಕಿಸಿಕೊಂಡು ಕುಡಿದರೆ?"

"ಅನಂತಾ, ನಿನ್ನ ಅಕ್ಕನನ್ನು ಅದಷ್ಟು ಬೇಗ ಕೊಲ್ಲಬೇಕೆಂದು ಹಾರೈಸಬೇಡ."

ಅಕ್ಕನ ವಿಚಾರ ಬಂದಲ್ಲಿ ಅನಂತ ಮೂಕನಾಗುತಿದ್ದ.

ಹೊತ್ತು ಕಳೆಯಿತು. ತಾನು ಬಂದ ಉದ್ದೇಶ ಅನಂತನಿಗೆ ಮರ ವೆಯಾಗ ಹತ್ತಿತು. ತಲೆಯಲ್ಲಿ ಬ್ರಾಂಡಿ ಕುಡಿದರಾಗದೇ ಎಂಬ ಯೋಚನೆ ತೊಡಗಿತು. ಮೇಜಿನ ಮೇಲೆ ಬಿದ್ದಿದ್ದ ಕಾಗದ ಪೆನ್ನುಗ ಳನ್ನು ಎತ್ತಿಕೊಂಡು, ಅಮಲಾಗಿ ಓಲಾಡುವವನ ಚಿತ್ರ ಬರೆದ. ಅದರ

ಕೆಳಭಾಗದಲ್ಲಿ ಅನಂತ ಎಂದು ಗೀಚಿದ. ಕೃಷ್ಣಪ್ಪನೆಡೆಗೆ ಚಿತ್ರವನ್ನು ಚಾಚಿದ ಅವನಿಗೆ ನಗು ಬಂತು.

‘ ನಿನ್ನಂಥವನು ಕುಡಿದರೆ ನೆಟ್ಟಗೆ ನಿಲ್ಲಲು ಸಾಧ್ಯವಿಲ್ಲ, ಮೂಲೆಯಲ್ಲಿ ಮುದ್ದೆಯಾಗಿ ಬಿದ್ದಿರಬೇಕಾದೀತು”, ಎಂದ. ಅನಂತ ನಗುತ್ತಾ ಹೊರ ತೆರಳಿದ. ತನ್ನ ಸ್ವಂತ ಕೋಣೆಯೊಳಗೆ ಹೊಕ್ಕ ಬಳಿಕ ತಿಳಿಯಿತು–ತಾನು ತೆರಳಿದುದು ಒಂದಕ್ಕೆ, ತಿಳಿದು ಬಂದುದು ಬೇರೊಂದನ್ನು ಎಂದು.

— ೨೦ —

ತನ್ನ ಸ್ನೇಹಕ್ಕೆ ಅವಳು ಅಪಾತ್ರಳೆಂದು ಕೃಷ್ಣಪ್ಪ ಹೇಳಿದುದು ಅನಂತನ ಮನದಲ್ಲಿ ಕುಟುಕುತ್ತಲೇ ಇತ್ತು. ಗೆಳೆಯನ ಮೂಲಕ ಪರಿಚಯವನ್ನು ಬೆಳೆಸಿಕೊಂಡರೆ ತನಗೆ ಸಿಗುವ ಲಾಭವಾದರೂ ಏನು? ಅವಳೊಡನೆ ಮಾತನಾಡುವ ಅವಕಾಶ ಸಿಗಬಹುದು. ಹೆಚ್ಚೆಂದರೆ ಅವಳ ಜೀವನದ ರೂಪು ರೇಖೆಗಳ ಸ್ಪಷ್ಟ ಅಭಿಪ್ರಾಯವಾದೀತು. ಬೇಡ· ಆಕೆ ದೂರದಲ್ಲಿದ್ದರೆ ಚಂದ. ತಾನು ತಾಯಿ ಮಗು ಚಿತ್ರವನ್ನು ಮುಗಿಸದೆ ಹೋದರೂ ಚಿಂತಿಲ್ಲ—ಮೊದಲೇ ನೊಂದಿರುವಾಕೆಯನ್ನು ಇನ್ನು ನೋಯಿಸಲಾರೆ.

ಇರುಳು ಹೊತ್ತು ಮನಸ್ಸು ನೂರಾರನ್ನು ಯೋಚಿಸುತ್ತದೆ. ಹುಚ್ಚು ಹುಚ್ಚಾಗುತ್ತದೆ. ಸೂರ್ಯನ ಬೆಳಕಿನೊಡನೆ ಬಳಿಕ ಎಲ್ಲವೂ ಕರಗಿಕೊಳ್ಳುತ್ತದೆ.

ತಾನು ಆಕೆಯನ್ನು ಕಂಡೊಡನೆ ಬಳಿ ತೆರಳಿ ಏನು ತೊದಲಿದೆನೋ. ಅವಳು ಹೆದರಿಕೊಂಡಳೋ ಏನೋ. ಪಾಪ.

ಈ ಪತ್ರ ಅವಳಿಗೆಂದು ಬರೆದುದು. ಆದರೆ ತನ್ನ ಪತ್ರದ ನಿಯಮಿತ ಅರ್ಥ ಅವಳಿಗೆ ತಿಳಿದೀತೇ? ಕೃಷ್ಣಪ್ಪನಿಗೆ ಈ ವಿಚಾರಗಳ ವಾಸನೆ ಹತ್ತಿತೆಂದರೆ ಆತ ನಗಲಾರನೇ?

ಬೆಳಗಾದೊಡನೆ ಕೃಷ್ಣಪ್ಪನ ಮನೆಗೋಡಿದ. ಕೃಷ್ಣಪ್ಪ ಗಂಜಿ ಮುಗಿಸಿಕೊಂಡು, ಬೀಗದ ಕೈ ಗೊಂಚಲನ್ನು ಕಿಸೆಗೆ ಸೇರಿಸುತ್ತಾ, ಮೆಟ್ಟಲು ಇಳಿಯುತಿದ್ದ. ಅನಂತನನ್ನು ಕಂಡು ನಿಂತು ಬಿಟ್ಟ.

"ನಿನ್ನೆ ರಾತ್ರಿಯ ತಲೆ ಬಿಸಿ ಇನ್ನೂ ಆರಲಿಲ್ಲವೇ?" ಎಂದು ಕೃಷ್ಣಪ್ಪನೇ ಮೊದಲಾಗಿ ಕೇಳಿದ. ಅನಂತ ಮೂಕನಂತೆ ಅವನ ಮೊಗವನ್ನು ಕಂಡ. ಉತ್ತರಿಸುವ ಎದೆಗಾರಿಕೆ ಆತನಲ್ಲಿ ಇರಲಿಲ್ಲ.

ಇಬ್ಬರೂ ನಡೆಯ ತೊಡಗಿದರು.

"ನೀನು ಆಕೆಯನ್ನು ಮೆಚ್ಚಿರಬಹುದು. ಆಕೆಯ ಚಿತ್ರವನ್ನು ಚಿತ್ರಿಸಲು ಯತ್ನಿಸಿರಬಹುದು. ಆದರೆ ನಡುರಸ್ತೆಯಲ್ಲಿ, ನಾಲ್ಕಾರು ಕಣ್ಣುಗಳು ನಿನ್ನನ್ನು ನೋಡುತ್ತಿರುವಾಗ, ಅವಳೆಡೆಗೆ ಹಾರಿಹೋಗಿ ನಿಂತು ನೋಡಿದ ವರ್ತನೆ ಮಾತ್ರ ಅಸಭ್ಯವಾದುದು. ಇದರಿಂದ ಪೇಟೆಯ ಜನ ಏನೇನೋ ಹೇಳುವಂತಾಯಿತು" ಎಂದು ಅರೆಬಿರಿತ ನಗುವಿನೊಡನೆ ಹೇಳಿದ ಕೃಷ್ಣಪ್ಪ. ಮುಂಜಾನೆಯೇ ಬೋಧನೆಗೆ ಕಿವಿಕೊಟ್ಟಂತಾಯಿತು. ಅಂಗಡಿಯನ್ನು ತಲಪುವ ತನಕ ಕೃಷ್ಣಪ್ಪ ಏನೇನೋ ಅನ್ನುತಿದ್ದ. ಎಲ್ಲವೂ ಗಾಳಿಗಾಹುತಿ.

"ಅವಳ ಪರಿಚಯ ನನಗೆ ಬೇಕಿಲ್ಲ ಕಿಟ್ಟ್ಯಾ. ಜನರ ನಿಂದೆಯನ್ನು ಎದುರಿಸಲಾರದೆ ನಾನೀ ರೀತಿ ಹೇಳುತಿದ್ದೇನೆಂದು ಭಾವಿಸಬೇಡ. ನನ್ನ ದೃಷ್ಟಿಯಲ್ಲಿ ಹೆಣ್ಣು ಗಂಡಿನ ವ್ಯವಹಾರಗಳಿಗೆ ಜನರ ನಿಂದನೆ ಅನವಶ್ಯಕ. ನಾನು ಆಕೆಯ ಪರಿಚಯ ಬೇಡವೆನ್ನುವುದು ಬೇರೆ ದೃಷ್ಟಿಯಿಂದ. ಒಂದು ವೇಳೆ ನನ್ನ ಮತ್ತು ಆಕೆಯೊಳಗೆ ಸಮೀಪತೆ ಬೆಳೆದರೆ, ಆಕೆಯಲ್ಲಿರುವ ಸೊಗಸು ನನಗೆ ಕಾಣದೆ ಹೋಗಬಹುದು. ಇದರಿಂದಾಗಿ ನಾನಾಕೆಯ ಚಿತ್ರವನ್ನು ಚಿತ್ರಿಸದೆ ಉಳಿಯಬಹುದು" ಎಂದ ಅನಂತ.

"ಓ ಹಾಗೋ. ನಿನಗೆ ಅವಳ ಪರಿಚಯ ಬೇಕಾಗುವುದು ಬರಿಯ ಚಿತ್ರಕ್ಕಾಗಿ ಅಲ್ಲವೇ? ನಿನ್ನಂತಹ ಚಿತ್ರಗಾರನಿದ್ದರೆ ಊರು ಉಳಿಯಲಾರದು" ಬಾಯಿ ತುಂಬಾ ನಗುತ್ತ ಹೇಳಿದ ಕೃಷ್ಣಪ್ಪ.

ತನ್ನ ಗುಟ್ಟನ್ನು ಕೃಷ್ಣಪ್ಪನಲ್ಲಿ ಹೊರಗೆಡಹಿದುದು ತಪ್ಪೆನಿಸಿತು ಅನಂತನಿಗೆ. ಎಷ್ಟೆಂದರೂ ಗೆಳೆಯ. ತನ್ನ ಮನಸ್ಸಿನ ಏರಿಳಿತಗಳ ಪರಿಚಯ ಅವನಿಗೂ ಆಗಲಿ.

ಮುಂದಿನ ಆರು ದಿನಗಳು ಅನಂತನ ದೃಷ್ಟಿಯಿಂದ ನೆಮ್ಮದಿಯ ದಿನಗಳು. ಅವನಕ್ಕನಿಗೆ ಹಿತವೆನಿಸಿತು.

— ೨೧ —

ಒಂದು ವಾರದ ಬಳಿಕ ಕೃಷ್ಣಪ್ಪನಲ್ಲಿಗೆ ಆಕೆ ಬಂದಳು. ಅವಳನ್ನು ಕಂಡು ಕೃಷ್ಣಪ್ಪನಿಗೆ ಏನೋ ಒಂದು ವಿಧವಾಯಿತು. ಅವರಿಬ್ಬರೊಳಗೆ ಪೂರ್ವ ಪರಿಚಯ ಇದ್ದಿತಾದರೂ, ಅನಂತನ ಘಟನೆಯ ಬಳಿಕ ಆ ಪರಿಚಯದ ಸುಖಮಯತೆಯನ್ನು ಉಪಯೋಗಿಸಿಕೊಳ್ಳಲು ಕೃಷ್ಣಪ್ಪ ಸಿದ್ಧನಿರಲಿಲ್ಲ.

"ಮೊನ್ನೆ ನಿಮ್ಮ ಅಂಗಡಿಯಲ್ಲಿ ಇದ್ದವರು ಯಾರು?" ಎಂದು ತನ್ನದೇ ಆದ ಗಡುಸು ದನಿಯಲ್ಲಿ ಕೇಳಿದಳು ಲಕ್ಷ್ಮಿ.

"ಯಾರೆಂದರೆ? ನಮ್ಮ ಅಂಗಡಿಗೆ ತುಂಬಾ ಜನ ಬರುತ್ತಾರೆ. ಅವರೆಲ್ಲರ ನೆನಪು ನನಗಿರಲು ಸಾಧ್ಯವೇ?" ಎಂದು ಕೃಷ್ಣಪ್ಪ ಆಕೆಯ ಮಾತಿನ ಅರ್ಥವಾದರೂ ಆಗದಂತೆ ನಟಿಸಿ ಮಾತನಾಡಿದ.

"ನೀವು ತಮಾಷೆ ಮಾಡುತ್ತೀರಿ" ಎಂದು ತುಂಬಿದ ನಗು ಸೂಸಿದಳು ಲಕ್ಷ್ಮಿ. ಕೃಷ್ಣಪ್ಪನ ಸಹಪಾಠಿಯಾಕೆ. ಹಿಂದಿನಿಂದಲೂ ಆತ ಆಕೆಯನ್ನು ನೋಡುತಿದ್ದಾನೆ. ಮೇಲಾಗಿ ಮನಸ್ಸಿಗೆ ಹೆಂಗುಸಿನ ಹಿತ ಬೇಕೆಂದೆನಿಸಿದಾಗ ಆಕೆಯಲ್ಲಿ ತೆರಳುವುದೆಂದಿತ್ತು. ಹಾಗೆಂದು ಆಕೆ ವ್ಯಭಿಚಾರಿಯಲ್ಲ.

"ತಮಾಷೆ ಏಕೆ? ಇದ್ದದ್ದನ್ನೇ ಹೇಳಿದೆ."

"ಅದಲ್ಲ, ನನ್ನನ್ನು ನೋಡಿದ ಕೂಡಲೇ ನನ್ನ ಬಳಿ ಓಡಿಬಂದರು. ಏನೋ ಹೇಳಿದರು. ನನಗೆ ಹೆದರಿಕೆಯಾಯಿತು."

"ನಿನಗೂ ಹೆದರಿಕೆ ಎಂಬುದಿದೆಯೇ?"

"ಹಾಗೆಂದರೆ, ನಾನೇನು ಹೆಂಗುಸಲ್ಲವೇ? ಅದೂ ರಾತ್ರೆಯ ಸಮಯ. ನಾನು ಹೆದರಿ ಕಂಗಾಲು."

"ರಾತ್ರೆಯಲ್ಲಿ ಮಾರ್ಗ ತುಂಬಾ ಓಡಾಡಲು ಹೆದರಿಕೆ ಆಗುವುದಿಲ್ಲ. ಬೇಕಾದರೆ ಒಂಭತ್ತುವರೆ ಗಂಟೆಯ ಸಿನೇಮಕ್ಕೆ ಒಬ್ಬಳೇ

ಹೋಗಲು ಧೈರ್ಯವಿದೆ. ಎಂಟು ಗಂಟೆಗೆ, ಅದೂ ನಾವೆಲ್ಲರೂ ಎದುರಿನಲ್ಲಿ ಇರುವಾಗ, ಯಾರಾದರೂ ಮಾತನಾಡಿದರೆ ಹೆದರಿಕೆ ಯಾಗುತ್ತದೆ ಒಳ್ಳೆಯ ಮಾತು" ಎಂದು ಹೊಟ್ಟೆತುಂಬಾ ನಕ್ಕು ಹೇಳಿದ ಕೃಷ್ಣಪ್ಪ. ಲಕ್ಷ್ಮಿಯ ಸ್ವಾಭಿಮಾನಕ್ಕೆ ಚುಚ್ಚಿದಂತೆ ಆಯಿತೋ ಏನೋ. ಬೇಕಾದ ವಸ್ತುಗಳನ್ನು ಕೊಂಡುಕೊಂಡು, ಸ್ವಲ್ಪ ಹಣ ತೆತ್ತು, ಉಳಿದುದನ್ನು ಇನ್ನೊಮ್ಮೆ ಕೊಡುತ್ತೇನೆಂದು ನುಡಿದು—ತೆರಳಿ ದಳು. ಅವಳ ಬೆನ್ನನ್ನೆ ಸ್ವಲ್ಪ ಸಮಯ ನೋಡಿದ ಕೃಷ್ಣಪ್ಪ. ಅನಂತ ಅವಳ ಪರಿಚಿತಿಗಾಗಿ ಹಾತೊರೆಯುತ್ತಿರುವುದು ತಪ್ಪಲ್ಲ ಎಂದೆನಿಸಿತು. ಅಂದು ಸಂಜೆ ಅನಂತ ಅಂಗಡಿಗೆ ಬಂದೊಡನೆ ತನ್ನ ಮತ್ತು ಲಕ್ಷ್ಮಿ ಯೊಳಗೆ ನಡೆದ ಮಾತುಕತೆಗಳ ವರದಿ ಒಪ್ಪಿಸಿದ.

— ೨೨ —

ಕೃಷ್ಣಪ್ಪನೊಡನೆ ತನ್ನ ವಿಚಾರಗಳನ್ನು ಬಚ್ಚಿಡುವುದು ಅನಂತ ನಿಗೆ ಸರಿಕಾಣಿಸಲಿಲ್ಲ. ಅಂದು ರಾತ್ರಿ ತಾನು ಮನೆಗೆ ತೆರಳಿ ಅರ್ಧ ಬರೆದಿಟ್ಟಿದ್ದ ಪತ್ರವನ್ನು ಕೃಷ್ಣಪ್ಪನಿಗಿತ್ತ. ಕೆಲವು ದಿನಗಳ ಹಿಂದೆ ಅನಂತ ತನಗೊಂದು ಪತ್ರ ಓದಲು ಕೊಡುತ್ತೇನೆ ಎಂದುದು ಆತಗೆ ನೆನಪು ಬಂದಿತು. ಪತ್ರವನ್ನೋದಲು ಹಿಂಜರಿದ.

"ಅಂತಹ ಗುಟ್ಟಿನ ಪತ್ರ ಅದಲ್ಲ. ಹಾಗಿದ್ದಲ್ಲಿ ನಾನದನ್ನು ನಿನಗೆ ಓದಲು ಕೊಡುತ್ತಿರಲಿಲ್ಲ" ಎಂದು ಕೃಷ್ಣಪ್ಪನ ಅನುಮಾನವನ್ನು ಕಂಡು ನುಡಿದ.

"ಗುಟ್ಟಿನ ಪತ್ರ ಅಲ್ಲದಿರಬಹುದು ಆದರೂ ಬೇರೊಬ್ಬರಿಗೆ ಬರೆದ ಪತ್ರದನ್ನು ಓದುವುದು ಸಮಂಜಸವಲ್ಲ."

"ನೀನು ಬೇರೊಬ್ಬನಲ್ಲ."

ಅರ್ಧ ತೆರೆದಿದ್ದ ಪತ್ರವನ್ನು ಪೂರ್ಣ ಅಗಲಿಸಿ ಓದಿದ ಕೃಷ್ಣಪ್ಪ. ಓದುತಿದ್ದಂತೆ ಹಲಬಾರಿ ನಕ್ಕ. ಅನಂತ ಸೂಕ್ಷ್ಮವಾಗಿ ಆತನನ್ನು ನೋಡುತಿದ್ದ.

"ನೀನು ಬಹಳ ಮುಂದರಿದಿರುವೆ."

"ಇದಿಷ್ಟು ಓದಿ ನೀನು ಈ ಅಭಿಪ್ರಾಯವನ್ನು ಕಟ್ಟಿಕೊಂಡೆಯಾದರೆ, ಪತ್ರವನ್ನು ಇಡಿಯಾಗಿ ಬರೆದು ಮುಗಿಸಿದ ಬಳಿಕ ನಿನ್ನಲ್ಲಿ ಓದಲು ಕೊಡುತಿದ್ದರೆ—ನಾನು ಶುದ್ಧ ಕೇಡಿ ಎಂದು ಹೇಳುತಿದ್ದೆಯೋ ಏನೋ?"

'ನಿನ್ನನ್ನು ಶುದ್ಧ ಕೇಡಿಯ ರೂಪದಲ್ಲಿ ನೋಡಲು ನಾನು ಮೆಚ್ಚುತ್ತೇನೆ' ಎಂದು ಪತ್ರವನ್ನು ಅನಂತನೆಡೆ ಚಾಚುತ್ತ ಹೇಳಿದ.

"ಅದಿರಲಿ ಕಿಟ್ಟೂ, ಈ ಪತ್ರವನ್ನು ಅವಳಿಗೆ ಕೊಟ್ಟರೆ ಹೇಗೆ?"

"ಅವಳೆಂದರೆ....?"

"ಆ ದಿನ ರಾತ್ರೆ...."

"ಲಕ್ಷ್ಮಿಗೋ?"

"ಅವಳ ಹೆಸರು ಲಕ್ಷ್ಮಿಯೇ?"

"ಹೌದು."

"ಅವಳಿಗೆ ಕೊಟ್ಟಲ್ಲಿ ಹೇಗಾದೀತು?"

"ಇದನ್ನು ಅರ್ಥಮಾಡಿಕೊಳ್ಳಲು ಅವಳಿಗೆ ಸಾಧ್ಯವೆ? ಶುದ್ಧ ಮೊದ್ದು ಅವಳು. ಎಂಟನೆಯ ತರಗತಿಯ ತನಕ ಕಲಿತಿದ್ದರೂ, ಮದುವೆಯಾದ ಬಳಿಕ ಗಂಡನಿಂದ ತಿಂದ ಪೆಟ್ಟುಗಳ ಒತ್ತಡದಲ್ಲಿ ಎಲ್ಲವೂ ಮರೆತು ಹೋಗಿರಬಹುದು."

"ಪಾಪ."

' ಇದರಲ್ಲಿ ಪಾಪ ಏನಿದೆ? ಅವಳ ಗಂಡ ಅವಳ ಜೀವ ತೆಗೆಯದೆ ಬಿಟ್ಟುದುದೇ ಹೆಚ್ಚು. ಅವಳ ಜೀವನ ಬಹಳ ಕೀಳು ನೋಡು."

"ಅಂತಹ ಗಂಡನೊಡನೆ ಇವಳಿಗೆ ಮದುವೆಯಾದುದು ಹೇಗೆ?"

"ಹೇಗೆಂದು ನನಗೇನು ಗೊತ್ತು?"

"ಸರಿ. ಹಾಗಾದರೆ ಅವಳು ತಾಯಿ ಮಾತ್ರವಲ್ಲದೆ, ಗಂಡನಿಂದ ಸಾಕಷ್ಟು ಒದೆ ತಿಂದವಳೂ ಹೌದು."

"ಅವಳನ್ನು ಯಾವ ರೀತಿಯಿಂದ ವಿವರಿಸಿದರೂ ಒಪ್ಪೀತು."

"ಹೋಗಲಿ ಕಿಟ್ಟೂ, ಯಾರಿಗಾಗಿ ನಾನು ಈ ಪತ್ರ ಬರೆದೆನೋ ಅವಳಿಗದನ್ನು ಓದಿ ತಿಳಿಯಲು ಸಾಧ್ಯವಿಲ್ಲವೆಂದಾದರೆ, ಪತ್ರವಾದರೂ

ಏತಕ್ಕೆ?" ಎಂದೆನ್ನುತ್ತಾ ಪತ್ರವನ್ನು ಹರಿಯತೊಡಗಿದ. ಕೃಷ್ಣಪ್ಪ ತಡೆಯಲು ಯತ್ನಿಸಿದ.

"ಅಷ್ಟು ಚೆನ್ನಾಗಿ ಬರೆದ ಪತ್ರವನ್ನು ಹರಿಯುವುದೇ?"

ಅನಂತ ಉತ್ತರಿಸಲಿಲ್ಲ. ಚೂರುಗಳನ್ನು ಇನ್ನೂ ಚೂರಾಗಿಸಿದ. ಬಳಿಕ ಮೆತ್ತನೆ ಮೆಟ್ಟಲಿಳಿದು ಮನೆಯ ಕಡೆಗೆ ಸರಿಯ ತೊಡಗಿದ.

— ೨೩ —

ಅಂದಿನ ಇರುಳು ಕೃಷ್ಣಪ್ಪ ಅನಿವಾರ್ಯವಾಗಿ ಲಕ್ಷ್ಮಿಯಲ್ಲಿಗೆ ಹೋಗಬೇಕಾಯಿತು. ಅವಳದು ಮನೆಯಲ್ಲ—ಒಂದು ಕೊಟ್ಟಿಗೆ. ಗೋಡೆಗೆ ಸುಣ್ಣ ಬಳಿದು ವರ್ಷ ಹತ್ತು ಕಳೆದಿರಬೇಕು. ಮುರುಕು ಬೆಂಚು, ಒಂದು ಮುರುಕು ಕುರ್ಚಿಯ ಹೊರತು ಚಾವಡಿಯಲ್ಲಿ ಕುಳಿತಿರಲು ಬೇರೆ ವಸ್ತುಗಳಿರಲಿಲ್ಲ. ಗೋಡೆಯ ಮೇಲೆ ಹಳೆಯ ಕಾಲದ ಬಣ್ಣಗೆಟ್ಟ ನಾಲ್ಕಾರು ಕೆಲಂಡರುಗಳು ತೂಗುತಿದ್ದುವು. ಆವಳ ತಂದೆ, ಮುದುಕ, ಜೀವನದ ಕಹಿಯ ಪರಿಚಯವಿದ್ದಾತ, ಮೂಲೆಯಲ್ಲಿ ಕುಳಿತು ಬೀಡಿ ಸೇದುತಿದ್ದ. ಕೃಷ್ಣಪ್ಪನನ್ನು ಕಂಡೊಡನೆ ನಮಸ್ಕರಿಸಿದ. ಬಹುಶಃ ಅವನಿಂದ ಏನಾದರೂ ಪುಡಿಗಾಸು ಸಿಗಬಹುದೆಂಬ ಅಭಿಪ್ರಾಯ ಆತನದಾಗಿರಬೇಕು.

ಲಕ್ಷ್ಮಿ ಹೊರಬಂದಳು. ವಿಶೇಷ ಸಿಂಗರಿಸಿಕೊಂಡಿರಲಿಲ್ಲ. ಅವಳ ಮಗು ಒಳಗೆಲ್ಲೋ ಮಲಗಿಕೊಂಡಿತ್ತು. ಹೊರ ಬಂದವಳೇ ಕೃಷ್ಣಪ್ಪನನ್ನು ಎಂದೂ ನೋಡದ ನೋಟದಿಂದ ನೋಡಿದಳು. ಆವಳ ಸಿಡಿಮಿಡಿತಕ್ಕೆ ಇದು ನಾಂದಿ ಎಂದು ಕೃಷ್ಣಪ್ಪ ತಿಳಿದ.

"ಮೊನ್ನಿನವರು ಯಾರೆಂದು ಹೇಳಲು ನಿಮಗೆ ಆಗಲೇ ಇಲ್ಲ, ಅಲ್ಲವೇ?" ಎಂದು ಅನಂತನ ಕುರಿತಾಗಿ ಕೇಳಿದಳು. ಅನಂತ ಲಕ್ಷ್ಮಿಯ ಕುರಿತಾಗಿ ಹೇಗೆ ಅವ್ಯಕ್ತ ಬಂಧುರ ಭಾವನೆಯನ್ನು ತಾಳಿರುತ್ತಾನೋ, ಅದೇ ಬಗೆಯಾಗಿ ಈಕೆಯೂ ಆತನ ಕುರಿತಾಗಿ ಹಂಬಲಿಸುವಂತೆ ಕಂಡಿತು ಕೃಷ್ಣಪ್ಪನಿಗೆ. ಅವಳೆಡೆಗೆ ಹೋದ ಬಳಿಕ ಅವಳಿಂದಂತೆ ತಲೆದೂಗಬೇಕಾಯಿತು. ತನ್ನ ತಲೆಗೂದಲ ಮೇಲೆ ಕೈಸವರಿ, ಬಗಲ ಜೇಬಿನಿಂದ ಕರವಸ್ತ್ರ ಹೊರತೆಗೆದು ಮೊಗವನ್ನು ಒರಸಿಕೊಂಡ.

ಲಕ್ಷ್ಮಿಯ ತಂದೆ, ಮೂಲೆಯಲ್ಲಿ ಕುಳಿತಾತ, ಬೀಡಿಯ ಚೂರನ್ನು ಅಲ್ಲೇ ಅಂಗಳಕ್ಕೆ ಒಗೆದು, ಮೊದಲು ಕೈಯೂರಿ ಮೇಲಕ್ಕೆದ್ದ.

"ಅವ ನನ್ನ ಗೆಳೆಯ"

"ಏನು ಕೆಲಸ ಅವರಿಗೆ?"

"ನಿನಗೆ ಅವನ್ನೆಲ್ಲಾ ಜಾತಕಬೇಕೆಂದು ಕಾಣಿಸುತ್ತದೆ."

"ಜಾತಕ ನನಗೇಕೆ? ಹೀಗೆಯೇ ಕೇಳಿದೆ."

"ಮೊನ್ನೆ ಅವನನ್ನು ಕಂಡು ಹೆದರಿಕೊಂಡವಳು ಇವತ್ತು ಅವನ ವಿಚಾರವಾಗಿ ಕೇಳುವುದು ಆಶ್ಚರ್ಯಕರವಾಗಿದೆ."

ಲಕ್ಷ್ಮಿಬಾಯಿ ತೆರೆಯದೆ ಕೆಳಕುಳಿತು ಗೋಡೆಗೆ ಒರಗಿದಳು. ಕೃಷ್ಣಪ್ಪನ ದೃಷ್ಟಿ ಅವಳ ಮೇಲೆಯೇ ಇತ್ತು.

"ಮೊನ್ನೆ ನಿಜಕ್ಕೂ ಹೆದರಿದ್ದೆ. ಅವರಿಗೆ ಕೆಲಸವೇನು?"

"ಹೇಳಿಸಿಕೊಳ್ಳುವಂಥ ಕೆಲಸವಿಲ್ಲ. ಅವನೊಬ್ಬ ಚಿತ್ರಕಾರ. ಬೇಕಾದರೆ ಚಿತ್ರ ಬಿಡಿಸುತ್ತಾನೆ—ಸಂಪಾದಿಸುತ್ತಾನೆ."

"ಚಿತ್ರಕಾರರೋ?"

"ಹೌದು, ಏಕೆ ಆಶ್ಚರ್ಯ?"

"ಅವರಿಗೆ ಕುಡಿಯುವ ಅಭ್ಯಾಸ ಇದೆಯೇ?"

"ನೋಡು ಲಕ್ಷ್ಮೀ, ಊರಲ್ಲಿ ಇರುವವರೆಲ್ಲ ನಮ್ಮಷ್ಟು ಕೆಟ್ಟವರಲ್ಲ—ಅಥವಾ ಅವನಷ್ಟು ಒಳ್ಳೇಯವರಲ್ಲ. ಅವ ದೇವರಂಥ ಮನುಷ್ಯ"

"ಹಾಗಿದ್ದರೆ ಮೊನ್ನೆ ನನ್ನ ಬಳಿ ಓಡಿ ಬಂದುದೇಕೆ?", ಪ್ರಶ್ನಾರ್ಥಕ ದೃಷ್ಟಿಯನ್ನು ಕೃಷ್ಣಪ್ಪನತ್ತ ಹಾಯಿಸಿ ನುಡಿದಳು. ಅನಂತನ ಮನಸ್ಸಿನ ತುಮುಲಾಟಗಳನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದಾಕೆಗೆ, ಅವನ ಸಮೀಪತೆಗೆ ಕುಡುಕತನಕ್ಕಿಂತ ವಿಶೇಷವಾದ ಅರ್ಥ ಹೊಳೆಯದೆ ಇದ್ದುದು ಸ್ವಾಭಾವಿಕವಾಗಿತ್ತು. ಕೃಷ್ಣಪ್ಪ ನಕ್ಕು ಬಿಟ್ಟ.

— ೨೪ —

ಲಕ್ಷ್ಮಿ ಕೃಷ್ಣಪ್ಪರೊಳಗಿನ ಸಂಬಂಧಕ್ಕೆ ಅನಂತ ಪೂರ್ಣ ಅಪರಿಚಿತ. ಹಿಂದೊಮ್ಮೆ ಆಕೆ ತನ್ನ ಸಹಪಾಠಿಯಾಗಿದ್ದಳು ಎಂದು ಕೃಷ್ಣಪ್ಪ ಹೇಳಿದುದಷ್ಟೇ ಆತನಿಗೆ ನೆನಪು.

ಅದಷ್ಟು ದಿನಗಳ ಶ್ರಮದಿಂದ ಬರೆದಿದ್ದ ಪತ್ರವನ್ನು ಹರಿದು ಎಸೆದುದು, ಮಗುವಿನ ಚಿತ್ರದ ಮೇಲೆ ಬಣ್ಣ ಬಳಿದಂತಾಗಿತ್ತು. ಅನಂತನ ಮನಸ್ಸಿನ ನೆಮ್ಮದಿ ಕದಡಿ ಹೋಗಿತ್ತು. ಲಕ್ಷ್ಮಿಯ ಪರಿಚಯದ ಬಳಿಕ ನೆಮ್ಮದಿ ನೆಲೆಗೊಳ್ಳಬಹುದೋ ಏನೋ. ಆದರೆ ಲಕ್ಷ್ಮಿ ಅನಂತನ ಸ್ನೇಹಕ್ಕೆ ಸಂಪೂರ್ಣ ಅನರ್ಹಳು.

ಮದ್ರಾಸಿನ ಗೆಳೆಯನೊಬ್ಬನಿಂದ ಅನಂತನಿಗೆ ಪತ್ರ ಬಂದಿತ್ತು. ಇನ್ನೆರಡು ತಿಂಗಳುಗಳಲ್ಲಿ ದಕ್ಷಿಣ ಭಾರತದ ಚಿತ್ರಗಾರರ ಚಿತ್ರ ಪ್ರದರ್ಶನವೊಂದು ಮದ್ರಾಸಿನಲ್ಲಿ ಜರಗಲಿದೆ—ಅದಕ್ಕಾಗಿ ಅನಂತನ ಕೆಲವು ತೈಲ ಚಿತ್ರಗಳನ್ನು ಕಳುಹಿಸಿ ಕೊಡಬೇಕೆಂದು ಪತ್ರದಲ್ಲಿ ಸೂಚಿತವಾಗಿತ್ತು. ಅನಂತನಿಗೆ ಏನಾದರೂ ಕೆಲಸಬೇಕಿತ್ತು. ಗೆಳೆಯನ ಪತ್ರ ಸಮಯೋಚಿತ ಮನೋ ಆರೋಗ್ಯಕ್ಕೆ ನೆರವಾಯಿತು. ಹಿಂದಕ್ಕೆ ಮಾಡಿದ್ದ ಚಿತ್ರಗಳನ್ನಲ್ಲ—ಹೊಸತಾಗಿ ಬರೆದ ಚಿತ್ರಗಳನ್ನು ಕಳುಹಿಸಬೇಕೆಂದು ಯೋಚಿಸಿದ ಅನಂತ. ಅದರಂತೆ ಚಿತ್ರಿಸಲೂ ತೊಡಗಿದ. ಅವನಕ್ಕ ಆರೋಗ್ಯದ ಕುರಿತು ಸೂಚನೆ ಕೊಡಬೇಕಾಯಿತು. ಮದ್ರಾಸಿನ ಪ್ರದರ್ಶನದಲ್ಲಿ ನಾಲ್ಕು ಚಿತ್ರಗಳು ಮಾರಿ ಹೋದರೆ, ಒಮ್ಮೆ ಭಾರತದ ಪ್ರಮುಖ ಚಿತ್ರ ಶಾಲೆ ಮತ್ತು ಸಂಗ್ರಹಾಲಯಗಳನ್ನು ನೋಡಿ ಬರಬೇಕೆಂದು ಯೋಚಿಸಿದ. ಅಂತೆಯೇ ಚಿತ್ರಣದಲ್ಲಿ ವೇಗ ಮೂಡಿತು.

— ೨೫ —

ಆಧುನಿಕ ಶೈಲಿಯಲ್ಲಿ ಅನಂತನಿಗೆ ವಿಶೇಷ ನಂಬುಗೆ ಇರಲಿಲ್ಲ. ಹಲವಾರು ಆಧುನಿಕ ಚಿತ್ರಗಾರರ ಚಿತ್ರ ವಿಮರ್ಶೆಯನ್ನು ಆತ ಮಾಡುತಿದ್ದನೇನೋ ನಿಜ. ತಾನು ಹಲವಾರು ನವೀನ ಶೈಲಿಗಳಲ್ಲಿ ಚಿತ್ರಿಸಿದ್ದ ಕೂಡಾ. ಆದರೆ ಏಕೋ—ಅಂತಹ ನವೀನ ಶೈಲಿಯಲ್ಲಿ ಮಾನವೀಯ ನಗು ನೋವುಗಳ ನಿರ್ವಿಕಾರ ಚಿತ್ರಣ ಅಸಾಧ್ಯ ಎಂದು ಅವನಿಗೆ ಅನಿಸಿತ್ತು. ನೂರಾರು ರೇಖೆಗಳು, ನೂರಾರು ಬಣ್ಣಗಳು ವಸ್ತುವಿನ ಮೌಲ್ಯ ಕೆಡಿಸುತ್ತವೆ – ಎಂಬ ಅನುಭವ ಆತನದು.

ಮದ್ರಾಸಿನ ಪ್ರದರ್ಶನಕ್ಕೆ ಲಕ್ಷ್ಮಿಯ ಚಿತ್ರವೊಂದನ್ನು ತಾನು ಏಕೆ ಬರೆದು ಕಳುಹಿಸಬಾರದು—ಎಂಬ ಯೋಚನೆ ಒಂದು ಸಂಜೆ ಅವನ

ತಲೆ ಹೊಕ್ಕಿತು. ತಾಯಿ ಮಗು ಚಿತ್ರಣ ಅರೆ ಸೋತಿತ್ತು. ಬರಿಯ ಲಕ್ಷ್ಮಿಯ ಚಿತ್ರ ಬರೆದರೂ ಚಿಂತಿಲ್ಲ ಎಂದೆನಿಸಿತು, ತಾಯಿ ಮಗು ಚಿತ್ರದಲ್ಲಿರುವ ಎರಡು ಆಕೃತಿಗಳ ಬದಲು ಒಂದೇ ರೂಪಿನ ಚಿತ್ರಣ ಸುಲಭವಲ್ಲವೇ? ಆದರೆ ಲಕ್ಷ್ಮಿಯ ಚಿತ್ರ ಬರೆಯುವುದಾದರೂ ಹೇಗೆ? ಕೃಷ್ಣಪ್ಪನ ಸಹಾಯ ದೊರಕೀತು ಎಂಬ ಧೈರ್ಯದಿಂದ ಆತನಲ್ಲಿಗೆ ತೆರಳಿದ—ತನ್ನ ಅಭಿಪ್ರಾಯವನ್ನು ಬಿಚ್ಚಿಟ್ಟ.

"ಲಕ್ಷ್ಮಿಯ ವಿಚಾರ ಇನ್ನೂ ನೀನು ಮರೆತಂತಿಲ್ಲ. ಅವಳಲ್ಲಿ ಏನು ಸೌಂದರ್ಯವಿದೆ? ಏನೋ, ಅದೂ ಅವಳನ್ನು ಚಿತ್ರ ಬಿಡಿಸುವ ಸಮಯ ಎದುರು ಕುಳಿತುಕೋ ಎಂದು ಹೇಳುವುದಾದರೂ ಹೇಗೆ?"

"ನಿನಗೆ ಆಕೆಯ ಪರಿಚಯ ಇದೆಯಲ್ಲಾ. ಅವಳೊಡನೆ ಈ ವಿಚಾರವನ್ನು ಒಂದು ಬಾರಿ ಏಕೆ ಕೇಳಬಾರದು?

"ಕೇಳಿದ ಒಡನೆ ಕಾರ್ಯ ಕೈಗೂಡಬೇಕು. ಇಲ್ಲವಾದರೆ ಕೇಳಿಕೆಗೆ ಏನು ಬೆಲೆ ಬಂದೀತು?"

ಅನಂತನಿಗೆ ಕೃಷ್ಣಪ್ಪನ ಮನೋಸ್ಥಿತಿಯು ತಿಳಿಯುವಂತಿರಲಿಲ್ಲ. ಲಕ್ಷ್ಮಿಯೊಡನೆ ಆತ ವಿಚಾರ ಕೇಳಬಲ್ಲನೇನೋ ನಿಜ. ಆದರೆ ಅವಳ ಚಿತ್ರಣ ಎಲ್ಲಿ ನಡೆಯಬೇಕು? ಅನಂತನ ಮನೆಯಲ್ಲಿ ನಡೆಯುವುದು ಅಸಾಧ್ಯ. ಅವಳ ಮನೆಗೆ ಅನಂತ ಹೋದನೆಂದಾದರೆ ನಾಳಿನ ಅನಾಹುತಗಳನ್ನು ನೋಡುವ ಎದೆಗಾರಿಕೆ ಕೃಷ್ಣಪ್ಪನಲ್ಲಿರಲಿಲ್ಲ. ಹಾಗಾಗಿ ಕುಂಟು ನೆವಗಳನ್ನು ಮುಂದೂಡಿದ.

"ನೀನು ಕೇಳದಿದ್ದರೆ ಚಿಂತಿಲ್ಲ. ಅವಳ ಮನೆ ನನಗೆ ತೋರಿಸು. ನಾನಾಗಿಯೇ ಅವಳಲ್ಲಿಗೆ ಹೋಗಿ ಕೇಳುತ್ತೇನೆ. ಅವಳ ಕುಳಿತಿರುವಿಕೆಗೆ ಹಣ ಕೊಡೋಣವಂತೆ."

"ಹಣದ ಪ್ರಶ್ನೆ ಇಲ್ಲಿ ಮುಖ್ಯವಲ್ಲ."

"ಇನ್ನು ಯಾವ ಪ್ರಶ್ನೆ ಮುಖ್ಯ?"

"ನಿನ್ನ ಮತ್ತು ನನ್ನ ಗೌರವದ ಪ್ರಶ್ನೆ."

"ನಿನ್ನ ಗೌರವ!"

"ಹೌದು, ನಿನ್ನ ಮತ್ತು ನನ್ನ ಗೌರವಗಳೊಳಗೆ ವಿಶೇಷ ಭೇದ ವಿಲ್ಲ. ನಾಳೆ ನೀನು ನಾಲ್ಕು ಜನರಿಂದ ಹೀನೈಸಿಕೊಳ್ಳುವುದನ್ನು ನನಗೆ ನೋಡಲು ಅಸಾಧ್ಯ."

"ನೋಡು ಕಿಟ್ಟೂ, ನನಗೆ ಅವಳೊಡನೆ ಸುಖಪಡಬೇಕೆಂಬ ಇಷ್ಟವಿಲ್ಲ; ಅಥವಾ ಅವಳೊಡನೆ ಹಗಲು ರಾತ್ರಿ ಕೂಡಿಕೊಂಡು ಬೀದಿ ಬೀದಿ ತಿರುಗುವ ಮನಸ್ಸಿಲ್ಲ. ನಾನು ಆಕೆಯನ್ನು ಚಿತ್ರಕ್ಕಾಗಿ ಮಾತ್ರ ಕುಳ್ಳಿರಿಸುತ್ತೇನೆ."

ಕೃಷ್ಣಪ್ಪನಿಗೆ ಏನು ಹೇಳಲೂ ತೋಚಲಿಲ್ಲ. ಜೀನಸುಗಳ ಮೇಲೆ ಕುಳಿತಿದ್ದ ನೊಣಗಳ ಗುಂಪು ನೋಡುತಿದ್ದ. ಅನಂತ ಕೃಷ್ಣಪ್ಪನನ್ನು ಕಂಡ, ತನ್ನ ಅಭಿಪ್ರಾಯ ಕೃಷ್ಣಪ್ಪನಿಗೆ ಒಗರಾಗಿ ಕಂಡಿತು ಎಂದು ಅನಂತನಿಗೆ ತಿಳಿಯಿತು.

"ನಾನು ಹೀಗೆ ಹೇಳಿದೆನೆಂದು ಬೇಸರವಿಲ್ಲವಷ್ಟೇ?"

"ಬೇಸರವಿಲ್ಲ. ಆದರೆ ನಿನಗೆ ಸಮಾಧಾನದ ಮಾತುಗಳನ್ನು ಯಾವ ರೀತಿಯಾಗಿ ಹೇಳಬೇಕೆಂದು ನನಗೆ ಹೊಳೆಯುತ್ತಿಲ್ಲ. ಆಕೆ ಒಳ್ಳೇಯ ನಡತೆಯ ಹೆಂಗುಸಲ್ಲವೆಂದು ಊರಿಗೆಲ್ಲ ಗೊತ್ತು. ನೀನು ಅವಳಲ್ಲಿಗೆ ತೆರಳಿ ಚಿತ್ರ ಬರೆಯುತ್ತಿ ಎಂದು ನಿನ್ನ ಅಕ್ಕ ಭಾವನವರಿಗೆ ತಿಳಿದರೆ, ಅವರು ಏನೆಂದಾರು?"

ಕೃಷ್ಣಪ್ಪನ ವಾದ ಅನಂತನಿಗೆ ಹೌದೆನಿಸಿತು. ಮೂಕನಾಗಿದ್ದು ಕೆಲಹೊತ್ತು ಅಲ್ಲೇ ಕುಳಿತ. ನಾಲ್ಕಾರು ಕೊಳ್ಳುಗರು ಬಂದು ವ್ಯಾಪಾರಕ್ಕೆ ತೊಡಗಿದೊಡನೆ, ಕೃಷ್ಣಪ್ಪ ತರಿಸಿದ್ದ ಕಾಫಿ ಸುರುವಿಕೊಂಡು ಕೆಳಗಿಳಿದ.

ಅಂದು ರಾತ್ರಿ ಅನಂತ ಕೆಮ್ಮುತಿದ್ದ. ವಿಶೇಷವಾಗಿ ಉಸಿರಾಡುತಿದ್ದ. ಬೆಳಗ್ಗಿನ ಹೊತ್ತಿಗೆ ಆತನ ಅಕ್ಕ ಹೆದರಿಕೊಂಡಳು ಭಾವ ಎದ್ದು ಡಾಕ್ಟರರಲ್ಲಿ ಓಡಿದರು. ಡಾಕ್ಟರರು ಬಂದು ಪರೀಕ್ಷಿಸಿ, ಕೆಮ್ಮನ್ನು ಸ್ಥಿಮಿತಗೊಳಿಸುವುದಕ್ಕಾಗಿ ಇಂಜಕ್ಷನ್ ಚುಚ್ಚಿ, ಹೆಚ್ಚಿನ ವಿಶ್ರಾಂತಿ ಅಗತ್ಯವಿದೆ ಎಂದು ಸೂಚಿಸಿ ಹಿಂದಿರುಗಿದರು.

"ಅಕ್ಕಾ...." ಅನಂತ ಕರೆದ.

"ಏನು?"

"ನಿನಗೆ ರಾತ್ರೆ ನಿದ್ರಿಸಲು ಬಿಡಲಿಲ್ಲ."

ಆಕೆ ಉತ್ತರಿಸಲಿಲ್ಲ.

"ಭಾವನವರಿಗೂ ತೊಂದರೆಯಾಯಿತು."

"ಹಾಗೆಲ್ಲ ಹೇಳಬಾರದು ಅನಂತಾ."

"ಸರಿ."

"ಇನ್ನು ಮುಂದೆಯಾದರೂ ಸರಿಯಾಗಿ ವಿಶ್ರಾಂತಿ ತೆಗೆದುಕೋ. ಸುಮ್ಮನೆ ಆಚೀಚೆ ಓಡಾಡಿ ಜೀವ ದಣಿಸಿಕೊಳ್ಳಬೇಡ."

ಅನಂತ ನಸುನಕ್ಕ.

ಕೃಷ್ಣಪ್ಪನಿಗೆ ಇದೆಲ್ಲ ತಿಳಿದುದು ಎರಡು ದಿನಗಳ ಬಳಿಕವೇ. ಅಷ್ಟರಲ್ಲಿ ಲಕ್ಷ್ಮಿಗೂ ಅನಂತನ ಪರೋಕ್ಷ ಪರಿಚಯ— ಆತ ತನ್ನ ಚಿತ್ರಣಕ್ಕಾಗಿ ಹಾತೊರೆಯುತ್ತಿದ್ದಾನೆಂದು ತಿಳಿದಿತು.

— ೨೬ —

ಕೃಷ್ಣಪ್ಪನ ಮುಸುಂಬಿ ಮತ್ತು ಕಿತ್ತಳೆಗಳ ಉಪಚಾರವನ್ನು ಅನಂತ ಬಹಳವಾಗಿ ತಿಳಿದುಕೊಂಡ. ಒಂದು ದಿನ ಅವನತ್ತ ಮುಸುಂಬಿಗಳ ಹಣವನ್ನು ಚಾಚಲೂ ಹಿಂಜರಿಯಲಿಲ್ಲ.

"ಇಲ್ಲಿಯೂ ನಾನು ವ್ಯಾಪಾರ ಮಾಡುತ್ತೇನೆಂದು ತಿಳಿದೆಯಾ?"

"ನೀನು ಅವುಗಳನ್ನು ಹಣ ಕೊಟ್ಟು ತಂದುದಷ್ಟೇ?

"ನಾನು ತಂದ ಹಣ್ಣುಗಳನ್ನು ಒಂದೇ ಸ್ವೀಕರಿಸುವುದು, ಇಲ್ಲವಾದಲ್ಲಿ ನಿರಾಕರಿಸುವುದು, ಇಷ್ಟೇ ನಿನ್ನ ಹಕ್ಕಿನಲ್ಲಿರುವುದು. ಬದಲಾಗಿ ನಾನು ತಂದ ಮುಸುಂಬಿಗಳಿಗೆ ಹಣ ತೆರುವ ಅಧಿಕಾರ ನಿನಗಿಲ್ಲ. ತಿಳಿಯಿತೇ?" ಎಂದು ಮುಸುಂಬಿಗಳತ್ತ ಕೈಚಾಚಿ ನುಡಿದ ಕೃಷ್ಣಪ್ಪ. ಅನಂತನಿಗೆ ದುಃಖವಾಯಿತು—ತಡೆದಿಕ್ಕಿಕೊಂಡ.

"ನಿನ್ನ ಉಪಕಾರ...."

"ಸಾಕು, ಸಾಕು, ಉದ್ದುದ್ದದ ಮಾತು ಬೇಡ ವಿಶ್ರಾಂತಿ ಪಡೆದು ಒಮ್ಮೆ ಗುಣಹೊಂದು. ಉಪಕಾರಗಳ ಕುರಿತು ಮುಂದಕ್ಕೆ

ಮಾತನಾಡೋಣ" ಎಂದ ಕೃಷ್ಣಪ್ಪ. ಅಷ್ಟರಲ್ಲಿ ಅನಂತನ ಅಕ್ಕ ಎರಡು ಲೋಟ ಕಾಫಿ ತಂದಿತ್ತಳು. ಆಕೆಯನ್ನು ಕೃತಜ್ಞತಾಪೂರ್ವಕವಾಗಿ ನೋಡಿದ ಅನಂತ. ಆಕೆ ಹೊರ ತೆರಳಿದಳು.

"ಲಕ್ಷ್ಮಿ ಅದರ ಬಳಿಕ ನಿನಗೆ ನೋಡಸಿಕ್ಕಿದ್ದಳೋ? ಅವಳಲ್ಲಿ ನಾನು ಕೇಳಿದ್ದ ವಿಚಾರವನ್ನು ಹೇಳಿದ್ದಿಯಾ?"

"ಹ್ಞಾಂ, ಸಿಕ್ಕಿದ್ದಳು. ಚಿತ್ರ ಬಿಡಿಸುವ ಸಮಯ ಗಂಟೆಗಂಟೆ ಸುಮ್ಮನಿರಲು ಅವಳಿಂದ ಸಾಧ್ಯವಿಲ್ಲವಂತೆ. ಅದರ ಬದಲು ಒಂದು ಫೋಟೋ ತೆಗೆದು, ಅದನ್ನು ಎದುರಿಟ್ಟುಕೊಂಡು ಚಿತ್ರಿಸಲು ಅವಳಿಂದ ಆಕ್ಷೇಪವಿಲ್ಲವಂತೆ."

ಕೃಷ್ಣಪ್ಪ ಎಷ್ಟೆಂದರೂ ವ್ಯಾಪಾರಿ. ಸುಳ್ಳನ್ನು ಹುಟ್ಟಿಸಿ, ಬೆಳೆಸಿ ಹೇಗೆ ಕಾಪಾಡಬೇಕು ಎಂಬುದನ್ನು ತಿಳಿದಾತ. ಅನಂತನಿಗೆ ಬೇಸರ ವೆನಿಸಿತು.

"ಅಯ್ಯೋ, ಫೋಟೋ ಕಂಡು ಚಿತ್ರಿಸಲು ಸಾಧ್ಯವಾಗುತಿದ್ದರೆ ಇಷ್ಟೆಲ್ಲಾ ಕಷ್ಟಪಡಬೇಕಿತ್ತೇ? ಅವಳಿಗೆ ಅಷ್ಟೂ ತಿಳಿದಿಲ್ಲವೇ?

ಕೃಷ್ಣಪ್ಪ ನಿರುತ್ತರಿ.

ತನ್ನ ತಲೆಯ ಕೆಳಗಿದ್ದ ಮತ್ತು ಮಗ್ಗುಲಲ್ಲಿದ್ದ ದಿಂಬುಗಳನ್ನು ಮಂಚಕ್ಕೆ ಒರಗಿಸಿಟ್ಟು, ಎದ್ದು ಕುಳಿತು ಕಾಫಿ ಕುಡಿಯ ತೊಡಗಿದ. ಕೃಷ್ಣಪ್ಪನೂ ಪಾಲುಗಾರನಾದ, ಕಾಫಿಯ ಬಳಿಕ ಕಿಟಕಿಯ ಹೊರ ನೋಡುತ್ತಾ ನುಡಿದ ಅನಂತ —

"ಮದ್ರಾಸಿನ ಪ್ರದರ್ಶನಕ್ಕೆ ಒಂದುವರೆ ತಿಂಗಳು ಮಾತ್ರ ಉಳಿದಿದೆ. ಒಂದು ಚಿತ್ರ ಕೂಡಾ ಪೂರ್ಣವಾಗಿಲ್ಲ. ಎರಡು ಮೂರು ಅರೆ ಅರೆಯಾಗಿ ಬಿದ್ದಿವೆ", ಎಂದು ಮೂಲೆ ತೋರಿ ನುಡಿದ. ಕೃಷ್ಣಪ್ಪ ಅವುಗಳ ಬಳಿ ತೆರಳಿ ಕಂಡ ಎಲ್ಲವೂ ಅನಂತನೆಂದಂತೆ ಅಪೂರ್ಣ.

"ಪ್ರದರ್ಶನಕ್ಕಿಂತ ಆರೋಗ್ಯ ಮುಖ್ಯ. ಈಗಿಂದೀಗಲೇ ಏನಾದರೂ ಮಾಡಲು ತೊಡಗಬೇಡ. ಆರೋಗ್ಯ ಚೆನ್ನಾಯಿತೆಂದರೆ ಇಂತಹ ಹತ್ತು ಚಿತ್ರಗಳನ್ನು ಮಾಡಬಹುದು".

ಅನಂತನಿಗೆ ಸರಿ ಎನಿಸಿತು.

— ೨೭ —

ಒಂದೆಡೆಯಲ್ಲಿ ಲಕ್ಷ್ಮಿಯ ಚಿತ್ರ ಅಸಾಧ್ಯವೆಂದು ಕಂಡರೆ, ಇನ್ನೊಂದೆಡೆಯಲ್ಲಿ ಸಾಧ್ಯವೆಂದು ಕಾಣಿಸುತಿತ್ತು. ಕೆಮ್ಮಿನ ಕಾವು ಕಡಿಮೆಯಾದೊಡನೆ ಪ್ರದರ್ಶನಕ್ಕೆಂದು ಕಳುಹಿಸಲಿದ್ದ ಚಿತ್ರಗಳಲ್ಲಿ ತನ್ಮಯನಾಗ ತೊಡಗಿದ. ಒಂದು ತಿಂಗಳೊಳಗಾಗಿ ಮೂರು ಚಿತ್ರಗಳು ಮುಗಿದುವು. ಈ ಮೂರು ಚಿತ್ರಗಳಲ್ಲಿ ಕೆಲಸ ಮಾಡುತಿದ್ದಾಗ ಲಕ್ಷ್ಮಿಯ ನೆನಪಾಗಲೀ, ತಾಯಿ ಮಗು ಚಿತ್ರದ ನೆನಪಾಗಲೀ, ಅವನನ್ನು ಕಾಡುತ್ತಿರಲಿಲ್ಲ. ಈ ಬಾರಿಯ ಆತನ ಕೆಮ್ಮಿನ ಉಗುಳಿನೊಡನೆ ರಕ್ತದ ಛಾಯೆ ಇದ್ದಿತ್ತು. ಹಾಗಾಗಿ ಅವನಕ್ಕ ಆರೋಗ್ಯದ ಕಡೆಗೆ ವಿಶೇಷ ಗಮನ ಹರಿಸಿದ್ದಳು. ಒಂದು ದಿನ ಅಕ್ಕ, ಭಾವ ತಮ್ಮೊಳಗೆ ಮಾತನಾಡುತಿದ್ದರು.

"ಆತ ಇಲ್ಲಿಯೇ ಇದ್ದರೆ ವಿಶ್ರಾಂತಿ ಪಡೆಯುವುದಿಲ್ಲ. ಎಲ್ಲಿಯಾದರೂ ಸೆನಿಟೋರಿಯಮ್‌ಗೆ ಕಳುಹಿಸುವುದು ಒಳ್ಳೇಯದು", ಎಂದು ಭಾವ ಹೇಳಿದ್ದರು

"ಬೇಡ, ಇಲ್ಲಿಯೇ ಇರಲಿ. ಅವನ ಆರೈಕೆಯನ್ನು ಈಗ ನಾನೇನು ಚೆನ್ನಾಗಿ ಮಾಡುತ್ತಿಲ್ಲವೇ?"

"ನೀನು ಆರೈಕೆ ನೋಡುತ್ತಿಲ್ಲವೆಂದು ನಿನ್ನ ಮೇಲೆ ಆಕ್ಷೇಪಣೆ ಎತ್ತಲಾರೆ. ಬದಲಾಗಿ ಆತ ಸಾಕಷ್ಟು ವಿಶ್ರಾಂತಿ ಪಡೆಯುವುದಿಲ್ಲವೆಂದು ನನ್ನ ಅಭಿಪ್ರಾಯ."

ಅವನ ಅಕ್ಕ ಉತ್ತರಿಸಲಿಲ್ಲ. ಭಾವನೆಂದುದು ಸರಿ ಎಂದು ಅನಂತನಿಗೆ ಅನಿಸಿತು. ಕಾರಣ ತಾನು ಬಣ್ಣ ಕುಂಚಗಳ ನಡುವೆ ಇರುವಷ್ಟು ಸಮಯ ಸಂಪೂರ್ಣ ವಿಶ್ರಾಂತಿ ಅಸಾಧ್ಯವೆಂದು ಗೊತ್ತು. ಒಮ್ಮೆಂದೊಮ್ಮೆ ಭಾವನೊಡನೆ ತಾನು ಯಾವುದಾದರೂ ಸೆನಿಟೋರಿಯಮ್‌ಗೆ ಸೇರಲು ಸಿದ್ಧನಿದ್ದೇನೆಂದು ಹೇಳಬೇಕೆಂದು ಅನಿಸಿತ್ತು, ಆದರೆ ಅಕ್ಕನ ವಿಶ್ವಾಸಪೂರ್ಣ ಮಾತು ಉದ್ವೇಗವನ್ನು ತಡೆದಿತ್ತು.

ಮರುದಿನ ಈ ವಿಚಾರವನ್ನು ಕೃಷ್ಣಪ್ಪನಲ್ಲಿ ಹೇಳಿದ ಕೃಷ್ಣಪ್ಪ

ಅವನ ಭಾವನ ಮಾತಿಗೆ ಬೆಂಬಲವನ್ನಿತ್ತ. ಅಂತೂ ತಾನು ವಿಶ್ರಾಂತಿ ಪಡೆಯಬೇಕೆಂದು ಎಲ್ಲರೂ ಬಯಸುತಿದ್ದಂತೆ ಅನಂತನಿಗೆ ಕಂಡಿತು.

ಸಂಜೆಯ ಚಿಕ್ಕ ತಿರುಗಾಟಕ್ಕೆ ಡಾಕ್ಟರರು ಅನುಮತಿ ಕೊಟ್ಟಿದ್ದರು. ಹಾಗಾಗಿ ನೆಮ್ಮದಿಯಿಂದ ಸಂಜೆಯ ಹೊತ್ತು ಕಳೆಯುತಿತ್ತು. ಒಂದು ದಿನ—ನಿತ್ಯದ ತಿರುಗಾಟಕ್ಕೆ ಹೊರಟಿದ್ದ. ಲಕ್ಷ್ಮಿ ಎದುರು ಸಿಕ್ಕಿದಳು. ಅನಂತನ ಇಡಿಯ ದೇಹದಲ್ಲೊಮ್ಮೆ ಕಾವು ಹರಡಿದಂತಾಯಿತು. ಆಕೆ ಅನಂತನನ್ನು ಕಂಡು ತುಂಬಿದ ನಗು ನಕ್ಕಳು. ಅನಂತನಿಗೆ ಏನೇನೋ ಅನಿಸಿತು. ಆತ ಅಳುಕಿನಿಂದ, ಎದೆಯ ಹೊಡೆದಾಟದ ಶಬ್ದಮಯ ಗಂಟಲಿನಿಂದ ಏನನ್ನೋ ತೊದಲಿದ.

“ನಿಮಗೆ ಮೈ ಚೆನ್ನಾಗಿಲ್ಲವಂತೆ”, ಎಂದು ನಿಂತು ಅವನೆಡೆಗೆ ನೋಡುತ್ತಾ ಲಕ್ಷ್ಮಿ ನುಡಿದಳು. ಅನಂತನಲ್ಲಿ ಉತ್ತರಿಸುವ ಚೈತನ್ಯವಿರಲಿಲ್ಲ. ಯಾವೊಂದು ಕ್ಷಣಕ್ಕಾಗಿ ಆತ ಕೃಷ್ಣಪ್ಪನಲ್ಲಿ ವಾದಿಸುತಿದ್ದನೋ, ಆ ಕ್ಷಣ ಅನಿರೀಕ್ಷಿತವಾಗಿ ಎದುರು ಬಂದಿತ್ತು. ಬಡವನಿಗೆ ಭಾಗ್ಯ ಬಂದಂತಾಗಿತ್ತು.

“ನಿಮಗೆ ಯಾರು ಹೇಳಿದರು?”

‘ನಿಮ್ಮ ಮೊಗ ನೋಡುವಾಗ ತಿಳಿಯುತ್ತದೆ” ಎಂದಳಾಕೆ. ಅನಂತನ ಚುಟುಕು ಮಾತು ಆಕೆಗೆ ತಾಗಿತೆಂದು ತೋರುತ್ತದೆ. ಒಂದಿಷ್ಟು ಮುಂಜಾಗ್ರತೆಗಳನ್ನು ಬೇಕೆಂದೋ, ಬೇಡವೆಂದೋ—ಅಂತೂ ಹೇಳಿ ಆಕೆ ಮುಂದರಿದಳು.

ಅಂದು ಸಂಜೆ ಅನಂತನ ಮನದಲ್ಲಿ ನೂರಾರು ಹೊಯ್ದಾಟಗಳು. ತನಗೆ ಮೈ ಚೆನ್ನಾಗಿಲ್ಲವೆಂದು ಆಕೆಯಲ್ಲಿ ಹೇಳಿದವರು ಯಾರು? ಕೃಷ್ಣಪ್ಪ ಹೇಳಿರಬಹುದು. ಆದರೆ ತನ್ನ ವಿಚಾರವನ್ನು ಆವಳಲ್ಲಿ ಹೇಳುವ ಅಗತ್ಯ ಆತನಿಗೆ ಏನಿತ್ತು?

ಕೃಷ್ಣಪ್ಪನಲ್ಲಿಯೇ ಈ ವಿಚಾರಗಳನ್ನು ಕೇಳಬೇಕೆಂದು ಅನಿಸಿತು. ಮೈದಾನಿನ ತಂಪು ಗಾಳಿ ಅಹಿತವಾಗಿ ತೋರಿತು. ಆದರೆ ನಿಶಕ್ತತೆ ಕತ್ತಲಾಗುವ ತನಕ ಆತನನ್ನು ಅಲ್ಲೇ ಕುಳಿತಿರುವಂತೆ ಮಾಡಿತು.

ಬಳಿಕ ಮೆಲ್ಲನೆದ್ದು ಕೃಷ್ಣಪ್ಪನ ಅಂಗಡಿಯ ಬಳಿ ತೆರಳಿದ. ಕೃಷ್ಣಪ್ಪ ಅಲ್ಲಿರಲಿಲ್ಲ—ತಿರುಗೊಮ್ಮೆ ಮೈದಾನಿಗೆ ಹಿಂತಿರುಗಿದ.

— ೨೮ —

ಆತನ ಭಾವ ಅನಂತನನ್ನು ಹುಡುಕಿಕೊಂಡು ಮೈದಾನಿಗೆ ಬಂದರು. ಅನಂತ ಮೂಕನಂತೆ ಕುಳಿತಿದ್ದ. ತಮಗೆ ಮಕ್ಕಳಿಲ್ಲದಿದ್ದುದರಿಂದ, ಅವರು ಅನಂತನನ್ನು ಪ್ರೀತಿಪೂರ್ವಕ ಕಾಣುತಿದ್ದರು, ಆದರಿಸುತಿದ್ದರು. ಅವರ ಮನೋಭಾವ ಅನಂತನಿಗೆ ವಿದಿತ. ಅವರ ಮನ ನೋಯಿಸಲು ಆತ ಎಂದೂ ಯತ್ನಿಸಿಲ್ಲ.

"ಇಲ್ಲಿ ಇಷ್ಟು ಹೊತ್ತು ಕುಳಿತು ಮಾಡಿದ್ದಾದರೂ ಏನು? ಡಾಕ್ಟರರು ಸಂಜೆ ಹೊತ್ತು ಸ್ವಲ್ಪ ತಿರುಗಾಡಬಹುದು ಎಂದು ಮಾತ್ರ ಹೇಳಿದ ನೆನಪು ನನಗೆ. ಮನೆಯಲ್ಲಿ ನಿನ್ನ ಅಕ್ಕ ಕೂಗುತ್ತಾಳೆ" ಎಂದವರು ನಿಂತಿದ್ದು ಮಾತನಾಡಿದರು. ಲಕ್ಷ್ಮಿಯೊಡನೆ ಮಾತನಾಡಿ ಅದಷ್ಟರಲ್ಲಿ ಎರಡು ಗಂಟೆಗಳು ಕಳೆದು ಹೋಗಿದ್ದರೂ, ಅನಂತನ ಮನದ ಕಾವು ಇಳಿದಿರಲಿಲ್ಲ ಭಾವನ ಮಾತಿಗೆ ಉತ್ತರ ಕೊಡದೆ ಮೇಲಕ್ಕೆದ್ದ. ಇಬ್ಬರೂ ಮನೆಯ ಕಡೆ ನಡೆಯತೊಡಗಿದರು.

"ನಾವೇನಾದರೂ ಮಾತು ಹೇಳಿದರೆ ಅದು ನಿನ್ನ ಆರೋಗ್ಯದ ದೃಷ್ಟಿಯಿಂದಲೇ ಹೊರತು ಬೇರಲ್ಲ, ನಿನ್ನ ಅಕ್ಕ ನಿನ್ನನ್ನು ಎಷ್ಟು ಪ್ರೀತಿಸುತ್ತಾಳೆಂದು ನಿನಗೆ ತಿಳಿದಿರಬಹುದು. ಅವಳು ತೋರುತ್ತಿರುವ ಪ್ರೀತಿಗೆ ಬದಲಾಗಿ ನೀನು ಸ್ವಲ್ಪ ವಿಶ್ರಾಂತಿ ಏಕೆ ಪಡೆಯಬಾರದು? ಯೋಚಿಸಿ ನೋಡು. ನೀನು ನನಗೆ ಬೇರೆಯಲ್ಲ, ನಿನ್ನ ಅಕ್ಕನಿಗೆ ಬೇರೆಯಲ್ಲ."

ಅನಂದ ಮೌನಿ.

ಮನೆಯ ಗೇಟಿನ ಬಳಿ ಬಂದಾಗ ಅಕ್ಕ ತನಗಾಗಿ ಚಾವಡಿಯಲ್ಲಿ ಕಾದು ಕುಳಿತಿರುವುದು ಅನಂತನಿಗೆ ಗೋಚರಿಸಿತು. ತಾನು ಮಾಡಿದುದು ತಪ್ಪೆನಿಸಿತು. ಆದರೆ ಅವಳಲ್ಲಿ ಕ್ಷಮೆ ಕೇಳುವಷ್ಟು ಹಿರಿದಾದ ಅಪರಾಧ ತನ್ನದಲ್ಲ ಎಂಬ ಅಭಿಪ್ರಾಯವೂ ಮೂಡಿತು.

"ನೀನು ನಮ್ಮ ಮಾತು ಕೇಳದೆ ಹೋದರೆ ಹೇಗೇ ಅನಂತಾ? ಅಮ್ಮ ಇರುತಿದ್ದರೆ ನಾಲ್ಕು ಪೆಟ್ಟು ಕೊಟ್ಟಾದರೂ ನಿನ್ನನ್ನು ಕಟ್ಟಿ ಹಾಕುತಿದ್ದಳು" ಎಂದು ಆತ ಮೆಟ್ಟಲೇರುತ್ತಿದ್ದಂತೆ ಅವನಕ್ಕ ನುಡಿದಳು.

"ನೀನು ಈಗ ಸುಮ್ಮನಿರು. ಅವನಿಗೆ ಬಹಳ ಬೇಸರವಾಗಿದೆ" ಎಂದರು ಅವನ ಮಗ್ಗುಲಲ್ಲೇ ಇದ್ದ ಭಾವ. ಅನಂತ ನೇರಾಗಿ ತನ್ನ ಕೊಠಡಿಗೆ ತೆರಳಿದ. ಅಕ್ಕ ಊಟಕ್ಕೆ ಕರೆದಾಗ, ಶಾಸ್ತ್ರ ಮುಗಿಸಿ ಎದ್ದ. ಬಳಿಕ ಹಾಲು ಬಂದಿತು. ಕುಡಿದ. ಅಕ್ಕ ಏನನ್ನೊ ಅಂದಳು. ಕೇಳಿದ. ಅರ್ಥವಾಗಲಿಲ್ಲ.

ಕೋಣೆಯ ದೀಪವನ್ನು ಆರಿಸಿ ಬಿಟ್ಟು ಕಿಟಕಿಯ ಹೊರಗಿನ ನಕ್ಷತ್ರಗಳನ್ನು ನೋಡುತ್ತಾ ಕುಳಿತ. ನೆನಪು ಹಿಂದಿನ ದಿನಗಳನ್ನು ಕಣ್ಮುಂದೆ ತಂದಿತು.

ಆತ ಮದ್ರಾಸಿಗೆ ಹೋಗಲಿದ್ದ ಕೆಲವು ದಿನಗಳ ಹಿಂದಕ್ಕೆ ನಡೆದ ಘಟನೆ. ಸೂಕ್ಷ್ಮ ವಿವರಗಳು ಮರೆತಿವೆಯಾದರೂ, ಸ್ಥೂಲ ವಿಷಯಗಳು ನವೀನತೆಯನ್ನು ಕಳೆದು ಕೊಂಡಿರಲಿಲ್ಲ.

ಅನಂತ ಮತ್ತು ಕೃಷ್ಣಪ್ಪ ಊರ ದೇವಸ್ಥಾನದ ಮುಂದುಗಡೆ ನಡೆಯಲಿದ್ದ ಬಯಲಾಟ ನೋಡಲೆಂದು ರಾತ್ರಿಯ ಊಟ ತೀರಿಸಿ ಹೊರಟಿದ್ದರು. ಅನಂತನ ಕಿಸೆಯಲ್ಲಿ ಪುಡಿಗಾಸು ಇದ್ದಿತ್ತು. ಅಲ್ಲಿ ತಲುಪುವ ವೇಳೆ ಕಟ್ಟೆ ವೇಷಗಳ ಕುಣಿತ ಮುಗಿದಿರಲಿಲ್ಲ. ನೆಟ್ಟಗೆ ಚೌಕಿಯ ಕಡೆಗೆ ಹೋದರು. ಅಲ್ಲಿ ವೇಷಧಾರಿಗಳು ಬಣ್ಣ ಹಾಕಿಕೊಳ್ಳುತಿದ್ದ ಬಗೆ—ಅವರ ಮಾತುಕತೆ—ಎಲ್ಲವನ್ನೂ ಸೂಕ್ಷ್ಮವಾಗಿ ಪರೀಕ್ಷಿಸುತಿದ್ದ ಅನಂತ. ಸಮೀಪದಲ್ಲಿ ಯಾರೋ ಮಾತನಾಡಿದಂತಾಯಿತು. ಕಣ್ತಿರುವಿ ಕಂಡ. ಲಕ್ಷ್ಮಿ ನಿಂತಿದ್ದಳು.

ಲಕ್ಷ್ಮಿಯನ್ನು ಸಮೀಪದಿಂದ ಅನಂತ ಅದು ತನಕ ಕಂಡುದುದು ಒಂದು ಅಥವಾ ಎರಡು ಬಾರಿ ಮಾತ್ರ. ಆಕೆ ಗಂಡುಸೊಬ್ಬನೊಡನೆ ಮಾತನಾಡುತಿದ್ದಳು. ಮಾತನಾಡುವ ವೇಳೆ ಅಳುಕು ಇದ್ದಿರಲಿಲ್ಲ. ಹಾಗಾಗಿ ಆಕೆಯ ಸಮೀಪ ನಿಂತಿದ್ದ ವ್ಯಕ್ತಿ ಗಂಡನೇ ಆಗಿರಬೇಕೆಂದು ನಿರ್ಧರಿಸಿದ. ಕೃಷ್ಣಪ್ಪ ಬಣ್ಣ ಬಳಿಯುವುದನ್ನು ನೋಡುತಿದ್ದರೆ,

ಅನಂತ ಲಕ್ಷ್ಮಿಯನ್ನೇ ನೋಡುತಿದ್ದ. ಅಲ್ಲೇ ಸ್ವಲ್ಪ ದೂರದಲ್ಲಿ ಆಟಕ್ಕೆಂದು ಬಂದಿದ್ದ ನೆಲಕಡಲೆಯ ಅಂಗಡಿಯ ಚಿಮಿಣಿ ದೀಪದ ಬೆಳಕಲ್ಲಿ ಲಕ್ಷ್ಮಿ ಅಂದಿಗಿಂತಲೂ ಸುಂದರಳಾಗಿ ಕಂಡಳು. ಅನಂತ ತನ್ನನ್ನೇ ನೋಡುತಿದ್ದಾನೆಂದು ಆಕೆಗೆ ತಿಳಿಯಿತೋ ಏನೋ, ಇಬ್ಬರೂ ಆ ಕಡೆಗೆ ಸರಿದರು.

ಒರಟಾದ ಮಾತು, ಅಷ್ಟೇ ಒರಟಾದ ನೋಟ—ಲಕ್ಷ್ಮಿಯ ಗಂಡನದು. ಬಹಳ ಎತ್ತರದ ಆಳು. ಕುತ್ತಿಗೆ ಪಟ್ಟಿ ಇಲ್ಲದ ಅಂಗಿ. ಮೇಲಕ್ಕೊಂದು ಬಣ್ಣ ಬಣ್ಣದ ಟವೆಲ್. ತಲೆಗೂದಲು ಬಾಚಿರಲಿಲ್ಲ. ಬಾಯಿ ತುಂಬಾ ಅಹಸ್ಯ ಬರುವಂತೆ ತುಂಬಿಕೊಂಡು ಜಗಿಯುತಿದ್ದ ವೀಳ್ಯ. ಅವರಿಬ್ಬರು ಆ ಕಡೆಗೆ ತೆರಳಿದ ಬಳಿಕವೂ ಅನಂತ ಅವರ ಬೆನ್ನು ನೋಡುತಿದ್ದ. ತನ್ನ ನೆನಪಿನ ಮೂಲೆಯಲ್ಲಿದ್ದ ಯಾವುದೋ ಸುಪ್ತ ಸುಖವನ್ನು ಲಕ್ಷ್ಮಿ ಕೆದಕುತಿದ್ದಂತೆ ಅಂದವನಿಗೆ ಭಾಸವಾಗಿತ್ತು. ಲಕ್ಷ್ಮಿಯ ಗಂಡ ಭಾಗ್ಯವಂತ ಎಂದು ಎಣಿಸಿದ್ದ.

ಬಯಲಾಟ ಮೊದಲಾದ ಬಳಿಕ ತಾನು ರಂಗಸ್ಥಳ ನೋಡುವ ಬದಲು ಹೆಂಗುಸರ ಗುಂಪಲ್ಲಿ ಆಕೆಯನ್ನು ಹುಡುಕಲು ಯತ್ನಿಸಿದ. ಆದರೇಕೋ ಆಕೆ ಕಣ್ಣಿಗೆ ಬಿದ್ದಿರಲಿಲ್ಲ. ಬಳಿಕ ಮೇಲಕ್ಕೆ ನೋಡಿದ--ಚಂದ್ರನಿದ್ದಿರಲಿಲ್ಲ. ಚುಕ್ಕಿಗಳು ಮಿನುಗುತಿದ್ದುವು—ಇಂದಿಗೂ ಅವೇ ಚುಕ್ಕಿಗಳು.

ಅಂದು ಅಂತಹ ಸುಂದರ ಮೂರ್ತಿ—ಮುಗ್ಧ ಜೀವಿಯಾಗಿದ್ದ ಲಕ್ಷ್ಮಿ, ಇಂದು ಬೇರೆಯೇ ಬಗೆಯವಳೆಂದರೆ ನಂಬಲು ಬಂದೀತೇ? ಕೃಷ್ಣಪ್ಪ ಹಲಬಾರಿ ಆಕೆ ಕೆಟ್ಟ ನಡತೆಯವಳು ಎಂದಿದ್ದರೂ, ಅದನ್ನು ಒಪ್ಪಿಕೊಳ್ಳುವ ಮನೋಸ್ಥಿತಿ ಅನಂತನಲ್ಲಿ ಬೆಳೆದಿರಲಿಲ್ಲ. ಏಕೋ, ಲಕ್ಷ್ಮಿ ಅಂತಹ ಪ್ರಭಾವವನ್ನು ಚಿಕ್ಕಂದಿನಿಂದಲೇ ಆತನ ಮೇಲೆ ಬೀರಿದ್ದಳು.

ವಿಶ್ರಾಂತಿ! ವಿಶ್ರಾಂತಿ!

ಎಲ್ಲರು ಹೇಳುತಿದ್ದ ಮಾತೊಂದೇ—ತಾನು ವಿಶ್ರಾಂತಿ ಪಡೆಯಬೇಕೆಂದು. ಆದರೆ ವಿಶ್ರಾಂತಿ ದೇಹಕ್ಕೆ ಮಾತ್ರ ಸಾಕೇ? ಮನಸ್ಸಿಗೆ

ಬೇಡವೇ? ಅಕ್ಕ ಭಾವನವರು ಮಲಗಿದ ಬಳಿಕ ಮೆಲ್ಲನೆ ಚಾವಡಿಗೆ ತೆರಳಿದ. ಸಮಯ ಹನ್ನೊಂದಕ್ಕೆ ಸಮೀಪಿಸಿತ್ತು. ಕಾಲುಗಳು ಕೃಷ್ಣಪ್ಪನ ಮನೆಯಕಡೆ ಸಾಗಿದುವು. ಕೆಲವು ನಾಯಿಗಳು ಬೊಗಳಲಾರಂಭಿಸಿದುವು.

ಕೃಷ್ಣಪ್ಪನ ಮನೆಬಾಗಿಲು ಮುಚ್ಚಿತ್ತು. ಬೆಳಕು ಒಂದಿಷ್ಟಾದರೂ ಕಾಣಿಸುತ್ತಿರಲಿಲ್ಲ. "ಕಿಟ್ಟೂ.... ಕಿಟ್ಟೂ...." ಎಂದು ಎರಡು ಬಾರಿ ಕರೆದ. ಉತ್ತರ ಸಿಗಲಿಲ್ಲ. ಮನಸ್ಸಿನ ಅಶಾಂತತೆ ನೀಗಲು ಏನಾದರೊಂದು ಸಾಧನ ಬೇಕಿತ್ತು. ನೆಟ್ಟಗೆ ಸಿನೆಮಾ ಥಿಯೇಟರ್ ಬಳಿ ನಡೆದ. ಟಿಕೆಟ್ ಕೊಡುವಾತ ಅಲ್ಲಿರಲಿಲ್ಲ. ಬಾಗಿಲಲ್ಲಿ ನಿಂತಿದ್ದವನ ಕೈಗೆ ಎಷ್ಟೋ ಹಣ ಸುರುವಿ ಒಳ ತೆರಳಿದ.

ಸ್ವಲ್ಪ ಸಮಯದಲ್ಲಿ "ವಿರಾಮ" ಬಂದೊದಗಿತು. ಯಾವುದೋ ಕುತೂಹಲದಿಂದ ಹಿಂತಿರುಗಿ ಕಂಡ. ತಾನು ವಿಶ್ರಾಂತಿ ಪಡೆಯಬೇಕೆಂದು ಒತ್ತಿ ಹೇಳುತಿದ್ದ ಡಾಕ್ಟರರು ಅಲ್ಲಿದ್ದರು. ಅನಂತನನ್ನು ನೋಡಿ ಅವರು ನಕ್ಕರು. ಇವನೂ ನಕ್ಕುಬಿಟ್ಟ.

— ೨೯ —

ಹನ್ನೆರಡುವರೆ ಸಮೀಪಕ್ಕೆ ಮನೆ ತಲುಪಿದ. ಅಷ್ಟರಲ್ಲಿ ನಿಶ್ಶಕ್ತತೆ ಆತನನ್ನು ಸಂಪೂರ್ಣ ಆವರಿಸಿತ್ತು. ಒಂದು ಬಾರಿ ಹಾಸುಗೆಯಲ್ಲಿ ಉರುಳಿದರೆ ಸಾಕೆನಿಸಿತ್ತು. ಆದರೆ ಹೊರಚಾವಡಿಯಲ್ಲಿ ದೀಪ ಬೆಳಗಿ ಅಕ್ಕ ಭಾವ—ಅನಂತನಿಗಾಗಿ ಕಾಯುತಿದ್ದರು. ಅನಂತ ಅಪರಾಧಿಯಂತಾದ.

"ಎಲ್ಲಿಗೆ ಹೋಗಿದ್ದೀ?"

"ಸಿನೇಮಕ್ಕೆ."

"ನಿನಗೆ ನಾವು ಹೇಳಿದರೆ ಏನೇನೂ ಕೇಳಿಸುವುದಿಲ್ಲ.' ಎಂದಳು ಅಕ್ಕ. ಅನಂತನಿಗೆ ಇದಕ್ಕಿಂತ ಹೆಚ್ಚಿನ ಮಾತು ಬೇಕಿರಲಿಲ್ಲ. ತನ್ನ ಕೋಣೆಗೆ ಧಾವಿಸಿ ಹಾಸುಗೆಯಲ್ಲಿ ಉರುಳಿಕೊಂಡ.

ಅಂದು ರಾತ್ರೆ ನಿದ್ದೆ ಇಲ್ಲದೆ ಕಳೆಯಿತು. ಹಾಸುಗೆಯಲ್ಲಿ

ಮಗ್ಗುಲು ಬದಲಿಸುತ್ತಾ, ಬೇಡವಾದುದನ್ನು ಯೋಚಿಸುತ್ತಾ ಆಗೊಮ್ಮೆ ಈಗೊಮ್ಮೆ ಅಕ್ಕ ಭಾವನವರ ಔದಾರ್ಯಗಳನ್ನು ತೂಗಿ ನೋಡುತಿದ್ದ.

ಇರುಳು ಅನಂತ ನಿದ್ರಿಸಿಲ್ಲವೆಂದು ಮುಂಜಾನೆ ಅವನ ಕಣ್ಣುಗಳನ್ನು ನೋಡುವ ವೇಳೆ ಅಕ್ಕನಿಗೆ ತಿಳಿಯಿತು. ಆಕೆ ಪ್ರಶ್ನಾರ್ಥಕ ನೋಟ ಬೀರಿದಳು. ಅನಂತನಿಗೆ ಎಲ್ಲವೂ ಮಂಕಾಗಿ ಕಾಣಿಸುತಿತ್ತು.

ಕಾಫಿ ಮುಗಿಸಿ ಕೃಷ್ಣಪ್ಪನಲ್ಲಿಗೆ ಓಡಿದ.

"ಅಪರೂಪ?"

"ನನಗೆ ಸೌಖ್ಯವಿಲ್ಲವೆಂದು ನೀನು ಲಕ್ಷ್ಮಿಯೊಡನೆ ಹೇಳಿರುವಿಯಾ?" ಎಂದು ಹಿಂದಿನ ಸಂಜೆಯಿಂದ ಮನದಲ್ಲಿ ಕೊರೆಯುತಿದ್ದ ಪ್ರಶ್ನೆಯನ್ನು ನೇರವಾಗಿ ಕೇಳಿದ. ನಿದ್ದೆಕೆಟ್ಟು ಬಣ್ಣ ಕಳೆದುಕೊಂಡಿರುವ ಕಣ್ಣುಗಳು. ಬಾಚಿಕೊಂಡಿರದ ಕೂದಲು, ಕೃಷ್ಣಪ್ಪನಿಗೆ ಅನಂತನ ವಿಶೇಷ ರೂಪು ತೋರಿದುವು.

"ಸ್ವಲ್ಪ ಕುಳಿತುಕೋ.'

.'ನನ್ನ ಪ್ರಶ್ನೆಗೆ ಉತ್ತರ?'

"ಕೊಡುತ್ತೇನೆ. ಸ್ವಲ್ಪ ಕಾಫಿ ತರಿಸುತ್ತೇನೆ' ಎಂದು ಅನಂತನನ್ನು ಕೇಳುತಿದ್ದಂತೆಯೇ ಹೋಟೇಲಿಗೆ ಹುಡುಗನನ್ನು ಕಳುಹಿಸಿದ. ಅನಂತ ತುಂಬಾ ಅಸಮಾಧಾನದಿಂದ ಕುಳಿತ. ಅಷ್ಟರಲ್ಲಿ ಕೆಲವು ಕೊಳ್ಳುಗರು ಬಂದರು. ಕೃಷ್ಣಪ್ಪ ಆ ಕಡೆ ಗಮನ ಹರಿಯಿಸಬೇಕಾಯಿತು. ಆತ ತನ್ನ ಕೆಲಸ ಮುಗಿಸಿ ಹಿಂತಿರುಗುವ ವೇಳೆ ಅನಂತನ ಮನಸ್ಸಿನ ಕಾವು ಸ್ವಲ್ಪ ಇಳಿದಿತ್ತು, ಕಾಫಿಯೂ ಬಂದಿತ್ತು,

"ನಿನಗೆ ನಿಶ್ರಾಂತಿ ಅಗತ್ಯವೆಂದು ಡಾಕ್ಟರರು ಹೇಳಿದ್ದು ನೆನಪಿರಬಹುದು. ನಾನು ಇನ್ನೊಮ್ಮೆ ನಿನ್ನನ್ನು ಎಚ್ಚರಿಸುವುದಿಲ್ಲ।

"ನಾನು ಚನ್ನಾಗಿಯೇ ಇದ್ದೇನೆ."

"ಯಾರು ಚನ್ನಾಗಿಲ್ಲ ಮತ್ತೆ? ಎಲ್ಲರೂ ಚನ್ನಾಗಿದ್ದಾರೆ. ಆದರೆ ಡಾಕ್ಟರರು ವಿಶ್ರಾಂತಿ ಬೇಕು ಎಂದುದು ನಿನಗೆ. ಅವರ ಮಾತು ಮೀರಿ ನೀನು ರಾತಾರಾತ್ರಿ ಸಿನೇಮಕ್ಕೆ ಹೋಗುವುದು, ತಿರುಗಾಟ ಹೊರಡಿಸುವುದು ಒಳ್ಳೇಯದಲ್ಲ."

"ನಾನು ತಿರುಗಾಡಿದೆ ಎಂದು ಯಾರು........"

"ನನಗದು ತಿಳಿಯುತ್ತದೆ. ನೀನು ಎಲ್ಲೆಲ್ಲಿಗೆ ಹೋಗುತ್ತೀ— ಏನೇನು ಮಾಡುತ್ತಿ—ಎಂದು ನನಗೆ ಎಲ್ಲವೂ ತಿಳಿಯುತ್ತದೆ."

"ನನ್ನ ಮನಸ್ಸಿಗೆ ನೆಮ್ಮದಿ ಇಲ್ಲ ಕಿಟ್ಟೂ."

"ಅದು ನನಗೆ ಗೊತ್ತು."

"ನಾನೇನು ಮಾಡಲಿ?

"ಇವತ್ತು ಸಂಜೆಗೆ ಬಾ. ಒಂದು ಕಡೆಗೆ ಹೋಗೋಣ."

ಅನಂತ ಕಣ್ತೆರೆದು ಕೃಷ್ಣಪ್ಪನನ್ನು ಕಂಡ.

— ೩೦ —

ಸಂಜೆ ಬರಲೆಂದು ಅನಂತನಿಗೆ ಸಂಜೆ ಆಹ್ವಾನ ಕೊಡುತಿದ್ದಾಗ ಕೃಷ್ಣಪ್ಪ ತಿಳಿಯಾಗಿ ನಗೆಯಾಡಿದ್ದ. ಆದಾದ ಕೂಡಲೇ ಎಂಬಂತೆ ಮನೆಗೆ ಹಿಂತಿರುಗಿದ ಅನಂತನಿಗೆ ಸಂಜೆ ಕೃಷ್ಣಪ್ಪ ತನ್ನನ್ನು ಕರೆದೊಯ್ಯುವುದಾದರೂ ಎಲ್ಲಿಗೆ ಎಂಬ ಯೋಚನೆಗೆ ತೊಡಗಿತು. ಹಲವುಬಾರಿ ಆತ ತನ್ನನ್ನು ಲಕ್ಷ್ಮಿಯಲ್ಲಿಗೆ ಎಳೆಯುತ್ತಾನೆಂದು ಅನಿಸಿತು. ಆದರೆ ಲಕ್ಷ್ಮಿ ಕೆಟ್ಟವಳೆಂದು, ತನ್ನ ಪರಿಚಿತಿಗೆ ಅನರ್ಹಳೆಂದು ಕೃಷ್ಣಪ್ಪನೇ ಅಂದಿರಲಿಲ್ಲವೇ? ಹಾಗಿರುವಾಗ ಲಕ್ಷ್ಮಿಯಲ್ಲಿಗೆ ಇರಲಾರದು.

ಪ್ರದರ್ಶನಕ್ಕೆಂದು ಕಳುಹಿಸಲಿದ್ದ ಚಿತ್ರಗಳ ಎದುರು ಕುಳಿತ. ಆದರೆ ಮನಸ್ಸಿನ ಓಟಕ್ಕೆ ಸಮನಾಗಿ ಕುಂಚ ಓಡಲಿಲ್ಲ. ಕೆಲಸ ನಿಲ್ಲಿಸಬೇಕಾಯಿತು.

ಮನಸ್ಸು ಸಂಜೆಗಾಗಿ ಹಾತೊರೆಯುತಿತ್ತು. ಮನಸ್ಸಿನ ನೆಮ್ಮದಿಯನ್ನು ಕದಡಿ ಬಿಟ್ಟಿರುವ ಹಲವಾರು ವಿಚಾರಗಳಿಂದ ಕೃಷ್ಣಪ್ಪ ತನ್ನನ್ನು ಮುಕ್ತನನ್ನಾಗಿ ಮಾಡಲು ಹೊರಟಿರುವಂತೆ ಕಾಣಿಸಿತು. ನಿತ್ಯವಿಧಿ— ಊಟಗಳನ್ನು ಅಕ್ಕನ ಗದರಿಕೆಯ ಕಣ್ಣುಗಳಡಿಯಲ್ಲಿ ಮುಗಿಸಿದ. ಮಧ್ಯಾಹ್ನ ಮೂರರ ಹೊತ್ತಿಗೆ ಡಾಕ್ಟರರು ಬಂದರು. ಅನಂತನ ಪರೀಕ್ಷೆ ನಡೆಸಿದರು.

"ನಿಮಗೆ ವಿಶ್ರಾಂತಿ ಅಗತ್ಯವೆಂದು ನಾನು ಹೇಳಿದುದು ಸರಿಯಾಗಿ

ತಿಳಿದಿರಲಾರದು. ಇಂತಹ ನಿಶ್ಯಕ್ತತೆಯಲ್ಲಿ ಕೆಲಸ ಮಾಡುತ್ತೀರಿ— ಸಿನೇಮಕ್ಕೆ ಹೋಗುತ್ತೀರಿ, ವ್ಯಥೆಗಳನ್ನು ಹಚ್ಚಿಕೊಳ್ಳುತ್ತೀರಿ. ಕನ್ನಡಿಯಲ್ಲಿ ಇತ್ತೀಚೆಗೆ ನಿಮ್ಮ ಮೊಗವನ್ನು ಒಮ್ಮೆಯಾದರೂ ನೋಡಿಕೊಂಡಿರುವಿರಾ? ಇಲ್ಲವಾದಲ್ಲಿ ಒಮ್ಮೆ ನೋಡಿಕೊಳ್ಳಿ." ಎಂದು ನಗುತ್ತಾ ಹೇಳಿದರು ಡಾಕ್ಟರರು. ಅವರ ಮಾತುಗಳನ್ನು ನಸುನಗುತ್ತಾ ಕೇಳಿದ ಅನಂತ. ಹಲವಾರು ಬಾರಿ ಮುನ್ಸೂಚನೆಗಳನ್ನು ಕೊಟ್ಟು ಡಾಕ್ಟರರು ತೆರಳಿದರು. ಅವನಕ್ಕ ಮತ್ತೊಮ್ಮೆ ಅನಂತನನ್ನು ಎಚ್ಚರಿಸಿದಳು. ಅನಂತ ಕೋಣೆಗೆ ತೆರಳಿ ಕನ್ನಡಿಯಲ್ಲಿ ತನ್ನ ಮೊಗವನ್ನು ಸರಿಯಾಗಿ ನೋಡಿಕೊಂಡ. ರಕ್ತತೆ ಮೊಗದಲ್ಲಿ ಇಲ್ಲವಾಗಿತ್ತು. ಯಾವುದಾದರೂ ರೋಗಿಯ ಚಿತ್ರ ಬರೆಯಲು ತಾನೀಗ ಪರಿಪೂರ್ಣ ರೂಪದರ್ಶಿ ಎಂದು ಅನಿಸಿತು.

ಗೋಡೆಯಲ್ಲಿ ತೂಗುತಿದ್ದ ತನ್ನ ಫೋಟೋ ಕಂಡ. ಮದ್ರಾಸಿನಲ್ಲಿ ತೆಗೆಸಿದುದು. ಅಂದು ಅಷ್ಟು ತುಂಬಿಕೊಂಡಿದ್ದ. ಇಂದು ಬೇರೆಯೇ ಬಗೆ— ಬೇರೆಯೇ ಮನೋಸ್ಥಿತಿ.

ಡಾಕ್ಟರರು ತೆರಳಿ ಒಂದು ಗಂಟೆಯ ಒಳಗೆ ಕಾಫಿ ಮುಗಿಸಿಕೊಂಡು ಅನಂತ ತಿರುಗಾಟಕ್ಕೆಂದು ಮನೆಬಿಟ್ಟ. ಕಾಲುಗಳು ಕೃಷ್ಣಪ್ಪನಲ್ಲಿಗೆ ತೆರಳಿದುವು. ಕೃಷ್ಣಪ್ಪನಿಗೆ ಆಗ ಸ್ವಲ್ಪ ಬಿಡುವು.

"ಇಷ್ಟು ಬೇಗನೆ ಬಂದೆಯಾ?"

"ಮತ್ತು ಮನೆಯಲ್ಲಿ ಕುಳಿತು ಮಾಡುವುದಾದರೂ ಏನು?"

"ಸರಿ. ಇವತ್ತು ನಿನ್ನನ್ನು ನಾನು ಎಲ್ಲಿಗೆ ಕರೆದ್ಯೊಯುತ್ತೇನೆಂದು ಗೊತ್ತೇ?"

"ಇಲ್ಲ."

"ಯೋಚಿಸಿ ಹೇಳಬಹುದೇ?"

"ನೀನೇ ಹೇಳಿ ಬಿಡು."

"ಲಕ್ಷ್ಮಿಯಲ್ಲಿಗೆ."

ಅನಂತ ಅವಕ್ಕಾದ. ಕೃಷ್ಣಪ್ಪ—ಲಕ್ಷ್ಮಿಯನ್ನು ದೂರುತ್ತಿ

ದ್ದಾತ—ತನ್ನನ್ನು ಆವಳಲ್ಲಿಗೆ ಕರೆದ್ಕೊಯ್ಯುತ್ತಾನೆ ಎಂಬುದನ್ನು ನಂಬ ಲಾಗಲಿಲ್ಲ. ಹಾಗಾಗಿ ಕೃಷ್ಣಪ್ಪನ ಮಾತು ಹಾಸ್ಯಾಸ್ಪದವಾಗಿ ಕಂಡಿತು.

"ತಮಾಷೆಯೇ?"

"ಕತ್ತಲಾಗುವಾಗ ತಿಳಿಯುತ್ತದೆ."

ಕೃಷ್ಣಪ್ಪ ವಿಶೇಷ ಸುಳ್ಳು ಹೇಳುವ ವ್ಯಕ್ತಿ ಅಲ್ಲವೆಂದು ಅನಂತನಿಗೆ ಗೊತ್ತು. ಮೇಲಾಗಿ ಬೇರೆಯವರ ಮನನೋಯಿಸದೆ ತಾನು ಹಿಡಿದ ಕೆಲಸವನ್ನು ಪೂರೈಸಿ ಬಿಡುವ ಗುಣ ಆವನದಾಗಿತ್ತು. ಅನಂತನ ಮನ ದಲ್ಲಿ ಹೆದರಿಕೆ - ಸಂತೋಷಗಳ ಸಮ್ಮಿಲನವಾಗ ತೊಡಗಿತು. ಮೂಕ ನಂತಾಗಿ ಕೃಷ್ಣಪ್ಪನನ್ನು ನೋಡಿದ.

"ಒಂದು ವೇಳೆ ನಾನು ಅಲ್ಲಿಗೆ ಬರಲು ಇಂದು ಸಿದ್ಧನಿಲ್ಲವಾದರೆ?" ಎಂದು ಸಂದೇಹಾಸ್ಪದವಾಗಿ ಕೇಳಿದ ಅನಂತ. ಕೃಷ್ಣಪ್ಪ ಆತನನ್ನು ಕಣ್ಣರಳಿಸಿ ಕಂಡ ಮಾತ್ರ. ಅನಂತ ನಿಶ್ಚಯವಾಗಿಯೂ ಬರುತ್ತಾ ನೆಂದು ಆತನಿಗೆ ಗೊತ್ತು.

"ಉತ್ತಮವಾಯಿತು."

"ಅಕ್ಕನಿಗೆ ತಿಳಿದರೆ?"

"ಮತ್ತೂ ಉತ್ತಮವಾಯಿತು."

ಕನಸಿನ ಅನುಭವ ನೆನಪಿನ ಆನುಭವಕ್ಕಿಂತ ಸಿಹಿಯಾದುದೆಂದು ಆ ಕ್ಷಣ ಅನಿಸಿತು ಅನಂತನಿಗೆ. ವಿಶೇಷ ಮಾತನಾಡದೆ ಕೃಷ್ಣಪ್ಪನ ಉಪಚಾರ ಸ್ವೀಕರಿಸಿ, ಕತ್ತಲಿಗಾಗಿ ಕಾದು ಕುಳಿತ.

"ನಾನೀಗ ಮಾಡುತ್ತಿರುವುದು ಪಾಪದ ಕೆಲಸ. ಆದರೆ ಆಕೆ ಯೊಡನೆ ಮಾತನಾಡದೆ ಉಳಿದರೆ, ಅವಳ ಸ್ನೇಹ ಬೆಳೆಸದೆ ಹೋದರೆ, ನನ್ನ ಮನಸ್ಸಿಗೆ ನೆಮ್ಮದಿ ಇರಲಾರದು. ಅದಕ್ಕಾಗಿ ಹೀಗೆ ಮಾಡುತಿ ದ್ದೇನೆ, ಕ್ಷಮಿಸು ಅಕ್ಕಾ", ಎಂದು ಕತ್ತಲಾದಂತೆ ಮನದಲ್ಲಿ ಹೇಳಿ ಕೊಂಡ ಅನಂತ.

— ೩೧ —

ಬಹು ದೂರದ ದಿನದಲ್ಲಿ ದುರ್ಘಟನೆಯೊಂದು ನಡೆಯಲಿದೆ ಎಂದು ಅನಂತನ ಮನಸ್ಸಿಗೆ ಅನಿಸುವ ವೇಳೆಯಲ್ಲಿ, ಆತ ಮತ್ತು ಕೃಷ್ಣಪ್ಪ

ಲಕ್ಷ್ಮಿಯ ಮನೆ ಅಂಗಳದಲ್ಲಿದ್ದರು. ಚಾವಡಿಯಲ್ಲಿ ಉರಿಯುತ್ತಿದ್ದ ಮಿಣುಕು ದೀಪದ ಅಸ್ಪಷ್ಟ ಬೆಳಕಲ್ಲಿ ಲಕ್ಷ್ಮಿ ಮಗುವಿಗೆ ಮೊಲೆಯೂಡುತ್ತಾ ಕುಳಿತಿರುವುದು ಕಂಡಿತು. ಅನಂತ ಕೃಷ್ಣಪ್ಪನ ಭುಜ ಹಿಡಿದು ನಿಲ್ಲಿಸಿದ

"ನಾನಲ್ಲಿಗೆ ಬರುವುದಿಲ್ಲ ಕಿಟ್ಟೂ."

ಕೃಷ್ಣಪ್ಪನಿಗೆ ಸೋಜಿಗವಾಯಿತು ಜೊತೆಯಲ್ಲಿ ತಾನು ಬಹಳಷ್ಟು ದಿನಗಳಿಂದ ರೂಪಿಸಿಕೊಂಡಿದ್ದ ಕಾರ್ಯಕ್ರಮ ಹಾಳು ಬೀಳುವ ಸ್ಥಿತಿಯಲ್ಲಿದೆ ಎಂದೂ ತಿಳಿಯಿತು. ಮನದ ಅಧೈರ್ಯವನ್ನು ಹೊರ ತೋರಗೊಡದೆ ಅನಂತನೊಡನೆ ಹೇಳಿದ.

"ಹೆದರುತ್ತಿಯಾ ಅನಂತಾ?"

"ಏಕೆ ಹೆದರಬೇಕು? ಆದರೂ ಅಲ್ಲಿಗೆ ಹೋಗುವುದು ಬೇಡವೆನಿಸುತ್ತದೆ. ಏನೋ—ನಡೆಯಬಾರದ್ದು ನಡೆದೀತು ಎಂಬ ಭಯ ಮೂಡುತ್ತದೆ", ಎಂದ. ಲಕ್ಷ್ಮಿಗೆ ಅಂಗಳದಲ್ಲಿ ಯಾರೋ ಇಬ್ಬರು ನಿಂತಿದ್ದು ಮಾತನಾಡುತ್ತಿರುವರೆಂದು ತಿಳಿಯಿತು. ಮಗುವಿನ ಬಾಯಿಯಿಂದ ಎದೆ ಬಿಡಿಸಿ, ಸೆರಗು ಸರಿಪಡಿಸಿಕೊಂಡು, ಒಳ ತೆರಳಿದಳು. ಆಕೆಯ ತಂದೆಯ ಕೆಮ್ಮು ಚಾವಡಿಯ ಮೂಲೆಯಿಂದ ಕೇಳಿಸಿತು.

"ಮುಂದಿನ ವಿಚಾರಗಳನ್ನು ಈಗ ಎಣಿಸಿಕೊಂಡರೆ ಪ್ರಯೋಜನವಿಲ್ಲ. ಹೇಗೂ ಇಲ್ಲಿಯ ತನಕ ಬಂದಾಯಿತು. ನಿನ್ನ ಮನಸ್ಸಿಗೆ ನೆಮ್ಮದಿ ಸಿಗುವುದೆಂದಾದರೆ........"

"ನನಗೆ ನೆಮ್ಮದಿ ಸಿಗಲಾರದು."

"ಸ್ವಲ್ಪ ಸುಮ್ಮನಿರು", ಎನ್ನುತ್ತಾ ತನ್ನ ಬಗಲ ಕಿಸೆಗಳಲ್ಲಿ ತುಂಬಿಕೊಂಡಿದ್ದ ಕೈಗಳನ್ನು ಹೊರತೆಗೆದು, ಅನಂತನ ತೋಳನ್ನು ಬಿಗಿಯಾಗಿ ಹಿಡಿದು, ಲಕ್ಷ್ಮಿಯ ಮನೆಕಡೆ ಸೆಳೆಯ ತೊಡಗಿದ. ಅನಂತ ಪ್ರತಿಭಟನೆ ತೋರಿದ. ಆದರೆ ಕೃಷ್ಣಪ್ಪನ ಬಲದೆದುರು ಅವನದು ತೀರ ಕಾಣದ ತೊಳಲಾಟವಾಗಿತ್ತು. ಇಬ್ಬರೂ ಮೆಟ್ಟಿಲೇರುವ ಸಮಯ ಲಕ್ಷ್ಮಿ ಹೊರಬಂದಳು. ಕೃಷ್ಣಪ್ಪನ ಕೈ ಅನಂತನ ತೋಳನ್ನು ಬಿಗಿಯಾಗಿ ಹಿಡಿದಿರುವುದನ್ನು ಕಂಡು ನಸುನಗು ಅವಳಲ್ಲಿ ಮೂಡಿತು.

"ಬನ್ನಿ....ಬನ್ನಿ...", ಎಂದು ಆದರ ಪೂರ್ವಕ ಕರೆದಳು. ಅನಂತನ ಎದೆಯು ದಡದಡತೆ ಅವಳಿಗೆ ಕೇಳಿಸುವಷ್ಟು ಬಲಿತಿತ್ತು. ಇಬ್ಬರೂ ಚಾವಡಿ ಏರಿದರು. ಅನಂತ ಬೆಂಚಿನಲ್ಲಿ ಕುಳಿತಿರಲು ಯತ್ನಿಸಿದ—ಆದರೆ ಕೃಷ್ಣಪ್ಪ ಆತನನ್ನು ಮುರುಕು ಕುರ್ಚಿಯಲ್ಲಿ ಕುಳ್ಳಿರಿಸಿ, ತಾನು ಬೆಂಚಿನ ಹಲಗೆಯನ್ನು ಒಂದು ಬಾರಿ ಅಂಗೈಯಿಂದ ಒತ್ತಿ ಕಂಡು ಕುಳಿತ. ಲಕ್ಷ್ಮಿಯ ತಂದೆ ಮೊದಲು ಕೃಷ್ಣಪ್ಪನಿಗೆ ಬಳಿಕ ಅನಂತನಿಗೆ ವಂದಿಸಿದ.

"ಒಂದು ನಿಮಿಷ ಕುಳಿತಿರಿ. ಸ್ವಲ್ಪ ಚಾ ಮಾಡಿ ತರುತ್ತೇನೆ," ಎಂದೆನ್ನುತ್ತಾ ಲಕ್ಷ್ಮಿ ಕೃಷ್ಣಪ್ಪನನ್ನು ಕಂಡಳು. ಕೃಷ್ಣಪ್ಪ ಅಸಮಾಧಾನಗೊಂಡ. ತಾವು ಬಂದು ಕುಳಿತ ಕಾವು ಇನ್ನೂ ಆರಿಲ್ಲ—ಇವಳ ಚಹಕ್ಕೆ ಏನು ಅವಸರ—ಎಂದೆನಿಸಿತು.

"ನನಗೆ ಚಾದ ಅಭ್ಯಾಸವಿಲ್ಲ", ಎಂದು ಅನಂತ ಕೃಷ್ಣಪ್ಪನನ್ನು ಕಂಡು ನುಡಿದ. ತನಗೆ ತೀರಾ ಸಮೀಪದಲ್ಲಿ ನಿಂತಿದ್ದ ಲಕ್ಷ್ಮಿಯನ್ನು ಕಣ್ಣೆತ್ತಿ ನೋಡುವುದು ಅವನಿಗೆ ಅಸಾಧ್ಯವಾಗಿತ್ತು.

"ಅವನಿಗೆ ಅಭ್ಯಾಸವಿಲ್ಲ—ನನಗೆ ಬೇಕಿಲ್ಲ. ಇಲ್ಲಿಯೇ ಕುಳಿತುಕೋ ಲಕ್ಷ್ಮಿ. ನಿನ್ನ ಬಳಿ ಏನೋ ಒಂದು ವಿಚಾರ ಕೇಳಬೇಕೆಂದು ಇದ್ದಾನೆ ಇವನು'', ಎಂದು ಅನಂತನೆಡೆ ಬೊಟ್ಟು ತೋರಿ ನುಡಿದ ಕೃಷ್ಣಪ್ಪ.

"ನನಗೇನೂ ಕೇಳಬೇಕೆಂದಿಲ್ಲ. ಏನೂ ಇಲ್ಲ", ಎಂದು ಅಸ್ಪಷ್ಟವಾಗಿ ನುಡಿದ ಅನಂತ. ಆತನ ಸ್ಥಿತಿಕಂಡು ಕೃಷ್ಣಪ್ಪನಿಗೆ ನಗು ಬಂತು. ಮೂಲೆಯ ಮುದುಕ ಬೀಡಿ ಹಚ್ಚಿ ಹೊಗೆ ಬಿಡ ತೊಡಗಿದ.

"ನೋಡು ಲಕ್ಷ್ಮಿ ನಿನ್ನ ಪರಿಚಯ ಇವನಿಗಿದೆ. ಅವನ ಪರಿಚಯ ಮಾತ್ರ ನಿನಗಿಲ್ಲ."

"ಇವರ ಪರಿಚಯ ನನಗಿಲ್ಲವೆಂದು ಹೇಳುವವರು ಯಾರು? ನನಗೆ ಇವರು ಚನ್ನಾಗಿ ಗೊತ್ತು", ಎಂದು ಲಕ್ಷ್ಮಿ ಅರೆ ಮಾತು, ಅರೆ ನಗು ಹೊಂದಿಸಿ ಹೇಳಿದಳು. ಆ ಸಮಯ ಪ್ರಥಮ ಬಾರಿ ಎಂಬಂತೆ ಅನಂತ ಲಕ್ಷ್ಮಿಯನ್ನು ಕಂಡ. ಅವಳ ತುಟಿಯಲ್ಲಿ ವಿದು ನಗುವಿತ್ತು. ಕಣ್ಣುಗಳು ಕನಸು ಕಾಣುವಂತಿದ್ದುವು. ಅಗಲವಾದ ಹಣೆಯ ಮೇಲೆ

ಸೂಕ್ಷ್ಮವಾದ ಕೂದಲುಗಳ ಹರಡಿಕೆ ಇತ್ತು. ಇಂತಹ ಕ್ಷಣಕ್ಕಾಗಿ ಅನಂತ ಅದೆಷ್ಟು ವರುಷಗಳಿಂದ ಕಾದಿದ್ದನೋ ಏನೋ.

"ಹೇಳಿ ಬಿಡು ಅನಂತಾ" ಎಂದ ಕೃಷ್ಣಪ್ಪ.

"ಏನೂ ಇಲ್ಲ. ಏನಾದರೂ ಇದ್ದರೆ ಇನ್ನೊಮ್ಮೆ ಹೇಳಿದರಾಯಿತು" ಎಂದು ಮುದುಕನ ಬೆಂಕಿಯ ಕೆಂಪು ಕಾಣುತ್ತಾ ನುಡಿದ.

ವಿಶೇಷ ಹೊತ್ತು ಕಳೆಯದೆ ಇಬ್ಬರೂ ಹೊರಬಿದ್ದರು. ಅನಂತನ ಮನದಲ್ಲಿ ಮೂಡಿದ್ದ ಹೆದರಿಕೆ ಅಂಗಳ ಹಾದು ಮಾರ್ಗ ತಲಪುವ ಸಮಯ ಕಳೆದು ಹೋಗಿತ್ತು.

"ನೀನು ಹಾಗೆಲ್ಲ ಅವಳಲ್ಲಿ ಹೇಳಬಾರದಿತ್ತು ಕಿಟ್ಟೂ" ಎಂದು ಲಕ್ಷ್ಮಿಯ ಮನೆಯಿಂದ ದೂರ ಬಂದ ಬಳಿಕ ಅನಂತ ಹೇಳಿದ. ಅದು ತನಕ ಇಬ್ಬರೂ ಮೌನವಾಗಿದ್ದರು.

"ಏನು ಹೇಳಿದೆ?"

"ಅವಳಿಗೆ ನಾನು ಅಪರಿಚಿತ. ಅಪರಿಚಯ ಇರುವ ವೇಳೆ ಒಮ್ಮಿಂದೊಮ್ಮೆ ಹೀಗೆ ಹೇಳಬಹುದೇ?"

"ನಿನ್ನ ವಾದದಲ್ಲಿ ಹುರುಳಿಲ್ಲ."

"ಏಕೆ?"

"ಅವಳಿಗೆ ನಿನ್ನ ಪರಿಚಯ ತುಂಬಾ ಇದೆ."

ಅನಂತನ ಕಾಲುಗಳು ನಿಂತುವು.

— ೩೨ —

ಬಹಳಷ್ಟು ದಿನಗಳಿಂದ—ಅದೇಕೆ—ಚಿಕ್ಕಂದಿನಿಂದ ಅನಂತ ತಾನು ಬಯಸಿದ್ದ ಲಕ್ಷ್ಮಿಯ ಸಾಮೀಪ್ಯತೆಯಲ್ಲಿ ಹಲವು ಕ್ಷಣಗಳನ್ನು ಕಳೆದ. ಅದರಲ್ಲಿ ಸೊಗಸು ಎಷ್ಟಿತ್ತು ಎಂದು ಹೇಳಲಾಗದು. ಸಮೀಪತೆಯೊಡನೆ ಹುಟ್ಟಿಕೊಳ್ಳುವ ಅವ್ಯಕ್ತ ಸಂಕೋಚ ಅವನನ್ನು ಪರಿಳಿಸಿತ್ತು. ಕೃಷ್ಣಪ್ಪ ಆತನಿಗೆ ತಾಗಿಕೊಂಡೇ ಮಾರ್ಗದಲ್ಲಿ ಮುಂದರಿಯುತಿದ್ದ.

'ನಿನ್ನ ಅಭಿಪ್ರಾಯವನ್ನು ಅವಳ ಮುಂದೆ ಇಡಬಹುದಿತ್ತಲ್ಲಾ. ಇಂದೇ ಯಾವುದಾದರು ತೀರ್ಮಾನಕ್ಕೆ ಬಂದು ಬಿಡಬಹುದಿತ್ತು," ಎಂದ

ಕೃಷ್ಣಪ್ಪ. ನಸು ಬೆಳಕಲ್ಲಿ ಲಕ್ಷ್ಮಿ ತನ್ನ ಮಗುವಿಗೆ ಹಾಲೂಡುತ್ತಾ ಕುಳಿತಿದ್ದ ಚಿತ್ರ ಅನಂತನ ಕಣ್ಣೆದುರು ತೆಳುವಾಗಿ ಬರುತಿತ್ತು. ಕೃಷ್ಣಪ್ಪ ತಾನು ಅಂದುದನ್ನು ಇನ್ನೊಮ್ಮೆ ಹೇಳಬೇಕಾಯಿತು.

"ನೀನು ವ್ಯಾವಹಾರಿಕ ಮನುಷ್ಯ ಕಿಟ್ಟೂ, ಅವಳ ಪರಿಚಯ ಅವಳ ದೃಷ್ಟಿಯಿಂದ ಇಂದೇ ಆದುದು. ಪರಿಚಯದ ಮೊದಲ ಮೆಟ್ಟಲಲ್ಲೇ ಸ್ವಾರ್ಥದ ಚಿತ್ರ ಕಣ್ಣೆದುರಿಗೆ ಇರುವುದು ಸಮನಾಗದು."

"ಇಂತಹ ಸಮಯದಲ್ಲಿ ನಿನ್ನ ತತ್ವ ಯಾವ ಉಪಯೋಗಕ್ಕೂ ಬೀಳದು. ನೇರವಾದ ಮಾತುಕತೆಗೆ ಹೆಚ್ಚಿನ ಬೆಲೆ ಇದೆ."

"ಆಕೆ ಹೆಂಗುಸು ಎಂಬುದನ್ನು ನಾವು ತಿಳಿದಿರಬೇಕು."

"ನೇರವಾದ ಮಾತುಕತೆಗೆ ಹೆಣ್ಣು ಗಂಡು ಎಂಬ ಭೇದವಿಲ್ಲ. ನಮ್ಮ ಕೆಲಸ ಆಗಬೇಕಿದ್ದರೆ, ನಾವು ದಾಕ್ಷಿಣ್ಯ ಮೂರ್ತಿಗಳಾಗಿದ್ದರೆ ಉಪಯೋಗವಿಲ್ಲ."

"ನಿನ್ನ ವಾದ ನನಗೆ ಹಿಡಿಸುತ್ತಿಲ್ಲ."

"ಇನ್ನಾದರೂ ನಿನಗೆ ಮನಶ್ಶಾಂತಿ ಸಿಗಬಹುದಲ್ಲವೇ?" ಎಂದು ಕೆಣಕುವ ದನಿಯಿಂದ ಕೇಳಿದ ಕೃಷ್ಣಪ್ಪ. ತಮ್ಮಿಬ್ಬರ ಪರಿಚಯ ಬೆಳೆದು ಬಂದ ಇದಿಷ್ಟು ಸುದೀರ್ಘ ಕಾಲಾವಧಿಯಲ್ಲಿಯೂ ಕೃಷ್ಣಪ್ಪ ತನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ತಿಳಿದಿಲ್ಲವಲ್ಲಾ—ಎಂಬ ಕೊರಗು ಅನಂತನಲ್ಲಿ ಆ ಕ್ಷಣ ಮೂಡಿತು.

ಅಂದಿನ ರಾತ್ರೆ ಅನಂತನಿಗೆ ನಿದ್ದೆ ಹತ್ತಲಿಲ್ಲ. ತಾನು ಬಹಳ ಹಿಂದಕ್ಕೆ ಕಂಡಿದ್ದ ಲಕ್ಷ್ಮಿ ಇಂದು ಅತಿಸಮೀಪಕ್ಕೆ ಬಂದಳಾದರೂ, ಇನ್ನೂ ಹೊಸಬಳಂತೆ ಕಾಣಿಸುವುದೇಕೆ? ಪ್ರಕೃತಿ ಯಾವ ಬಗೆಯ ಕಣ್ಣು ಮುಚ್ಚಾಲೆಯನ್ನು ತನ್ನೊಡನೆ ಆಡುತ್ತಿದೆ—ಎಂಬ ಕಲಸುಮೇಲೋಗರ ಆಲೋಚನೆಯು ತಲೆತುಂಬಿದ್ದುವು. ದೂರದಿಂದ ನರಿಗಳ ಕೂಗು ಕೇಳಿಸ ತೊಡಗಿತು. ಮನದ ಅಸಮಾಧಾನವನ್ನು ಹೇಗಾದರೂ ಹೊರಗೆಡಹಬೇಕೆಂಬ ಪ್ರಯತ್ನ ಒಂದೆಡೆ. ಅವಳಿಗೆಂದು ಅಂದು ಬರೆದಿದ್ದ ಪತ್ರ ಇರುತಿದ್ದರೆ ಇಂದೀಗ ಅದನ್ನು ಮುಂದರಿಸಬಹುದಿತ್ತು ಎಂಬ ಯೋಚನೆ ಇನ್ನೊಂದೆಡೆ. ಎದ್ದು ಕುಳಿತು ದೀಪ ಬೆಳಗಿದ. ಮರುದಿನ ಮನೆಯಲ್ಲಿ ಏನೋ ಚಿಕ್ಕ

ಸಮಾರಂಭ ಇದ್ದುದರಿಂದ ಆತನ ಅಕ್ಕ ಹಿಂಬಾಗಿಲ ಬಳಿ ಪಾತ್ರೆ ತೊಳೆಯುತಿದ್ದ ಸದ್ದು ಕೇಳಿಸುತಿತ್ತು.

ಮೇಜಿನ ಮೇಲೆ ಎಂದಿನಿಂದಲೋ ಅನುಪಯೋಗಿಯಾಗಿ ಬಿದ್ದಿದ್ದ ಬಣ್ಣದ ತಟ್ಟೆಯನ್ನು ಮೇಲೆತ್ತಿಕಂಡ. ಬಳಿಕ ಹಲಿಗೆಗೆ ಒಂದು ತುಂಡು ಕೆನ್‌ವಾಸ್ ಹಚ್ಚಿ, ತಾನು ಅಂದು ನಸು ಕತ್ತಲಲ್ಲಿ ಕಂಡಿದ್ದ ಲಕ್ಷ್ಮಿಯ ಚಿತ್ರದ ರೇಖೆಗೆ ತೊಡಗಿದ.

‘‘ಇನ್ನೂ ಮಲಗಲಿಲ್ಲವೇ ಅನಂತಾ?’’ ಎಂದು ಅವನಕ್ಕ ಬಂದು ಕೇಳಿದಾಗಲೂ ಅನಂತನ ಬೆರಳುಗಳು ಓಡುತಿದ್ದುವು. ಈ ಚಿತ್ರವನ್ನು ತಾನು ನಿಶ್ಚಯವಾಗಿ ಪ್ರದರ್ಶನಕ್ಕೆ ಕಳುಹಿಸಬೇಕು—ಇದರಿಂದ ತನ್ನ ರೇಖಾ-ವರ್ಣಗಳ ವೈಖರಿಯ ಪರಿಚಯ ಕಲಾ ಪ್ರೇಮಿಗಳಿಗೆ ಸ್ವಲ್ಪವಾದರೂ ಆದೀತು—ಎಂದು ಕೊಂಡಿದ್ದ.

‘‘ಇಲ್ಲಕ್ಕಾ, ಈಗ ಮಲಗುತ್ತೇನೆ.”

‘‘ಈಗ ನೆನಪಾಯಿತು ನೋಡು. ಕನ್ನಡ ಪಂಡಿತರು ಸಂಜೆ ನಿನ್ನನ್ನು ಕೇಳಿಕೊಂಡು ಬಂದಿದ್ದರು. ಅವರಿಗೆ ನಿನ್ನಲ್ಲಿ ಏನೋ ಕೆಲಸ ವಿತ್ತಂತೆ,” ಎಂದಳು.

ಅನಂತನ ಮನಸ್ಸಿನ ಇದಿರು ಉಪಾಧ್ಯಾಯರ ಚಿತ್ರ ಬಂದು ನಿಂತಿತು. ಅವರು ಇಲ್ಲಿಗೇಕೆ ಬಂದರೋ—ಎಂದು ಯೋಚಿಸಿದ. ಆದರೆ ಉತ್ಸಾಹದ ಸಮಯವಾದುದರಿಂದ ಗಮನ ರೇಖೆಗಳ ಮೇಲೆ ಹರಿಯಿತು.

— ೩೩ —

ಉಪಾಧ್ಯಾಯರ ಮನೆಕಡೆಗೆ ಮುಂಜಾನೆ ಎದ್ದವನೆ ಹೊರಟ. ಅಕ್ಕನ ಒತ್ತಾಸೆಗೆಂದು ಒಂದಿಷ್ಟು ಗಂಜಿ ಉಣ್ಣಲು ಮರೆಯಲಿಲ್ಲ. ಬೆಳಗ್ಗಿನ ಸಮಯ ಅವರು ಮನೆಯಲ್ಲಿರುತ್ತಾರೆಂದು ಅವನಿಗೆ ಗೊತ್ತು.

ಸಾಮಾನ್ಯ ಉಪಾಧ್ಯಾಯರೊಬ್ಬರ ಕಷ್ಟಮಯ ಜೀವನವನ್ನು ವಸ್ತುವಾಗಿರಿಸಿಕೊಂಡು, ಕೆಲವು ವರುಷಗಳ ಹಿಂದೆ ತನ್ನ ಸಹಪಾಠಿಯೊಬ್ಬ ಚಿತ್ರಿಸಿದ್ದ ಚಿತ್ರದ ನೆನಪು ಬಂದಿತು. ಇಂತಹ ಉಪಾಧ್ಯಾ

ಯರ ಜೀವನ ಸುಗಮವಾಗಲಿದೆಯೇ? ಅಥವಾ ಚಿತ್ರದಲ್ಲಿ ಕಂಡು ತೃಪ್ತಿಪಡಬೇಕೇ?

ಕೆಲವು ತಿಂಗಳುಗಳ ಹಿಂದೆ ಬಿಡಿಸಿಕೊಟ್ಟಿದ್ದ ತಾಯಿಯ ಚಿತ್ರ ಉಪಾಧ್ಯಾಯರ ಮನೆಯ ಇದುರು ಬಾಗಿಲ ಮೇಲೆ ತೂಗುತಿತ್ತು. ಉಪಾಧ್ಯಾಯರು ಒಳಗಿನಿಂದ ಹೊರ ಬರುವ ತನಕ ತನ್ನ ಚಿತ್ರದ ವಿಮರ್ಶೆಯನ್ನು ತಾನೇ ಮಾಡಿದ.

"ನೀನಿವತ್ತು ಇಲ್ಲಿಗೆ ಬರುತ್ತಿ ಎಂದು ನನಗೆ ಗೊತ್ತಿತ್ತು. ಕುಳಿತುಕೋ", ಎಂದೆನ್ನುತ್ತಾ ಅಡ್ಡ ವಸ್ತ್ರದಿಂದ ಮೊಗ ಒರಸಿಕೊಂಡು ನುಡಿದರು. ಅನಂತ ಸಂಕೋಚದಿಂದ ಮೂಲೆಯಲ್ಲಿ ಕುಳಿತ, ಅವನನ್ನು ಒತ್ತಾಯಿಸುವುದು ಅವರಿಗೆ ಹಿತವೆನಿಸಲಿಲ್ಲ. ಹಾಗಾಗಿ ಮಾತು ಮುಂದರಿಸಿದರು.

"ನೋಡು, ಇದು ನಾನು ಹೇಳುವ ಕೆಲಸ ಎಂದು ನೀನು ದಾಕ್ಷಿಣ್ಯ ಮಾಡುವುದು ಬೇಡ. ಇಲ್ಲಿಯ ಪೇಟೆಯ ಸಾಹುಕಾರರು—ಕಾಮತರಿಗೆ ಅವರ ತಂದೆತಾಯಂದಿರ ಚಿತ್ರವನ್ನು ನೀನು ಬಿಡಿಸಿಕೊಡಬೇಕಂತೆ. ಆ ಪುಣ್ಯಾತ್ಮರು ನನ್ನನ್ನು ಹಿಡಿದಿದ್ದಾರೆ. ಹಣ ಹೆಚ್ಚು ಹೇಳಿದರೂ ಚಿಂತಿಲ್ಲ", ಎಂದರು. ಪೇಟೆಯ ಸಾಹುಕಾರರ ಪರೋಕ್ಷ ಪರಿಚಯ ಅನಂತನಿಗಿತ್ತು. ಒಂದು ದೃಷ್ಟಿಯಿಂದ ಉದಾರಿಗಳವರು. ತಾನು ಕಲಿಯುತಿದ್ದಾಗ ಹಲವಾರು ಬಾರಿ ಶಾಲಾ ಉತ್ಸವಗಳಿಗಾಗಿ ಅವರಲ್ಲಿ ಹಣ ಸಂಗ್ರಹಕ್ಕೆಂದು ತೆರಳಿದುದು ನೆನಪಿಗೆ ಬಂದಿತು.

"ನಾನು ಚಿತ್ರ ಬಿಡಿಸುತ್ತೇನೆಂದು ಅವರಿಗೆ ಹೇಗೆ ತಿಳಿಯಿತು ಸರ್?" ಎಂದ ಅನಂತ. ಈ ಪ್ರಶ್ನೆಯನ್ನು ಕೇಳುವ ಅಗತ್ಯವಿದ್ದಿರಲಿಲ್ಲ. ಮಾತು ಮುಂದರಿಸಬೇಕೆಂಬ ಚಪಲತೆ ಇತ್ತಷ್ಟೇ.

"ಆ ದಿನ ನಾನು ಈ ಚಿತ್ರಕ್ಕೆ ಚೌಕಟ್ಟು ಹಾಕಿ ತರುವಾಗ ದಾರಿಯಲ್ಲಿ ಸಿಕ್ಕಿದ್ದರು" ಎಂದು ತನ್ನ ತಾಯಿಯ ಚಿತ್ರ ತೋರಿಸಿ ನುಡಿದರು, ಮಾತು ಮುಂದರಿಸಿದರು "ಆ ಕೂಡಲೇ ನನ್ನಲ್ಲಿ ಈ ವಿಷಯ ಹೇಳಿದ್ದರು. ನನಗದು ಮರೆತೇ ಹೋಗಿತ್ತು."

ಮಾತನಾಡುತಿದ್ದಂತೆ ಪಂಡಿತರಿಗೆ ಏನು ಅನಿಸಿತೋ ಏನೋ. ನೆಟ್ಟಗೆ ಮೇಲಕ್ಕೆದ್ದು, ಸ್ಟೂಲನ್ನು ಆ ಚಿತ್ರದ ಕೆಳಗೆಳೆದು, ಚಿತ್ರದ ಗಾಜಿನ ಮೇಲೆ ಕುಳಿತಿದ್ದ ತೆಳುವಾದ ಧೂಳಿನ ಹಾಸನ್ನು ಒರಸಿದರು.

"ಬಹಳ ಚಂದವಾಗಿದೆಯಂತೆ ಇದು, ಎಲ್ಲರೂ ಹೇಳುತ್ತಾರೆ" ಎಂದೆನ್ನುತ್ತಾ ಅನಂತನ ಮೊಗ ನೋಡುತಿದ್ದಂತೆ ಸ್ಟೂಲಿನಿಂದ ಕೆಳಗಿಳಿದರು. ಹಿರಿಯರಿಂದ ಹೊಗಳಿಸಿಕೊಳ್ಳುವುದು ಅನಂತನಿಗೆ ಅಷ್ಟು ಹಿಡಿಸದು. ಅವನ ಕಿವಿ ಮೊಗಗಳು ಕೆಂಪಾದುವು.

"ನಿನಗೆ ಬೇರೇನಾದರೂ ಈಗ ಕೆಲಸವಿದೆಯೋ?"

"ಇಲ್ಲ ಸರ್."

"ಹಾಗಾದರೆ ಈಗಲೇ ಕಾಮತರಲ್ಲಿಗೆ ಹೋಗುವ."

"ಸರಿ."

ಉಪಾಧ್ಯಾಯರು ಒಳ ತೆರಳಿದರು. ಅನಂತ ಮೇಜಿನ ಮೇಲೆ ಬಿದ್ದಿದ್ದ ಹಲವು ಹರಕು ಪುಸ್ತಕಗಳನ್ನು ನೋಡತೊಡಗಿದ. ಎಲ್ಲವೂ ಕನ್ನಡದ ಹಳೆಯ ಕಾವ್ಯಗಳು. ಪುಸ್ತಕಗಳಲ್ಲಿಯೇ ನೂರಾರು ಟಿಪ್ಪಣಿಗಳನ್ನು ಪೆನ್ನು, ಪೆನ್ಸಿಲುಗಳಲ್ಲಿ ಗುರುತು ಹಾಕಿತ್ತು. ತನ್ನದು ಚಿತ್ರದ ಯೋಗವಾದರೆ ಇವರದು ಸಾಹಿತ್ಯದ ಮಹಾಯೋಗ ಎಂದೆನಿಸಿತು. ಹೊತ್ತೆಷ್ಟು ಕಳೆಯಿತೋ. ಉಪಾಧ್ಯಾಯರು ಶಾಲೆಯ ಉಡುಪು ಧರಿಸಿ ಹೊರಬಂದರು. ಕೈಯಲ್ಲಿ ತೀರಾ ಹಣ್ಣಾಗಿದ್ದ ಎರಡು ಬಾಳೆಯ ಹಣ್ಣುಗಳಿದ್ದುವು. ಅನಂತನಿಗೆ ಅವುಗಳನ್ನು ಕೊಟ್ಟು ತಿನ್ನಲು ಹೇಳಿದರು

ದಾರಿಯುದ್ದಕ್ಕೆ ಅವರೇ ಮಾತನಾಡುತಿದ್ದರು.

ಕಾಮತರ ದೊಡ್ಡ ಅಂಗಡಿ ಅದಾಗಲೇ ತೆರೆದಿತ್ತು. ಅವರದು ಸಾಧಾರಣವಾದ ದೇಹ. ಮೊಣಕಾಲಿನ ತನಕ ಒಂದು ಕಚ್ಚೆ—ಮೈ ಮೇಲೆ ಕೋರಾ ಬಟ್ಟೆಯಿಂದ ಹೊಲಿದಿರುವ ದೊಡ್ಡ ದೊಡ್ಡ ಕಿಸೆಗಳುಳ್ಳ ತುಂಡು ಅಂಗಿ. ಆಳುಗಳಿಗೆ ಹೇಳಿ ಕೆಲಸ ಮಾಡಿಸುತಿದ್ದರು. ಉಪಾಧ್ಯಾಯರನ್ನು ಕಂಡೊಡನೆ ಅವರ ಕೈಗಳು ಮೇಲೇರಿದುವು.

"ಬನ್ನಿ ಮಾಸ್ಟ್ರೇ, ತುಂಬಾ ಅಪರೂಪ" ಎಂದೆನ್ನುತ್ತಾ ಅನಂತ ನಿಗೂ ವಂದಿಸಿದರು. ಆತನಿಗೆ ಬೇಸರವಾಯಿತು. ಪ್ರತಿವಂದಿಸಿದ.

"ನೋಡಿ ಕಾಮತರೆ, ನೀವೊಂದು ವಿಚಾರ ನನ್ನಲ್ಲಿ ಹೇಳಿ ತಿಂಗಳು ಕಳೆದಿರಬಹುದು. ನನಗೆ ನಿನ್ನೆ ನೆನಪು ಬಂತು."

"ಯಾವ ವಿಚಾರ?"

"ನಿಮ್ಮ ತಂದೆತಾಯಿಯರ ಚಿತ್ರ ಬಿಡಿಸಬೇಕೆಂದು ಹೇಳಿದ್ದೀರಲ್ಲಾ."

ಕಾಮತರ ದೃಷ್ಟಿ ಅಲ್ಲೇ ನಿಂತಿದ್ದ ಅನಂತನ ಮೇಲೆ ಬಿತ್ತು. ಕೆಲಸದ ಆಳು ಶೀನನನ್ನು ಕೂಗಿ ಒಳಗಿಂದ ಕುರ್ಚಿ ತರಿಸಿದರು ಇಬ್ಬರೂ ಕುಳಿತರು.

"ಇವರೇ ಚಿತ್ರಗಾರರು?"

"ಹೌದು"

"ನೀವು ಮಾಸ್ಟ್ರಿಗೆ ಒಂದು ಚಿತ್ರ ಬಿಡಿಸಿಕೊಟ್ಟದ್ದೀರಲ್ಲಾ. ಬಹಳ ಚೆನ್ನಾಗಿತ್ತು. ನಮ್ಮ ಮನೆಯಲ್ಲಿಯೂ ಅಂತಹದೇ ಒಂದು ಚಿತ್ರ ಇರಬೇಕು ಎಂದು ಅನಿಸಿತು—ತಾಯಿಯವರದು ಮತ್ತು ತಂದೆಯವರದು"

"ನ್ಯಾಯವಾದುದೇ" ಎಂದ ಅನಂತ.

ಅನಂತನ ಮಾತಿನ ಅರ್ಥವಾಗಲಿಲ್ಲ ಕಾಮತರಿಗೆ. ಆದರೂ ಬೇಸರಿಸದೆ ಮುಂದರಿದರು.

"ಎರಡು ಚಿತ್ರಗಳಿಗೆ ಒಟ್ಟು ಎಷ್ಟಾದೀತು?"

"ನೋಡಿ ಸಾಹುಕಾರರೇ ನಾನೇನು ಹೆಚ್ಚು ನಿಮ್ಮಿಂದ ಹೀರುವುದಿಲ್ಲ. ಸಾಧಾರಣ ಒಂದೊಂದು ಚಿತ್ರಕ್ಕೆ ಐವತ್ತು ಹೇಳುತ್ತೇನೆ. ನೀವು ಎರಡಕ್ಕೂ ಒಟ್ಟಾಗಿ ಎಪ್ಪತ್ತೈದು ಕೊಡಿ."

"ಅಷ್ಟಾಗುತ್ತದೆಯೇ?"

"ಕಾಮತರೇ, ಚಿತ್ರದ ಸುದ್ದಿ ಎಂದರೆ ಹೀಗೆಯೇ. ಬೇಕಾದರೆ ನೀವಷ್ಟು ಕೊಡಬೇಕು. ನಿಮಗೆ ಎಪ್ಪತ್ತೈದು ಎಂದರೆ ಯಾವ ಮೂಲೆಗೆ? ಎಂದರು ಪಂಡಿತರು. ಅವರ ಹೊಗಳಿಕೆ ಕಾಮತರಿಗೆ

ಹಿತವೆನಿಸಿತು. ಆದರೆ ಎರಡು ಚಿತ್ರಗಳಿಗೆ—ಬರಿಯ ಎರಡು ಚಿತ್ರಗಳಿಗೆ ಎಪ್ಪತ್ತೈದು ತೆರುವುದು ಹಿತವಲ್ಲ ಎಂದು ಅವರ ವ್ಯಾಪಾರೀ ಮನೋವೃತ್ತಿ ಹೇಳಿತು.

"ಏನು ಕಡಿಮೆ ಮಾಡಲು ಸಾಧ್ಯವಿಲ್ಲವೇ?"

"ನಾನು ಎಲ್ಲರಿಂದ ತೆಗೆದುಕೊಳ್ಳುವುದು ಅಷ್ಟನ್ನೇ. ಅದರಲ್ಲಿ ಹೆಚ್ಚು ಕಡಿಮೆ ಎಂದಿಲ್ಲ", ಎಂದು ನುಡಿದ ಅನಂತ.

"ಸರಿಯಪ್ಪಾ, ನಮ್ಮ ಮಾರುವ ಸಾಮಾನುಗಳಿಗಾದರೂ ನಿಶ್ಚಿತ ಬೆಲೆ ಇರುತ್ತದೆ. ಈ ಚಿತ್ರ, ಸಂಗೀತ—ಇವುಗಳಿಗೆಲ್ಲ ಅವರವರು ಹೇಳಿದ್ದೇ ಬೆಲೆ," ಎಂದು ಉಪಾಧ್ಯಾಯರನ್ನು ಕಂಡು ನಗುತ್ತಾ ಹೇಳಿದರು ಕಾಮತರು. ಅವರ ಹಾಸ್ಯ ಅನಂತನಿಗೆ ಸವಿಯಾಗಿ ಕೇಳಿಸಿತು.

"ಎಡ್ವಾನ್ಸ್ ಏನಾದರೂ?"

"ಹೌದು, ಇಪ್ಪತ್ತೈದು ಕೊಟ್ಟರೆ ಉತ್ತಮ", ಎಂದ ಅನಂದ. ಉಪಾಧ್ಯಾಯರಿಗೆ ಅನಂತನ ದನಿಕಂಡು ಆಶ್ಚರ್ಯ. ತನ್ನಲ್ಲಿ ಮಾತನಾಡುವಾಗ ತೀರಾ ಮೃದುವಾಗಿರುತಿದ್ದ ಅನಂತ, ಇವರ ಬಳಿ ಮಾತನಾಡುವಾಗ ಹೀಗೇಕೆ ಏರಿಕೆಯಲ್ಲಿ ಇರುತ್ತಾನೆ ಎಂದು ಅವರಿಗೆ ತಿಳಿಯದಾಯಿತು.

"ಸರಿ ಯಾವಾಗ ಕೊಡುತ್ತೀರಿ?"

'ಒಂದು ತಿಂಗಳೊಳಗಾಗಿ.'

'ಅಷ್ಟು ದಿನ ಬೇಕೇ?'

'ಇವನ ವಿಚಾರವೆಲ್ಲ ನನಗೆ ಗೊತ್ತಿದೆ ಕಾಮತರೇ. ಇವನಿಗೆ ಮನಸ್ಸು ಬಂದರೆ ಮಾತ್ರ ಚಿತ್ರ ಬರೆಯುತ್ತಾನೆ. ಇಲ್ಲವಾದರೆ ಇಲ್ಲ, ಹಾಗಾಗಿ ಒಂದು ತಿಂಗಳು ಬೇಕಾದೀತು", ಎಂದು ಅವರಿಬ್ಬರ ಮಾತಿನ ನಡುವೆ ಪ್ರವೇಶಿಸಿದರು ಉಪಾಧ್ಯಾಯರು.

ಇಪ್ಪತ್ತೈದನ್ನು ಕಾಮತರು ಎಣಿಸಿಕೊಟ್ಟು, ಮನೆಯಿಂದ ತನ್ನ ತಂದೆತಾಯಿಂದಿರ ಫೋಟೋ ತರಿಸಲೆಂದು ಶೀನನನ್ನು ಕರೆದರು.

"ನಾನೂ ಮನೆಗೆ ಹೋಗುವಾತ. ನಿಮ್ಮ ಮನೆ ಗೊತ್ತು. ಶೀನನಿಗೆ ಇಲ್ಲಿ ಏನಾದರೂ ಕೆಲಸವಿರಬಹುದು, ನಿಮ್ಮಲ್ಲಿಂದ ನಾನೇ ತೆಗೆದು

ಕೊಳ್ಳುತ್ತೇನೆ" ಎಂದ ಅನಂತ ಕಾಮತರಿಗೆ ಸಂತೋಷವಾಯಿತು. ತಮ್ಮ ಅಗಲ ಮೊಗವನ್ನು ಇನ್ನೂ ಅಗಲಿಸಿಕೊಂಡು ನಕ್ಕರು.

"ನೋಡಿ, ಎದುರಿನ ಬಾಗಿಲಿನ ಮೇಲೆಯೇ ಇದೆ. ಮನೆಯಲ್ಲಿ ಯಾರ ಹತ್ತಿರ ಕೇಳಿದರೂ ಕೊಡುತ್ತಾರೆ'' ಎಂದರು ಕಾಮತರು.

ಪಂಡಿತರು ಮತ್ತು ಅನಂತ ಕೆಳಗಿಳಿದರು. ಅವರು ಶಾಲೆಗೆ ಹೋಗುವವರಿದ್ದರು. ಅಂಗಡಿಯಿಂದ ಸ್ವಲ್ಪ ದೂರ ಬಂದ ಬಳಿಕ ಅನಂತ ಬಹಳ ಸಂಕೋಚದಿಂದ ಐದು ರೂಪಾಯಿಯ ಎರಡು ನೋಟು ಗಳನ್ನು ಅವರತ್ತ ಚಾಚಿದ

"ಏನು? ಏನಿದು?''

"ಇರಲಿ ಸರ್, ಈ ವ್ಯಾಪಾರ ನಿಮ್ಮಿಂದ ಆದುದು. ಹಾಗಾಗಿ ಇದನ್ನು ತೆಗೆದುಕೊಳ್ಳಬೇಕು'' ಎಂದು ತಡವರಿಸುತ್ತಾ ಹೇಳಿದ ಅನಂತ.

"ನಾಚುಗೆ ಆಗುವುದಿಲ್ಲವೇ ನಿನಗೆ? ನನಗೆ ಹಣ ಕೊಡಲು ಬಂದಿದ್ದಾನೆ!'' ಎಂದವರು ಸಿಟ್ಟಿನಿಂದ ಹೇಳಿದರು. ಅನಂತನಿಗೆ ಬೇಸರ ವಾಯಿತು. ಎಂಜಲು ನುಂಗಿಕೊಂಡು ಇನ್ನೊಂದು ದಿನ ಸಿಗುತ್ತೇನೆಂದು ತೊದಲಿ ಬೇರೆ ದಾರಿ ಹಿಡಿದ.

ತಾನು ಮಾಡಿದುದು ತಪ್ಪೆನಿಸಿತು ಅವನಿಗೆ!

— ೩೪ —

ಕಾಮತರ ಮನೆ ದೊಡ್ಡದು. ಇತ್ತೀಚೆಗೆ ಕಟ್ಟಿಸಿದ್ದು. ಆಧು ನಿಕ ಸೌಲಭ್ಯಗಳಿದ್ದುವು. ಕೃಷ್ಣಪ್ಪ ಹಲಬಾರಿ ಅವರ ಮನೆಯನ್ನು ಅನಂತನಿಗೆ ತೋರಿ ತಾನೂ ಇನ್ನೊಂದು ನಾಲ್ಕು ವರ್ಷಗಳಲ್ಲಿ ಇಂತಹ ಮನೆ ಕಟ್ಟಿಸಲಿದ್ದೇನೆ ಎಂದು ಹೇಳುತಿದ್ದ.

ಅನಂತ ಕಾಮತರ ಮನೆಬಳಿ ಬಂದೊಡನೆ, ಸಾಕಿದ್ದ ನಾಯಿ ಬೊಗಳತೊಡಗಿತು. ಅದನ್ನು ಕಟ್ಟಿದ್ದಾರೆ ಎಂದು ತಿಳಿದು ಧೈರ್ಯದಿಂದ ಮುಂದರಿದ. ವಿಶಾಲವಾದ ಚಾವಡಿಯಲ್ಲಿ ಒಬ್ಬಳು ಕುಳಿತು ಹಾಡುತ್ತಾ ತಲೆ ಬಾಚುತಿದ್ದಳು. ತಾನು ಮನೆ ಮೆಟ್ಟಲು ಏರುವ ಸಮಯ ಹಾಡು ನಿಂತೀತು ಎಂದು ಎಣಿಸಿದ್ದ ಅನಂತನಿಗೆ, ಹಾಡು ನಿಲ್ಲದೆ

ಇದ್ದುದು ಆಶ್ಚರ್ಯವನ್ನು ಉಂಟುಮಾಡಿತು. ಹಾಡುತಿದ್ದಾಕೆಯನ್ನು ಕಣ್ಣು ಬಾಯಿ ಬಿಟ್ಟು ನೋಡಿದ. ಅಪರಿಚಿತ ಮೊಗ. ಅನಂತನನ್ನು ಕಂಡೂ ನಕ್ಕಳವಳು.

"ಕಾಮತರ ಮನೆ ಇದೇ ಅಲ್ಲವೇ?"

"ಆಗಿರಲೂ ಬಹುದು, ಅಲ್ಲದಿರಲೂ ಬಹುದು" ಎಂದು ತಲೆಯ ಮುಂಭಾಗವನ್ನು ಬಾಚುತ್ತಾ ತನ್ನ ತುಂಬಿದ ಎದೆಯನ್ನು ತೋರ ತೊಡಗಿದಳು. ಅತಂತನಿಗೆ ಅಲ್ಲಿಂದಲೇ ಹಿಂದೇಟು ಹೊಡೆಯೋಣ ಎಂದೆನಿಸಿತು. ತಿರುಗಿದ.

"ಹೌದು, ಇದೇ ಮನೆ. ಏನಾಗಬೇಕಿತ್ತು?" ತಲೆ ಬಾಚು ತಿದ್ದುದನ್ನು ನಿಲ್ಲಿಸಿ ಕೇಳಿದಳಾಕೆ. ಅನಂತನಲ್ಲಿ ಧೈರ್ಯ ತುಂಬಿತು. ತಿರುಗಿ ನಿಂತು ಹಿರಿಯ ಬಾಗಿಲಿನ ಮೇಲಿದ್ದ ಫೋಟೋವನ್ನು ಕಂಡ.

"ಆ ಫೋಟೋ ಕೊಡಲು ಕಾಮತರು ಹೇಳಿದ್ದಾರೆ."

"ಅದು ನನ್ನ ಅಜ್ಜಂದು."

"ನನಗೆ ಗೊತ್ತು."

"ಅಜ್ಜ ಅಜ್ಜಿ ಒಟ್ಟು ಕುಳಿತು ತೆಗೆಸಿದ್ದು."

"ಕಾಣುತ್ತದೆ"

ಅನಂತನಿಂದ ಅಷ್ಟು ಚುಟುಕಾದ ಕಹಿಯಾದ ಉತ್ತರವನ್ನು ಆಕೆ ನಿರೀಕ್ಷಿಸಿರಲಿಲ್ಲ. ಒಂದರೆಗಳಿಗೆ ಆವನನ್ನು ಕಣ್ತೆರೆದು ಕಂಡಳು.

'ನಿಮ್ಮನ್ನು ಎಲ್ಲಿಯೋ ನೋಡಿದ್ದೇನೆ.'

'ನನ್ನ ಹೆಸರೇ ಅದು. ಎಲ್ಲೆಡೆಯಲ್ಲೂ ಇದ್ದೇನೆ.'

ಅಷ್ಟರಲ್ಲಿ ಮತ್ತೊಬ್ಬರು ಹೊರ ಬಂದರು. ಅನಂತನನ್ನು ಕಂಡು ಒಳ ಬರಲು ಹೇಳಿದರು. ಮೊದಲಿದ್ದಾಕೆ ಹಿಂದಿನ ಹಾಡನ್ನೇ ಮುಂದ ರಿಸುತ್ತಾ ಒಳ ತೆರಳಿದಳು.

'ಏನಪ್ಪಾ'

ಅನಂತ ಪೂರ್ವದಂತೆ ಎಲ್ಲವನ್ನೂ ಹೇಳಿದ.

'ನೀನೆಯೋ? ಎಷ್ಟೋ ದಿನದಿಂದ ನೀನು ಬರುತ್ತೀ ಬರುತ್ತೀ ಎಂದವರು ಹೇಳುತಿದ್ದರು. ತೆಗೆದುಕೋ. ನನಗೆ ಎಟಕುವುದಿಲ್ಲ' ಎಂದು

ಕೊಂಕಣಿ ಹೆಂಗುಸರು ಮಾತನಾಡುವ ಕನ್ನಡದ ರಾಗ—ಒತ್ತುಗಳಲ್ಲಿ ಹೇಳಿದರು.

ಒಂದು ಕುರ್ಚಿಯನ್ನು ಈಚೆಗೆಳೆದು, ಅನಂತ ಫೋಟೋ ಕೆಳಗಿಳಿಸಿ ಗಾಜಿನ ಮೇಲೆ ಕುಳಿತಿದ್ದ ದೂಳನ್ನು ಉಸುರಿಂದ ಜಾಡಿಸಿದ. ಒಳಗಿನಿಂದ ಹಾಡು ಜೋರಾಗಿ ಕೇಳಿಸುತಿತ್ತು.

‚‚ಯಮುನ ಏನಾದರೂ ಹೇಳಿದಳೇ?' ಎಂದು ಒಳ ತೋರಿ ಕೇಳಿದರು. ಅನಂತ ಫೋಟೋವನ್ನು ಸೂಕ್ಷ್ಮವಾಗಿ ನೋಡುತಿದ್ದ. ಅವರ ಪ್ರಶ್ನೆ ಪುನರಾವರ್ತನೆ ಹೊಂದಿತು.

'ಯಾರದು?'

'ಈಗ ಇಲ್ಲಿ ಇದ್ದಳಲ್ಲಾ, ನನ್ನ ಮಗಳು ಅವಳು'

'ಇಲ್ಲ, ಏನೂ ಹೇಳಲಿಲ್ಲ. ಬರುತ್ತೇನಮ್ಮಾ,' ಎಂದು ಫೋಟೋ ಹಿಡಿದುಕೊಂಡು ಹೊರಟ. ಗೇಟಿನ ಬಳಿ ತೆರಳುವಾಗ ಯಮುನನ ಸ್ವರ ಹಿಂದಿನಿಂದ ಕೇಳಿಸಿತು.

'ಕಾಗದ ಬೇಕೇ?' ಎಂದು ಫೋಟೋ ತೋರಿಸಿ ನುಡಿದಳು. ಅನಂತ ಕಠಿಣವಾಗಿ ಅವಳನ್ನು ಕಂಡ.

'ಕಾಗದ ಬೇಕೇ ಎಂದು ನಾನು ಕೇಳಿದ್ದು, ಬೇಕಾದರೆ ಇಕೋ', ಎಂದು ವಾರ್ತಾ ಪತ್ರಿಕೆಯ ಒಂದು ಪುಟವನ್ನು ಅನಂತನ ಮೇಲೆ ಎಸೆದು ಹಿಂತಿರಳಿದಳು.

ಯಮುನನ ನಡತೆಯ ಅರ್ಥ ಅನಂತನಿಗಾಗಲಿಲ್ಲ.

— ೩ —

ತಾನು ಓದಿದ್ದ ಸಾಹಿತ್ಯ—ಪಡೆದಿದ್ದ ಅನುಭವ—ಕೇಳಿದ್ದ ಘಟನೆಗಳನ್ನೆಲ್ಲಾ ಕೆದಕಿ ನೋಡಿದ ಅನಂತ. ಆದರೆ ಯಮುನನ ನಡತೆಯಂತಹ ನಡತೆಯು ನೆನಪು ಬರಲಿಲ್ಲ. ಕೆಲವೊಮ್ಮೆ ಹಿಸ್ಟೀರಿಯಾ ಎಂಬ ಮಾತನ್ನು ಕೇಳಿದ್ದ. ಆ ದಿನ ಸಂಜೆ ಇವೇ ಯೋಚನೆಗಳನ್ನು ತಲೆಯಲ್ಲಿ ತುಂಬಿಕೊಂಡು ಕೃಷ್ಣಪ್ಪನಲ್ಲಿಗೆಂದು ನಡೆದ.

ಉಪಾಧ್ಯಾಯರಿಂದಾಗಿ ತನಗೆ ದೊರೆತ ಈ ಸಂಭಾವನೆಯಲ್ಲಿ

ಒಂದು ಪಾಲನ್ನು ಅವರಿಗೆ ಕೊಡುವುದು ಅನಿವಾರ್ಯವಾಗಿ ಕಂಡಿತು. ಕೃಷ್ಣಪ್ಪನ ಅಂಗಡಿಗೆ ತೆರಳುತಿದ್ದಾತ ಹಾದಿ ಬದಲಿಸಿ, ತರಕಾರಿಗಳ ಅಂಗಡಿಗೆ ಬಂದ. ಸಾಕಷ್ಟು ತರಕಾರಿ, ದ್ರಾಕ್ಷಿ, ಮುಸುಂಬಿಗಳನ್ನು ಕೊಂಡುಕೊಂಡ. ಊರಿನ ಪ್ರತಿಯೊಂದು ಮನೆಯ ಪರಿಚಯವಿರುವ ಕೂಲಿಯಾಳು ಬಾಬುನನ್ನು ಕರೆದು, ಅವನ ಬಳಿ ಬುಟ್ಟಿಯನ್ನು ಕೊಟ್ಟು, ಪಂಡಿತರಲ್ಲಿ ತಲುಪಿಸಿ ಬರಲು ಹೇಳಿದ. ಅಷ್ಟಕ್ಕೆನೇ ವೆಚ್ಚ ಐದುವರೆ ಯಾಯಿತು. ನೆಟ್ಟಗೆ ಮನೆಗೆ ಹಿಂತಿರುಗಿದ. ಉಪಾಧ್ಯಾಯರು ತೋರ ಬಹುದಾಗಿದ್ದ ಪ್ರತಿಕ್ರಿಯೆಯ ಕುರಿತಾಗಿ ಮನಸ್ಸು ಚಿಂತಿಸುತಿತ್ತು.

'ಈಗಷ್ಟೇ ಹೊರ ಹೋದಿ. ಇಷ್ಟು ಬೇಗ ಏನು ಹಿಂತಿರುಗಿದ್ದು?' ಎಂದು ಅಕ್ಕ ಕೇಳಿದಳು. ತನ್ನ ಕಿಸೆಯಲ್ಲಿ ಉಳಿದಿದ್ದ ಹಣದಿಂದ ಮೂರು ರೂಪಾಯಿಗಳನ್ನು ಬೇರೆಯಾಗಿಟ್ಟು, ಉಳಿದ ಹಣವನ್ನು ಅವಳ ಕೈಯ್ಯ ಲ್ಲಿಟ್ಟ.

"ಇದನ್ನೆಲ್ಲಾ ನನ್ನ ಬಳಿ ಕೊಡುವುದಕ್ಕಿಂತ ನೀನೇ ಇಟ್ಟು ಕೊಂಡಿರ ಬಾರದೇ ಅನಂತಾ?" ಎಂದಾಕೆ ಕೇಳಿದಳು.

'ನನಗೆ ಯಾರಿಗೂ ಹೊರೆಯಾಗಿರಲು ಮನಸ್ಸಿಲ್ಲ.'

ಓಹೋ, ನಿನ್ನನ್ನು ಈಗ ನಾವು ಹೊರೆ ಎಂದು ತಿಳಿಯುತಿದ್ದೇವೆ ಎಂದು ಯೋಚಿಸಿದ್ದಿಯಾ? ಏನೋ, ನಿನ್ನ ಮನಸ್ಸಿನ ಯೋಚನೆಗಳಿಗೆ ಸಾವಿರ ದಾರಿ.'

'ಅಂತಹ ಸಾವಿರ ದಾರಿ ಇದ್ದುದರಿಂದಲೇ ಬದುಕಿದ್ದೇನೆ ಅಕ್ಕಾ, ಇಲ್ಲವಾದರೆ ಇಷ್ಟರಲ್ಲಿ ಸ್ವರ್ಗದಲ್ಲಿದ್ದು ನರ್ತನ ನೋಡುತಿದ್ದೆ.'

'ಸಂಜೆ ಹೊತ್ತಿಗೆ ಹಾಗೆಲ್ಲಾ ಹೇಳಬಾರದು.'

'ಸಂಜೆ ಹೇಳಿದರೆ ಸಂಜೆ ಎಂದಾಯಿತು. ಬೆಳಗ್ಗೆ ಹೇಳಿದರೆ ಬೆಳಗ್ಗೆ ಎಂದಾಯಿತು', ಎಂದು ಮೆಟ್ಟಲಿಂದಲೇ ಪುನಃ ತೊಡಗಿದ ತನ್ನ ತಿರುಗಾಟವನ್ನು. ತನ್ನನ್ನು ಉಪಾಧ್ಯಾಯರು ಹುಡುಕಿಕೊಂಡು ಬರಲಿ ದ್ದಾರೆ ಎಂದಾತನಿಗೆ ನಿಶ್ಚಯವಾಗಿಯೂ ಗೊತ್ತು. ಕೃಷ್ಣಪ್ಪನಲ್ಲಿ ಕುಳಿ ತರೆ ಅಲ್ಲಿಗೂ ಬರಲು ಸಾಕೆಂದೆಣಿಸಿ, ನೆಟ್ಟಗೆ ಬೇರೊಂದು ರಸ್ತೆ ಹಿಡಿದು ಮುಂದರಿಯ ತೊಡಗಿದ.

ಒಂದೆಡೆ ಲಕ್ಷ್ಮಿಯ ಚಿತ್ರ—ಒಂದೆಡೆ ಕಾಮತರ ಮಗಳು ಯಮುನನ ಚಿತ್ರ--ಒಂದೆಡೆ ಉಪಾಧ್ಯಾಯರ ಚಿತ್ರ. ಮೂರನ್ನೂ ಮನಸ್ಸಿನಲ್ಲಿ ಮೆಲುಕು ಹಾಕುತ್ತಾ ಕಾಲೆಳೆದುಕೊಂಡು ಹೋಗುತಿದ್ದ.

'ಇಷ್ಟು ಬೇಗನೇ ವೈರಾಗ್ಯ ಬಂದರೆ ಹೇಗೆ?' ಎಂದೆನ್ನುತ್ತಾ ಕೃಷ್ಣಪ್ಪ ಎದುರಲ್ಲಿ ಸೈಕಲಿನಿಂದ ಬಂದಿಳಿದ. ಅನಂತ ಕೃಷ್ಣಪ್ಪನನ್ನು ನಿರೀಕ್ಷಿಸಿರಲಿಲ್ಲ.

'ಈ ಕಡೆ ಎಲ್ಲಿಗೆ ಹೋಗಿತ್ತು ಧನಿಯರ ಸವಾರಿ?'

'ನೀನು ಚಿತ್ರಗಾರ ಆಗಿದ್ದುದು ಮಾತ್ರ ಸಾಕು, ಇನ್ನು ಕವಿಯಾಗಲು, ನಾಟಕಕಾರನಾಗಲು ಹೋಗಬೇಡ', ಎಂದ ಕೃಷ್ಣಪ್ಪ. ಅನಂತ ಹೊರಟುದುದು ಬೇರೆಡೆಗೆ, ಬಂದು ತಲುಪಿದುದು ಕೃಷ್ಣಪ್ಪನ ಅಂಗಡಿಗೆ.

'ನಾನಿವತ್ತು ನಿನ್ನ ಅಂಗಡಿಗೆ ಬರುವುದಿಲ್ಲ ಎಂದಿದ್ದೆ', ಎಂದು ಪೂರ್ವ ಪೀಠಿಕೆಯನ್ನು ಹಾಕಿ, ಅಂದು ಬೆಳಗ್ಗಿನ ಕಥೆಯನ್ನೆಲ್ಲಾ ಕೃಷ್ಣಪ್ಪನಲ್ಲಿ ಹೇಳಿದ. ಯಮುನನ ವಿಚಾರವೂ ಬಾರದಿರಲಿಲ್ಲ.

'ಅವಳು ಹಾಗೇಕೆ ಮಾಡುತ್ತಾಳೆ? ಹಾಗೇಕೆ ನೋಡುತ್ತಾಳೆ ಎಂದು ನನಗೆ ತಿಳಿಯಲಿಲ್ಲ ಕಿಟ್ಟೂ. ಭೂತ ಬಡಿದವರಂತೆ ನೋಡುವುದು—ಎಂಬ ಮಾತಿದೆಯಲ್ಲಾ—ಹಾಗೆ ನೋಡುತಿದ್ದಳು.'

'ಹುಡುಗಿಯರಿಗೆ ಪ್ರಾಯ ತುಂಬಿದಾಗ ಮದುವೆ ಮಾಡಿ ಕೊಡದಿದ್ದರೆ ಹಾಗೆಯೇ', ಎಂದು ತುಂಬಾ ತಿಳಿದವನಂತೆ ಕೃಷ್ಣಪ್ಪ ಹೇಳಿದ.

"ಎಂದರೆ?"

"ನೀನು ಚಿತ್ರಗಾರ ಎಂಬ ದೊಡ್ಡ ಹೆಮ್ಮೆಯಿಂದ ಇರುತ್ತೀ. ಇಷ್ಟು ದೊಡ್ಡ ಚಿತ್ರಗಾರನಿಗೆ ಇಷ್ಟು ಚಿಕ್ಕ ವಿಷಯ ತಿಳಿದಿಲ್ಲವೇ?"

ಅನಂತನಿಗೆ ನೋವಾಯಿತು. ಕೃಷ್ಣಪ್ಪ ಹಿಂದಿನ ದಿನ ಲಕ್ಷ್ಮಿಯ ಮನೆಯಲ್ಲಿ ನಡೆದ ಘಟನೆಗಳನ್ನು ಎಣಿಸಿ, ತನ್ನನ್ನು ಮೂದಲಿಸುತಿದ್ದಾನೆ ಎಂದು ತಿಳಿಯಿತು. ಮಾತನಾಡದೆ ಅವನ ಜೊತೆ ಸೇರಿಕೊಂಡು ಅಂಗಡಿ ತಲುಪಿದ. ಸಂಜೆ ಹೊತ್ತಿನ ವ್ಯಾಪಾರ ಅಲ್ಲಿ ಬಿರುಸಿಂದ ನಡೆಯುತಿತ್ತು.

ಅನಂತನ ಎಣಿಕೆಯಂತೆ ಆಯಿತು.

ಉಪಾಧ್ಯಾಯರು ಬಂದರು. ಕೃಷ್ಣಪ್ಪ ಅವರನ್ನು ಆದರಿಸಿದ. ಅನಂತನನ್ನು ಈಗ ಕಳುಹಿಸುತ್ತೇನೆಂದು ನುಡಿದು, ಮೈದಾನಿನ ಕಡೆಗೆ ಕರೆದ್ಯೊದರು. ಕೃಷ್ಣಪ್ಪನಿಗೆ ವಿಷಯದ ಅರಿವಾಯಿತು. ಅನಂತನನ್ನು ಕಂಡು ನಕ್ಕು ಬಿಟ್ಟ.

ದಾರಿಯಲ್ಲಿ ಇಬ್ಬರೂ ಮೌನಿಗಳಾಗಿದ್ದರು. ಮೈದಾನಿನ ಒಂದು ಮೂಲೆ ಸೇರಿದೊಡನೆ ಪಂಡಿತರು ಮಾತನಾಡ ತೊಡಗಿದರು.

“ನೋಡು ಅನಂತಾ, ನನಗೆ ಸಿಕ್ಕುವ ಸಂಬಳ ನಮ್ಮ ವೆಚ್ಚಕ್ಕೆ ಸಾಲುವುದಿಲ್ಲ ನಿಜ. ಆದರೆ ನಮ್ಮ ಜೀವನ ಆ ವೆಚ್ಚಕ್ಕೆ ಹೊಂದಿಕೊಂಡಿದೆ. ಹಾಗಾಗಿ ಈಗ ಹೆಚ್ಚು ಬೇಕೆನಿಸುವುದಿಲ್ಲ. ಕಡಿಮೆ ಎಂದು ಯಾವುದೂ ಕಾಣಿಸುವುದಿಲ್ಲ. ನೀನು ತರಕಾರಿ, ಹಣ್ಣು ಕಳುಹಿಸಿದ್ದು ನನಗೆ ನೋವು ಮಾಡಲೆಂದೇ?”

“ಅಲ್ಲ ಸರ್, ನಿಜವಾಗಿಯೂ ಅಲ್ಲ.”

“ನಾಲ್ಕು ದಿನ ನೀನು ಕಳುಹಿಸಿಕೊಟ್ಟಿರುವ ಹಸರು ಪದಾರ್ಥ ತಿಂದೆವು ಎನ್ನು. ಬಳಿಕ ನಮ್ಮ ಈಗಿನ ಬಾಯಿರುಚಿ ಕೆಟ್ಟು, ಇದೇ ಬಗೆಯ ಪಲ್ಯಗಳ ಕಡೆಗೆ ಮನಸ್ಸು ಹರಿದರೆ ಹೇಗೆ? ಅದೂ ಮನೆಯಲ್ಲಿ ಕೆಲವು ಚಿಕ್ಕ ಮಕ್ಕಳಿದ್ದಾರೆ. ಅವರಿಗೆ ಇದೊಂದು ದಿನ ಮಾತ್ರ ದ್ರಾಕ್ಷೆ ಕೊಟ್ಟರೆ ಸಾಕೇ? ನಾಳೆಯೂ ತಮಗೆ ದ್ರಾಕ್ಷೆ ಬೇಕೆಂದು ಕೇಳಿದರೆ, ನಾನು ಎಲ್ಲಿಂದ ತಂದು ಕೊಡಲು ಸಾಧ್ಯ?”

ಉಪಾಧ್ಯಾಯರ ವಾದ ಹೌದೆನಿಸಿತು ಅನಂತನಿಗೆ.

“ನೋಡು ಅನಂತಾ, ನೀನಿನ್ನೂ ಉಪಾಧ್ಯಾಯರ ಮನಸ್ಸಿನ ಅರ್ಥ ಮಾಡಿಕೊಂಡಿಲ್ಲ. ಅವರಿಗೆ ತಮ್ಮ ವಿದ್ಯಾರ್ಥಿಗಳು ಉತ್ತಮರಾದರೆ, ಹೆಸರುಗಳಿಸುವುದನ್ನು ಕಂಡರೆ ಆನಂದ. ಅದರಲ್ಲಿಯೇ ತೃಪ್ತಿ. ಅವರು ವಿದ್ಯಾರ್ಥಿಗಳ ಹಣವನ್ನು ಆಶಿಸುವುದಿಲ್ಲ. ಉಪಕಾರ ಸ್ಮರಣೆ ಬಯಸುವುದಿಲ್ಲ, ತಿಳಿಯಿತೇ?”

“ತಿಳಿಯಿತು ಸರ್.”

"ಇನ್ನು ಮುಂದೆ ಹೀಗೆಲ್ಲಾ ಮಾಡಬಾರದಪ್ಪಾ" ಎಂದು ಆ ವಿಷಯವನ್ನು ಅಲ್ಲಿಯೇ ನಿಲ್ಲಿಸಿಬಿಟ್ಟು, ಅವನ ಆರೋಗ್ಯದ ವಿಚಾರ ಉಪನ್ಯಾಸ ಕೊಡಲು ತೊಡಗಿದರು. ತನ್ನ ಆರೋಗ್ಯದ ದುರ್ಬಲತೆಯ ಸ್ಪಷ್ಟ ಪರಿಚಯವಿದ್ದ ಅನಂತನಿಗೆ ಅವರ ಮಾತು ಪುನರಾವರ್ತನೆಯಾಗಿ ತೋರಿತಷ್ಟೇ.

"ನಿನ್ನ ಅಕ್ಕ ನಿನಗಾಗಿ ಎಷ್ಟು ಬೇಸರಿಸುತ್ತಾಳೆ ಗೊತ್ತೇ? ಅದೆಲ್ಲಾ ನಿನಗೆ ತಿಳಿಯುವುದಿಲ್ಲ. ನಿನಗೆ ನಿನ್ನದೇ ಆದ ಪ್ರಪಂಚ. ಹೀಗೆಲ್ಲಾ ನಡೆಯಬಾರದು."

ಅನಂತ ಹೂಂ ಗುಟ್ಟುತ್ತಲೇ ಇದ್ದ.

ಇಬ್ಬರೂ ಮೇಲಕ್ಕೆದ್ದು ಹೊರಟರು. ಕೃಷ್ಣಪ್ಪನ ಅಂಗಡಿಯ ತನಕ ಉಪಾಧ್ಯಾಯರ ಧರ್ಮಬೋಧೆ ನಡೆಯುತಿತ್ತು. ಬಳಿಕ ಅವರು ಮುಂದರಿದರು.

ಕೃಷ್ಣಪ್ಪ ಅನಂತನನ್ನು ಗೇಲಿ ಮಾಡಿದ.

— ೩೬ —

ಹೊಸ ಹೊಸ ವಿಷಯಗಳು ತನ್ನೆದುರಿಗೆ ಬರುತಿದ್ದುದು ಅನಂತನಿಗೆ ಹಿತವಾಗಿತ್ತು. ಆದರೆ ಒಂದು ಘಟನೆಯನ್ನು ವಿಮರ್ಶಿಸಿ ನೋಡುವಲ್ಲಿ ಇನ್ನೊಂದು ಘಟನೆ ಜರಗುತಿದ್ದುದು ಆತನಿಗೆ ಬೇಸರಿಕೆಯದಾಗಿತ್ತು. ಜಗತ್ತಿನಲ್ಲಿ ನಡೆಯುವ ಘಟನೆಗಳಿಗೆ ಪ್ರಚಂಡ ವೇಗವಿದೆ ಎಂದವ ತಿಳಿಯಲು ಸಿದ್ಧನಿರಲಿಲ್ಲ.

ಮುಂದಿನ ನಾಲ್ಕಾರು ದಿನಗಳು ಕೋಶಾವಸ್ಥೆಯಲ್ಲಿ ಕಳೆದುವು. ಕೃಷ್ಣಪ್ಪನೂ ಅವನೆಡೆಗೆ ಮೊಗಹಾಯಿಸಲಿಲ್ಲ. ಐದನೆಯ ದಿನದಲ್ಲಿ ಕಾಮತರ ತಾಯಿಯ ಚಿತ್ರದ ಕೆಲಸ ಸಾಧಾರಣ ಮುಗಿದಿತ್ತು. ಸರಿ. ಅದನ್ನು ಅಲ್ಲಿಯೇ ಬದಿಗಿರಿಸಿ, ಅವರ ತಂದೆಯ ಚಿತ್ರಣಕ್ಕೆ ತೊಡಗಬೇಕೆಂದು ನಿಶ್ಚಯಿಸಿದ.

ಸಂಜೆ ಕೃಷ್ಣಪ್ಪನಲ್ಲಿ ತೆರಳುತಿದ್ದಾಗ ಲಕ್ಷ್ಮಿ ಸಿಕ್ಕಿದಳು. ಎದೆ ಹೊಡೆತ ಪ್ರಾರಂಭವಾಯಿತು. ಆಕೆ ಮಾತಿಗೆ ತೊಡಗಿದಳು. ಆತ ಹಿಂದುಮುಂದು ಕಂಡ.

"ಬಡವರ ನೆನಪು ನಿಮಗೆ ಮರೆತು ಹೋಗುವುದು ಬೇಗ ಎಂದು ಕಾಣಿಸುತ್ತದೆ" ಎಂದು ಅವನ ಕಣ್ಣುಗಳನ್ನೇ ನೋಡುತ್ತಾ ನುಡಿದಳು. ಅವಳ ದೃಷ್ಟಿಯಲ್ಲಿ ನಗು ನೋವು, ತಾತ್ಸಾರ ಉತ್ಸಾಹಗಳ ಮಿಲನ ಕಂಡ ಅನಂತ.

"ಬಡವರಿಗೆ ಬಡವರ ನೆನಪು ಮರೆಯುವುದಿಲ್ಲ."

"ಹಾಗಾದರೆ ಮನೆಯ ಕಡೆ ಏನು ಬರಲಿಲ್ಲ?"

"ಬೇರೆ ಕೆಲಸವಿತ್ತು."

"ದೊಡ್ಡವರ ಮಾತಿದು. ಇರಲಿ. ಈಗ ಬರಬಹುದಲ್ಲಾ!

"ಕತ್ತಲಾಯಿತು."

"ನನ್ನ ಚಿತ್ರ ಬಿಡಿಸಬೇಕೆಂದಿರುವವರಿಗೆ ಕತ್ತಲಾದರೇನು? ಬೆಳಕಿದ್ದರೇನು?" ಎಂದು ವ್ಯಂಗ್ಯವಾಗಿ ಹೇಳಿದಳು. ಅನಂತನಿಗೆ ಸಹಿಸಲಾಗಲಿಲ್ಲ ಮೊದಲೇ ಮನಸ್ಸಿನಲ್ಲಿ ಕೊರೆಯುತಿದ್ದ ವಿಚಾರಗಳ ಭಾರವಿತ್ತು. ಮೇಲಾಗಿ ಈ ಮಾತಿನ ಒತ್ತಡ.

"ನೀವು ತಿಳಿದವರು, ಒಂದು ಮಗುವಿನ ತಾಯಿ, ಹೀಗೆ ಹೇಳಬಾರದು" ಎಂದ ಅನಂತ ಆದಷ್ಟು ಮೆತ್ತಗೆ. ಲಕ್ಷ್ಮಿಗೆ ಅನಂತನ ಮಾತಿನಲ್ಲಿ ಚುಚ್ಚು ಕಾಣಿಸಿತು.ಅವಳ ಎಣಿಕೆಯನ್ನು ಮೀರಿ ಹೋಗಿತ್ತು ಅವನ ಉತ್ತರದ ಕಾವು.

"ನಿಮಗೆ ಬೇಸರವಾಯಿತೋ ಏನೋ. ನಾನು ಯಾವಾಗಲೂ ನೇರವಾಗಿ ಮಾತನಾಡುವ ವ್ಯಕ್ತಿ. ಬೇಸರವಾದರೆ ಕ್ಷಮಿಸಿ" ಎಂದ ಅನಂತ.

"ನಮ್ಮಲ್ಲಿಗೆ ಈಗ ಬರುತ್ತೀರೋ?"

"ಏಕೆ?"

"ನಿಮ್ಮೊಡನೆ ಸ್ವಲ್ಪ ಮಾತನಾಡಬೇಕಿತ್ತು."

"ಇಲ್ಲೇ ಮಾತನಾಡಬಹುದಲ್ಲಾ."

"ಅದಷ್ಟು ಸರಿಯಾಗದು. ನಾನು ಮುಂದು ಹೋಗುತ್ತೇನೆ" ಎಂದು ಒಂದು ರೀತಿಯ ಗದರಿಕೆಯ ದನಿಯಲ್ಲಿ ಆಜ್ಞೆಕೊಟ್ಟು ಮುಂದರಿದಳು. ಅನಂತ ಮನೆಗೆ ಹಿಂತಿರುಗಿ, ಮೇಜಿನ ಮೇಲಿದ್ದ ರೂಪಾಯಿ

ಗಳನ್ನು ಎತ್ತಿಕೊಂಡು, ಪೇಟೆಯಲ್ಲಿ ಒಂದಿಷ್ಟು ಬಿಸ್ಕುಟುಗಳನ್ನು ಪಡೆದು, ಲಕ್ಷ್ಮಿಯಲ್ಲಿಗೆ ತೆರಳಿದ.

— ೩೭ —

ಅವಳ ತಂದೆಯು ಕೆಮ್ಮು ಕೇಳಿಸಲಿಲ್ಲ. ಮನೆಯೊಳಗೆ ಚಿಕ್ಕ ಬೆಳಕು ಉರಿಯುತಿತ್ತು. ಕೆಲವು ದಿನಗಳ ಹಿಂದೆ ಕೃಷ್ಣಪ್ಪನೊಡನೆ ಬಂದ ನೆನಪು ಕುಟುಕತೊಡಗಿತು. ಆತ ಮೆಟ್ಟಲೇರುವ ಸಮಯ ಲಕ್ಷ್ಮಿ ಹೊರಬಂದಳು.

"ನೀವು ಬರುತ್ತೀರೆಂದು ನನಗೆ ಖಂಡಿತವಿರಲಿಲ್ಲ. ಎಷ್ಟೆಂದರೂ ನೇರವಾಗಿ ಮಾತನಾಡುವವರು. ನಮ್ಮಂತಹ ಸುತ್ತುಸುತ್ತಾಗಿ ಮಾತ ನಾಡುವವರನ್ನು ಕಂಡರೆ ನಿಮಗೆ ಜಿಗುಪ್ಸೆ."

"ಇದನ್ನು ಹೇಳಲೆಂದು ನನ್ನನ್ನು ಇಲ್ಲಿಗೆ ಕರೆದುದೋ?"

"ಕುಳಿತಿರಿ, ಇನ್ನೂ ಇದೆ."

"ಮಗು ಎಲ್ಲಿದೆ?"

"ತಂದೆಯವರೊಡನೆ ಸಿನೇಮಕ್ಕೆ ಹೋಗಿದ್ದಾನೆ."

ಮನೆಯಲ್ಲಿ ತಮ್ಮಿಬ್ಬರ ಹೊರತಾಗಿ ಇನ್ನೊಂದು ನರಹುಳುವೂ ಇಲ್ಲ ಎಂದು ತಿಳಿಯಿತು ಅನಂತನಿಗೆ. ಕೈಯಲ್ಲಿದ್ದ ಕಟ್ಟನ್ನು ಮೇಜಿನ ಮೇಲಿಟ್ಟು, ಮೇಲಕ್ಕೆದ್ದ.

"ಇನ್ನೊಮ್ಮೆ ಬರುತ್ತೇನೆ", ಎಂದ.

"ಸ್ವಲ್ಪನಿಲ್ಲಿ. ನಿಮಗೆ ನನ್ನ ಚಿತ್ರ ಬಿಡಿಸಬೇಕೆಂದು ಅಷ್ಟು ಮನ ಸ್ಸಿದೆಯೇ? ನಾನಷ್ಟು ಚಂದವಾಗಿರುವೆನೇ?"

"ನನಗೆಯೇ ತಿಳಿದಿಲ್ಲ."

"ಸಂಕೋಚ ಮಾಡಬೇಡಿ. ನೀವು—ಗಂಡುಸರ ಜಾತಿಯೇ ಹೀಗೆ. ಬೇಕೆಂಬಲ್ಲಿ ನಿಮಗೆ ಸಂಕೋಚವಿಲ್ಲ. ಬೇಡವಾದಲ್ಲಿ ಸಂಕೋಚ

ಆಕೆಯ ಟೀಕೆ ಕಟುವಾಗಿತ್ತು. ಅನಂತ ಅದು ತನಕ ಸಹಿಸಿ ಕೊಂಡೇ ಇದ್ದ. ಲಕ್ಷ್ಮಿ ಮೆಲ್ಲನೆ ಆತನಿಗೆ ತಿಳಿಯುವಂತೆ ಆತನನ್ನು

ಸಮೀಪಿಸುತಿದ್ದಳು. ಅನಂತನಿಗೆ ಕಸಿವಿಸಿಯಾಯಿತು. ಆಕೆ ತೀರಾ ಸಮೀಪಕ್ಕೆ ಬಂದಳು.

“ನಾನು ಕ್ಷಯ ರೋಗಿ” ಎಂದ ಅನಂತ.

— ೩೮ —

“ಬಹಳ ಚಿಕ್ಕಂದಿನಿಂದ ನಿಮ್ಮನ್ನು ನೋಡಿ ಸಂತೋಷಿಸಿದ್ದೇನೆ. ನಾನೀಗ ಚಿತ್ರಗಾರನಾಗಿರುವುದು ನಿಮ್ಮ ಕಾರಣದಿಂದಲೋ ಏನೋ, ಅಂತೂ ಬಹಳ ವರುಷಗಳ ಆಸೆ—ನಿಮ್ಮ ಜೊತೆ ಮಾತನಾಡಬೇಕು, ಸಮೀಪದಲ್ಲಿ ನೋಡಬೇಕು—ಎಂಬುದು ತೀರಿತು. ಇರಲಿ. ನನಗೆ ಅದರಲ್ಲಿಯೇ ತೃಪ್ತಿ.”

ಲಕ್ಷ್ಮಿ ಅವನಿಂದ ಸ್ವಲ್ಪ ದೂರದಲ್ಲಿ ಅಸಹಾಯಕ ನೋಟ ಹಾಯಿಸಿ ಕುಳಿತಿದ್ದಳು, ಗೋಡೆಯ ಮೇಲಿನ ಚಿಕ್ಕ ದೀಪದ ಬೆಳಕು ಅವಳ ಮೇಲೆ ಚೆಲ್ಲಿ ಹೊಸ ದೃಶ್ಯ ಸಂಯೋಜನೆಯು ಹುಟ್ಟಿಕೊಂಡಿತ್ತು.

“ನೀವು ಇದೇ ರೀತಿ ಬೇಸರದಲ್ಲಿ ಇದ್ದರೆ ಹೇಗೆ? ಏನಾದರೂ ಪ್ರಯತ್ನಿಸಿ ಗುಣ ಹೊಂದಬಾರದೇ?”

“ಯಾರಿಗಾಗಿ—ಯಾವ ಸುಖಕ್ಕಾಗಿ?”

ಲಕ್ಷ್ಮಿ ಉತ್ತರಿಸಲಿಲ್ಲ. ಅನಂತ ಅವಳನ್ನು ಕಣ್ತುಂಬಾ ಕಂಡ. ಮನಸ್ಸಿನಲ್ಲಿ ಅವಳ ಚಿತ್ರದ ಸ್ಪಷ್ಟರೂಪ ಮೂಡಿತು. ತನ್ನನ್ನು ಅನಂತ ಕಾಣುತಿದ್ದಾನೆಂದು ಅವಳಿಗೆ ಅನಿಸಿತು. ಬೇಕು ಬೇಕೆಂದೇ ಅನುಕೂಲ ವಾದ ನಿಲುವಿನಲ್ಲಿ ಕುಳಿತು ಅವನ ನೋಟಕ್ಕೆ ಇಂಬು ಕೊಟ್ಟಳು.

ಮೌನದಲ್ಲಿ ಸ್ವಲ್ಪ ಹೊತ್ತು ಕಳೆಯಿತು.

‘ಇನ್ನು ನಾನು ಹೋಗುತ್ತೇನೆ.’

‘ನಿಮ್ಮನ್ನು ನಿಲ್ಲಿಸಲು ನನಗೆ ಸಾಧ್ಯವಿಲ್ಲ.’

‘ಹಾಗೆನ್ನಬೇಡಿ.’

‘ಎಂದರೆ ನನ್ನಿಂದ ನಿಮ್ಮನ್ನು ನಿಲ್ಲಿಸಲು ಸಾಧ್ಯವೇ?’

‘ಸಾಧ್ಯವಿಲ್ಲವಾಗುತಿದ್ದರೆ ನಾನೀಗ ಇಲ್ಲಿರುತಿದ್ದೆನೇ?’

ಲಕ್ಷ್ಮಿ ಶೃಂಗಾರಪೂರ್ವಕ ಎದ್ದು ನಿಂತಳು. ಅನಂತನೂ ಏಳುವ ಸನ್ನಾಹ ಮಾಡಿದ. ಅವಳ ಮುಡಿಯಲ್ಲಿ ಸಿಲುಕಿಕೊಂಡಿದ್ದ ನಾಲ್ಕು ಬಿಡಿ ಮಲ್ಲಿಗೆ ಹೂಗಳ ಸೌರಭ ಸೂಸಿ ಬಂತು.

'ನಿಮ್ಮ ಆರೈಕೆಯನ್ನು ಮನೆಯಲ್ಲಿ ಸರಿಯಾಗಿ ನೋಡುವುದಿಲ್ಲವೇ?'

'ನನ್ನ ಅಕ್ಕ—ನನಗೆ ತಾಯಿ.'

"ಅವರು ಹೇಳಿದಂತೆ ನೀವು ಕೇಳುವುದಿಲ್ಲವೇ?"

"ಏನೋ, ನನಗೆ ತಿಳಿದಿಲ್ಲ.

"ನಿಮಗೆ ಬೇಸರವಾದಾಗೆಲ್ಲ ಇಲ್ಲಿಗೆ ಬನ್ನಿ" ಎಂದು ಅವನ ಗಲ್ಲಕ್ಕೆ ತನ್ನ ಅಂಗೈ ತಗುಲಿಸಿ ಹೇಳಿದಳು ಲಕ್ಷ್ಮಿ. ಅನಂತನ ಕಾಲುಗಳು ಮೆಟ್ಟಿಲ ಕಡೆಗೆ ಹೊರಟವು. ಮೊಗ ಕೆಂಪಗಾಗಿತ್ತು. ಎಲ್ಲೋ ಹಾರಾಡುವಂತಹ ಅನುಭವ ಅವನದಾಗಿತ್ತು ಆಗ. ಮನೆ ಬೇಡವೇ ಬೇಡ— ಆ ಟರ್ಪೆಂಟಾಯಿನ್, ಲಿನ್‌ಸಿಡ್ ಓಯಿಲ್, ಬಣ್ಣಗಳ ವಾಸನೆಗೆ ಹೊರತಾಗಿ, ಮಲ್ಲಿಗೆ ಹೂವಿನ ಸೌರಭದೆಡೆ ಸೇರಿಕೊಂಡು ಬದುಕುವ ಮನಸ್ಸಾಯಿತು.

ಆಕೆ ಗಲ್ಲ ತಟ್ಟಿದ್ದಳು. ಆ ಸ್ಥಳವನ್ನು ಮುಟ್ಟಿಕಂಡ. ಅವಳ ಮನೆಗೆ ಎಂದಾದರಂದು ಬರಲು ಆಹ್ವಾನ ಕೊಟ್ಟಿದ್ದಳು. ಹಲವು ವರುಷಗಳ ಹಿಂದೆ ಜಾತ್ರೆಯ ಸಮಯ ಇದೇ ಲಕ್ಷ್ಮಿ ಕಣ್ಣನ್ನು ಅರೆ ಮುಚ್ಚಿ ದೇವರಿಗೆ ವಂದಿಸಿದ್ದಳು—ಕಂಗೊಳಿಸಿದ್ದಳು.

— ೩೯ —

ಮಂಕನಂತಾಗಿದ್ದ ಅನಂತ. ಇದರೆಡೆಯಲ್ಲಿ ಸಂಜೆಯ ಹೊತ್ತಿನ ಜ್ವರ ಅವನನ್ನು ಹಿಂಡಿಬಿಡುತಿತ್ತು. ಔಷಧಿ, ಆಹಾರಗಳ ಕುರಿತು ಎಷ್ಟು ಜಾಗ್ರತೆ ವಹಿಸಿದರೂ ಸಾಲದಾಗಿತ್ತು. ಕೆಲವೊಮ್ಮೆ ಅಕ್ಕ ಭಾವಂದಿರ ಮಾತುಗಳನ್ನು ಕೇಳಿದುದೆಂದಿತ್ತು. ತನ್ನ ಜೀವನಕ್ಕೆ ಇದಿಷ್ಟು ಮಂದಿಯ ಸಹಾನುಭೂತಿ ಇದೆ— ಆದರೂ ತನಗೆ ಗುಣವಾಗುವುದಿಲ್ಲ ಏಕೆ? ಎಂಬ ಪ್ರಶ್ನೆ ದಿನವೂ ಅವನ ಮನಸ್ಸನ್ನು ಕಾಡುತಿತ್ತು, ಹಿಂಡುತಿತ್ತು.

ಕೃಷ್ಣಪ್ಪನೊಡನೆ ಹಿಂದಿನಂತೆ ಬೆರೆಯುವುದು ಬೇಡವೆನಿಸ ಹತ್ತಿತು. ಕ್ಷಯ ಹಬ್ಬುವಂತಹದು, ತನ್ನ ನಿಕಟತೆಯಿಂದಾಗಿ ಕೃಷ್ಣಪ್ಪ ನಲ್ಲಿ ಅದು ತುಂಬಿಕೊಂಡರೆ ಎಂಬ ಹೆದರಿಕೆ. ಬೇರೆಯವರೊಡನೆ ಮಾತನಾಡುವಾಗ ಆದಷ್ಟು ದೂರವಾಗಿಯೇ ಇರತಿದ್ದ— ತಾನೊಬ್ಬನೇ ನೋವುಗೊಂಡರೆ ಸಾಕು ಎಂಬ ದೃಷ್ಟಿಯಿಂದ.

ಕಾಮತರ ತಂದೆತಾಯಂದಿರ ಚಿತ್ರರಚನೆಗೆ ತೊಡಗಿ ಹದಿನೈದು ದಿನಗಳಾಗಿದ್ದುವು. ಒಂದು ದಿನ ಸಂಜೆ— ನಾಲ್ಕು ಗಂಟೆಯ ಹೊತ್ತಿರ ಬಹುದು. ಕಾಮತರ ತಂದೆಯ ಅಪೂರ್ಣ ಚಿತ್ರವನ್ನು ಎದುರಿಟ್ಟು ಕೊಂಡು ಯೋಚಿಸುತಿದ್ದ. ತನ್ನ ತಂದೆಯವರ ರೂಪನ್ನು ಮನದಲ್ಲಿ ರೂಪಿಸಲು ಯತ್ನಿಸುತಿದ್ದ. ಅಕ್ಕ ಬಂದು ಯಾರೋ ಹುಡುಗಿ ಯೊಬ್ಬಳು ಕರೆಯುತಿದ್ದಾಳೆ ಎಂದು ಹೇಳಿದಳು. ಲಕ್ಷ್ಮಿ ಈ ಹೊತ್ತಿಗೆ ಇಲ್ಲಿಗೇಕೆ ಬಂದಳೆಂದುಕೊಂಡು, ಓಡಿ ಹೊರಬಂದ.

ಯಮುನ ಕುಳಿತಿದ್ದಳು.

ಅವಳನ್ನು ಕಂಡೊಡನೆ ಅನಂತನ ಮೊಗ ಸುಕ್ಕು ಕಟ್ಟಿದಂತಾ ಯಿತು. ಅಕ್ಕ ಅಲ್ಲೇ ನಿಂತಿದ್ದಳು. ಯಮುನ ಒಮ್ಮಿಂದೊಮ್ಮೆ ಬಾಯಿ ತುಂಬಾ ಮಾತನಾಡಲು ತೊಡಗಿದಳು. ಚಿತ್ರಗಳ ಕುರಿತಾಗಿ ಕೇಳಿದ ಪ್ರಶ್ನೆಗಳನ್ನೇ ಪುನಃ ಪುನಃ ಕೇಳಿದಳು.

“ಚಿತ್ರ ಇನ್ನೂ ಸಂಪೂರ್ಣ ಆಗಿಲ್ಲ. ಪೂರ್ಣ ಆದೊಡನೆ ನಾನೇ ತಂದುಕೊಡುತ್ತೇನೆ. ನೀವಿಷ್ಟು ಪ್ರಯಾಸ ಪಡಬೇಕಾಗಿಲ್ಲ” ಎಂದು ನಿರ್ವಿಕಾರವಾಗಿ ಅನಂತ ಹೇಳಿದ. ಯಮುನ ಅರಳಿದ ಕಣ್ಣುಗಳಿಂದ ಅನಂತನ ಅಕ್ಕನನ್ನು ಕಂಡಳು.

“ಇವರು ಯಾರು?”

“ನನ್ನ ಅಕ್ಕ.”

‘ಇವರ ಚಿತ್ರ ಬರೆದಿದ್ದಿರಾ?’

ಯಮುನನ ಪ್ರಶ್ನೆ ಅನಂತನನ್ನು ಮಾತ್ರವಲ್ಲದೆ ಅವನ ಅಕ್ಕ ನನ್ನೂ ಚಕಿತಗೊಳಿಸಿತು. ಹೆಂಗುಸಾಗಿದ್ದ ಆಕೆ ಅದಷ್ಟರಲ್ಲೇ ಯಮು ನನ ಅಂತರಂಗ ಹೊಕ್ಕು ವಿಷಯ ತಿಳಿದೂ ಆಗಿತ್ತು.

'ಬರೆಯುತ್ತೇನೆ ಅಂದಿದ್ದ. ನಾನೇ ಬೇಡ ಎಂದಿದ್ದೆ', ಎಂದಳು ಅನಂತನ ಅಕ್ಕ. ಯಮುನ ಗೋಡೆಯಲ್ಲಿ ತೂಗ ಹಾಕಿದ್ದ ಕೆಲವು ಚಿತ್ರಗಳನ್ನು ಕಂಡಳು. ಅವಳ ಹಣೆಯಲ್ಲಿ ಕುಂಕುಮ ಇದ್ದಿರಲಿಲ್ಲ. ಅನಂತನ ಅಕ್ಕ ಒಳ ತೆರಳಿ ಕುಂಕುಮವನ್ನು ತಂದಳು—ಕರಡಿಗೆಯನ್ನು ಯಮುನನತ್ತ ಚಾಚಿದಳು.

'ನನಗೆ ಕುಂಕುಮ ಹಾಕಿಕೊಳ್ಳುವ ಅಭ್ಯಾಸವಿಲ್ಲ. ಮನೆಯಲ್ಲಿ ಅಮ್ಮ ಬೈಯುತ್ತಾಳೆ. ಕುಂಕುಮ ಏಕೆ ಹಾಕಬೇಕು ಹೇಳಿ?' ಎಂದಳೇ ಹೊರತು ಕುಂಕುಮವನ್ನು ಸ್ವೀಕರಿಸಲಿಲ್ಲ.

'ಕುಂಕುಮ ಹಾಕದಿದ್ದರೆ ಹಣೆ ಬರಿದು ಕಾಣುತ್ತದೆ.'

'ಕುಂಕುಮ ಹಚ್ಚುವವರೇ ಹಚ್ಚಬೇಕು. ನಾವು ನಾವಾಗಿ ಹಚ್ಚಿಕೊಂಡರೆ ಏನು ಪ್ರಯೋಜನ?' ಎಂದು ಅನಂತನನ್ನು ಕಂಡು ನುಡಿದಳು. ಆವಳ ಮಾತಿನ ಅರ್ಥ ಅನಂತನಿಗೆ ಹೊಳೆಯಿತು. ಅವನ ಅಕ್ಕನಿಗೆ ನೋವೆನಿಸಿತು. ಒಳ ತೆರಳಿದಳು.

'ನನ್ನ ಚಿತ್ರ ಬರೆದು ಕೊಡುತ್ತೀರಾ?'

'ಯಾರಿಗೆ?'

'ನನಗೆಯೇ ಬೇಕು! ಎಷ್ಟು ದರ?'

'ನೂರು ರೂಪಾಯಿ ಆಗುತ್ತದೆ.'

'ಈ ಒಂದು ಚೈನು ಕೊಟ್ಟರೆ ಮಾಡಿ ಕೊಡುತ್ತೀರೋ?' ಎಂದು ತನ್ನ ಕುತ್ತಿಗೆಯಲ್ಲಿದ್ದ ಬಂಗಾರದ ಒಂದೆಳೆಯ ಸರತೋರಿ ನುಡಿದಳು, ವಿಷಯ ಗಹನವಾಗ ಹತ್ತಿತು ಎಂದು ಅನಂತನಿಗೆ ತಿಳಿಯಿತು. ಹಾಗಾಗಿ ಆವಳನ್ನು ಒಳ ಕರೆದ. ತನ್ನ ಕೋಣೆಗೆ ಆಕೆ ಸಮೀಪಿಸುವ ವೇಳೆಗೆ ಹೇಳ ತೊಡಗಿದ:

"ನನ್ನ ಕೋಣೆ ಶುಚಿಯಾಗಿಲ್ಲ. ನಿಮಗೆ ಬಣ್ಣದ ವಾಸನೆ ಬಂದೀತು. ಬೇಸರವಿಲ್ಲ ತಾನೇ?" ಎಂದ. ಯಮುನ ಮೌನವಾಗಿ ಬರುತಿದ್ದಳು. ಅವಳು ತೀರಾ ಸಮೀಪಕ್ಕೆ ಬಂದೊಡನೆ ಅನಂತ ಮುಂದರಿದ.

ತನ್ನ ಅಜ್ಜಿಯ ಅರೆಪೂರ್ಣ ಚಿತ್ರವನ್ನು ಕಂಡು ಯಮುನನಿಗೆ ಸಂತೋಷವೆನಿಸಿತು. ಆಗಿಂದಾಗಲೇ ವಿಮರ್ಶೆಗೂ ತೊಡಗಿದಳು.

"ನೋಡಿ, ಪ್ರಾಯ ಸಂದ ಮೇಲೆ ಯಾರಲ್ಲೂ ರೂಪ ಇರುವುದಿಲ್ಲ. ನನ್ನ ಅಜ್ಜಿ ಸಣ್ಣ ಪ್ರಾಯದಲ್ಲಿ ಬಹಳ ಚಂದವಾಗಿದ್ದರಂತೆ. ಈ ಚಿತ್ರವನ್ನು ನೋಡುವಾಗ ಹಾಗೆ ಅನಿಸುವುದಿಲ್ಲ. ನಾನು ಸಹಾ ಹೀಗೆಯೇ ಆಗಬಹುದು."

'ಆಗಬಹುದು ಮಾತ್ರವಲ್ಲ, ಆಗುತ್ತೀರಿ.'

ಯಮುನ ಕಣ್ಣರಳಿಸಿ ನೋಡಿದಳು. ಅವಳು ಉಟ್ಟುಕೊಂಡಿದ್ದ ಸೀರೆಯಿಂದ ನೆಪ್ತಲಿನ್ ಗೋಲಿಗಳ ಪರಿಮಳ ಬರುತಿತ್ತು. ಹೊರಗೆ ಸಾಕಷ್ಟು ಬಿಸಿಲು ಇದ್ದುದರಿಂದ ಕಂಕುಳಿನಲ್ಲಿ ಬೆವತಿದ್ದು ನಸುಹಸುರು ಬಣ್ಣದ ರವಕೆ, ಅಲ್ಲಿ ಕಡು ಹಸುರಾಗಿ ಕಾಣುತಿತ್ತು.ಕಣ್ಣಲ್ಲಿ ಮಾರ್ದವತೆ ಇತ್ತು.

ಅನಂತನ ಅಕ್ಕ ಶರ್ಬತ್ ತಂದಳು.

ಮೊದಲು ಬೇಡವೆಂದರೂ, ಕೊನೆಗೆ ಯಮುನ ಶರ್ಬತ್ ಕುಡಿದಳು. ನೆಮ್ಮದಿ ಎನಿಸಿತೋ ಏನೋ, ಅನಂತ ಅವಳನ್ನೇ ಸೂಕ್ಷ್ಮವಾಗಿ ನೋಡುತಿದ್ದ. ಅಕ್ಕ ಹೊರ ತೆರಳಿದಳು.

"ನನ್ನನ್ನು ಏಕೆ ಹಾಗೆ ನೋಡುತ್ತೀರಿ?"

"ನಿಮ್ಮ ಚಿತ್ರ ಬರೆಯಲು ಹೇಳಿದ್ದೀರಲ್ಲಾ."

"ಚಿತ್ರ ಬರೆಯಬೇಕಾದರೆ ಹೀಗೆ ನೋಡಬೇಕೆ?"

"ಇದಕ್ಕೂ ಸೂಕ್ಷ್ಮವಾಗಿ ನೋಡಬೇಕು."

"ಹಾಗಾದರೆ ಬೇಡಪ್ಪಾ. ನಿಮ್ಮ ದೃಷ್ಟಿಯನ್ನು ಎದುರಿಸಲು ನನ್ನಿಂದ ಸಾಧ್ಯವಿಲ್ಲ. ಗಿಡುಗನ ಹಾಗಿದೆ."

"ಅದಿರಲಿ, ನೀವೇಕೆ ಕುಂಕುಮ ಹಾಕುವುದಿಲ್ಲ?"

"ಆಗ ಅಂದೆನಲ್ಲಾ...."

"ಈ ಬಣ್ಣದಿಂದ ಒಂದು ಬೊಟ್ಟು ಹಾಕಿಕೊಳ್ಳಿ."

"ನೀವೇ ಹಾಕಿ. ಎಷ್ಟೆಂದರೂ ಚಿತ್ರಕಾರರು."

ಅನಂತ ಮಾತು ಮುಂದರಿಸಲಿಲ್ಲ. ಅಕ್ಕನನ್ನು ಕರೆದ. ಯಮುನ ನೊಡನೆ ಸ್ವಲ್ಪ ಹೊತ್ತು ಮಾತನಾಡುತ್ತಾ ಕುಳಿತಿರು ಎಂದು ಸೂಚಿಸಿ, ತಾನು ಕೃಷ್ಣಪ್ಪನಲ್ಲಿಗೆ ತೆರಳಿದ.

— ೪೦ —

ಸಂಜೆ ಆರರ ಹೊತ್ತಿಗೆ ಕಾಮತರು ಕೃಷ್ಣಪ್ಪನ ಅಂಗಡಿ ಬಳಿ ಬಂದರು. ಊರಿನ ಪ್ರಮುಖ ವ್ಯಾಪಾರಿಗಳವರು. ಕೃಷ್ಣಪ್ಪ ಸಾಧಾರಣ. ಅದು ಅವರ ಪ್ರಥಮ ಸಂದರ್ಶನ. ಕಾಫಿಯ ಏರ್ಪಾಡು ಆಯಿತು.

"ಯಮುನಾ ಇವತ್ತು ನಿಮ್ಮಲ್ಲಿಗೆ ಬಂದಿದ್ದಳೋ" ಎಂದು ಅನಂತ ನೊಡನೆ ಕೇಳಿದರು. ಅನಂತ ಹೌದೆಂದು ತಲೆದೂಗಿದ. ಕೃಷ್ಣಪ್ಪ ಸಂಶಯದ ದೃಷ್ಟಿಯಿಂದ ಅನಂತನನ್ನು ಕಂಡ.

"ಅವಳು ಮಾತಾಡುವುದು ಹೆಚ್ಚು. ಏನಾದರೂ ಹಾಳು ಹರಟೆ; ಮನಸ್ಸಿಗೆ ಹಚ್ಚಿಕೊಳ್ಳಬೇಡಿ" ಎಂದರು. ಅನಂತನಿಗೆ ಕಾಮತರ ಸಂತಯಿಕೆಯ ಮಾತಿನ ಅರ್ಥವಾಗಲಿಲ್ಲ. ಅವನ ಮೊಗಭಾವನೆ ಯಿಂದ ಸೂಚಿತರಾಗಿ, ಕಾಮತರು ಮಾತು ಮುಂದರಿಸಿದರು.

"ನೋಡಿ, ಒಂದೆರಡು ವರ್ಷಗಳಿಂದ ಅವಳು ಹೀಗೆಯೇ. ಇದ್ದ ಪಂಡಿತರ ಮದ್ದು ಮಾಡಿತು. ದೇವಸ್ಥಾನಗಳಿಗೆ ಹರಕೆ ಹೊತ್ತದ್ದಾ ಯಿತು. ಏನೂ ಪ್ರಯೋಜನವಾಗಲಿಲ್ಲ. ಇನ್ನೊಂದು ಎರಡು ವರ್ಷ ಹೀಗೆಯೇ ಇದ್ದೀತಂತೆ. ಹೇಗೂ ಗುಣವಾದರೆ ಸಾಕು'' ಎಂದರು. ಅನಂತ ಅವರ ಮೊಗದಿಂದ ದೃಷ್ಟಿ ಕಿತ್ತಿರಲಿಲ್ಲ. ಅವರು ಕೆಳಗಿಳಿದು ಹೋಗುವ ಸಮಯ ಅನಂತನನ್ನು ಕರೆದರು. ಸ್ವಲ್ಪ ದೂರ ಹೋದ ಬಳಿಕ 'ನಾವು ಬೇಡವೆಂದರೂ ಅವಳು ಕೇಳಲಿಲ್ಲ. ಅವಳೇ ನಿಮ್ಮ ಮನೆ ಹುಡುಕಿಕೊಂಡು ಬಂದಳೆಂದು ತೋರುತ್ತದೆ. ನಿಮ್ಮ ಮೇಲೆ ನನಗೆ ತುಂಬಾ ವಿಶ್ವಾಸ ಇದೆ ಎನ್ನಿ. ಮಾಸ್ತ್ರು ನಿಮ್ಮ ವಿಚಾರವಾಗಿ ನನ್ನಲ್ಲಿ ಹೇಳಿದ್ದಾರೆ. ನಿಮ್ಮಲ್ಲಿಗೆ ಅವಳು ಬಂದರೆ ಏನೂ ಆಗಲಾರದು ಎಂಬ ಧೈರ್ಯ ನನಗೆ" ಎಂದರು.

"ಮೊದಲು ನನಗೂ ಆಶ್ಚರ್ಯವಾಯಿತು. ಯಾವೊಂದು

ಚಿತ್ರವನ್ನು ನಾನು ಪೂರ್ಣಗೊಳಿಸದೆ, ಯಾರಿಗೂ ತೋರಿಸುವುದೆಂದಿಲ್ಲ. ಅವರು ಇಂದು ಎರಡು ಚಿತ್ರಗಳನ್ನೂ ಕಂಡರು."

"ಹೌದು, ಮನೆಯಲ್ಲಿ ತುಂಬಾ ಹೊಗಳುತಿದ್ದಳು."

ಅನಂತ ಆವರಿಂತ ವಿಷಯದ ಮರೆಮಾಚಿಕೆ ಬೇಡವೆಂದು, ಯಮುನ ಸರವನ್ನಿತ್ತು ಚಿತ್ರ ಬಿಡಿಸಿಕೊಳ್ಳಲು ಸಿದ್ಧಳಿದ್ದುದನ್ನು ಹೇಳಿದ. ಅವರಿಗೆ ಬೇಸರವಾಯಿತು.

"ಇನ್ನೊಂದು ಐವತ್ತು ರೂಪಾಯಿ ವೆಚ್ಚವಾದರೂ ಚಿಂತಿಲ್ಲ. ತನ್ನ ಚಿತ್ರ ಬಿಡಿಸಬೇಕೆಂದು ಅವಳು ಕೇಳಿದರೆ, ಬಿಡಿಸಿಬಿಡಿ" ಎಂದು ವಂದನೆಗಳನ್ನು ಅರ್ಪಿಸುತ್ತಾ ಕಾಮತರು ತೆರಳಿದರು. ಅನಂತ ಒಬ್ಬನೇ ಹಿಂತಿರುಗಿದ.

'ಏನು, ಒಬ್ಬರೇ ತಿರುಗಾಡಲು ಹೊರಟಿರಾ?' ಎಂಬ ಲಕ್ಷ್ಮಿಯ ಸ್ವರ ಹಿಂದಿನಿಂದ ಕೇಳಿಸಿತು. ಅನಂತ ಹಿಂತಿರುಗಿದ.

'ಅಲ್ಲ, ಬೇರೆ ಕೆಲಸವಿತ್ತು. ನೀವೆಲ್ಲಿಗೆ?'

'ಅಂಗಡಿಗೆ.'

'ಕತ್ತಲಲ್ಲಿ ಹೆದರಿಕೆ ಆಗುವುದಿಲ್ಲವೇ?'

'ನಮಗೆ ಬೇರೆಯವರು ಹೆದರಬೇಕು', ಎಂದಳು ಲಕ್ಷ್ಮಿ. ಕತ್ತಲು ಸಾಕಷ್ಟು ಹಬ್ಬಿದುದರಿಂದ ಅವಳ ಮೊಗ ಚೆನ್ನಾಗಿ ಕಾಣಿಸುತಿದ್ದಿಲ್ಲ. ಉತ್ತಮವಾಯಿತೆಂದು ಮನಸ್ಸಿನಲ್ಲಿಯೇ ಎಣಿಸಿಕೊಂಡ ಅನಂತ.

'ನಿಮ್ಮ ತಂದೆಯವರು ಸಾಮಾನು ತರುವುದಿಲ್ಲವೇ?'

'ಅವರಿಗೆ ನೆನಪು ಕಡಿಮೆ. ಅಕ್ಕಿತನ್ನಿ ಎಂದರೆ ಅರಸಿನ ತರುತ್ತಾರೆ. ಬೇಳೆ ಎಂದರೆ ಬೀಡಿ ತರುತ್ತಾರೆ. ಹಾಗಾಗಿ ನಾನೇ ಹೊರಡಬೇಕಾಗುತ್ತದೆ', ಎಂದಳು. ಅವಳೊಡನೆ ಮಾತನಾಡುತ್ತಾ ಮಾರ್ಗದ ಉದ್ದಕ್ಕೆ ಹೋಗುವುದು ಅನಂತನಿಗೆ ಹಿತವೆನಿಸಲಿಲ್ಲ. ಹಾಗೆಂದು ಅವಳನ್ನು ಮಧ್ಯದಲ್ಲಿ ಬಿಟ್ಟು ಬಿಡುವುದೂ ಅಸಾಧ್ಯವಾಗಿತ್ತು.

"ನನ್ನೊಡನೆ ಬರಲು ನಿಮಗೆ ಸಂಕೋಚವಾಗುವುದಾದರೆ ಹೇಳಿ' ನಾನು ನಿಧಾನವಾಗಿ ಬರುತ್ತೇನೆ", ಎಂದಳು ಲಕ್ಷ್ಮಿ. ಅನಂತನಿಗೆ ಧೈರ್ಯ ಬಂದಿತು. ಅವಳೊಡನೆ ತೀರಾ ಸಮೀಪದಲ್ಲಿ ಮಾತನಾ

ಡುತ್ತಾ ಮುಂದರಿದ. ಮಾರ್ಗದ ಬದಿಯ ಹಲವು ಅಂಗಡಿಗಳಿಂದ ಇವರನ್ನು ಕಾಣುವ ಕಣ್ಣುಗಳ ಹೊಳಪು ಅನಂತನಿಗೆ ಕಾಣಿಸದಿರಲಿಲ್ಲ. ಇರಲಿ. ಅವಳಲ್ಲಿ ಅಷ್ಟು ಧೈರ್ಯವಿದೆಯಂತೆ—ತನ್ನಲ್ಲಿ ಇರಬಾರದೇಕೆ ಎಂಬ ಹಟದಿಂದ ಮುಂದುವರಿದ.

— ೪೧ —

ಅನಂತ ಹಿಂದಿನಂತೆ ತನ್ನೊಡನೆ ಸಂಪರ್ಕ ಇಟ್ಟುಕೊಂಡಿಲ್ಲ ಎಂದು ಕೃಷ್ಣಪ್ಪನಿಗೆ ತಿಳಿಯಲು ಬಹಳಷ್ಟು ದಿನಗಳು ಹಿಡಿಯಲಿಲ್ಲ. ಈ ವಿಚಾರವನ್ನು ಒಂದಲ್ಲ ಒಂದು ದಿನ ಅನಂತನಲ್ಲಿ ಹೇಳಬೇಕು— ಅದರ ಬಳಿಕ ತನ್ನ ಮನಸ್ಸಿಗೆ ನೆಮ್ಮದಿ ಸಿಕ್ಕೀತೆಂದು ಸಮಯ ಕಾಯು ತಿದ್ದ. ಒಂದೆರಡು ಬಾರಿ ಬರಿಯ ಹಾಸ್ಯಕ್ಕೆಂದು ತಮ್ಮಿಬ್ಬರ ದೂರ ವಾಗುವಿಕೆಯನ್ನು ಹೇಳಿದ್ದ. ಅನಂತ ಆ ಮಾತುಗಳ ಕಡೆಗೆ ವಿಶೇಷ ಗಮನ ಕೊಟ್ಟಿರಲಿಲ್ಲ.

ಬಹಳ ಹಿಂದಿನ ದಿನವೊಂದನ್ನು ನೆನಸುತ್ತಾ ಅನಂತ ಕೋಣೆ ಯಲ್ಲಿ ಮಲಗಿದ್ದ. ಲಕ್ಷ್ಮಿಯೊಡನೆ ಅಂದು ಸಂಜೆ ಮಾತನಾಡಿದುದು ಹಿತವೆನಿಸಿತ್ತು. ತನ್ನ ಮತ್ತು ಲಕ್ಷ್ಮಿಯ ಸಮೀಪತೆಯು ಅಕ್ಕನಿಗೆ ತಿಳಿದರೆ ಹೇಗೆ—ಎಂಬ ಹೆದರಿಕೆ ಒಂದೆಡೆಯಲ್ಲಾದರೆ, ತಿಳಿದರೆ ತಿಳಿಯಲಿ ಎನ್ನುವ ಧೈರ್ಯಸ್ಥ ಮನೋವೃತ್ತಿ ಇನ್ನೊಂದೆಡೆ. ಅಂತಹ ನೀತಿ ಬಾಹಿರಳೊಡನೆ ತಾನು ಸಂಪರ್ಕ ಇರಿಸಿದುದು ತಪ್ಪು—ಅದಕ್ಕಾಗಿ ತನ್ನನ್ನು ಮನೆಯಿಂದ ಹೊರಹೋಗಲು ಹೇಳಲೂ ಸಾಕು. ಚಿಂತಿಲ್ಲ. ಕೃಷ್ಣಪ್ಪನ ಮನೆ ಇಲ್ಲವೇ? ಪಂಚಾಯತ್ ಆಫೀಸಿನ ಬಳಿಯ ಛತ್ರ ವಿಲ್ಲವೇ?

ಹಿಂದಿನಂತೆ ಬೆಳದಿಂಗಳು ಕೋಣೆ ತುಂಬಾ ಹಬ್ಬಿತ್ತು. ಆ ದಿನ— ಬಹುದೂರದ ಒಂದು ದಿನದಲ್ಲಿ ತಾನು ಭಿಕ್ಷುಕಿಯ ಚಿತ್ರ ಬಿಡಿಸಲು ಹೊರಟಿದ್ದ. ಅದು ಪೂರ್ಣವಾಗಿರಲಿಲ್ಲ. ಮದ್ರಾಸಿನ ಕಲಾ ಪ್ರದರ್ಶ ನಕ್ಕೆ ಇನ್ನು ಚಿತ್ರಗಳನ್ನು ಕಳುಹಿಸುವುದು ವ್ಯರ್ಥವಾಗಿತ್ತು. ಹೆಚ್ಚು ಹೊತ್ತು ನಿಂತಿದ್ದು ಕೆಲಸ ಮಾಡಲು ಮನಸ್ಸಿಗೆ ಭಯವೆನಿಸುತ್ತದೆ. ಕೈಕಾಲುಗಳು ಬಲಹೀನವಾದಂತೆ ಕಾಣುತ್ತವೆ.

ತನ್ನ ಕೋಣೆಯ ಬಾಗಿಲು ದೂಡಿದಂತಾಯಿತು. ಅನಂತ ಮುಚ್ಚಿದ್ದ ಕಣ್ಣುಗಳನ್ನು ತೆರೆದ. ಅಕ್ಕ ಒಳ ಬಂದಿದ್ದಳು. ಅನಂತ ನಿಗೆ ನಿದ್ದೆ ಬಂದಿರಬಹುದು ಎಂಬ ಯೋಚನೆಯಿಂದ ಜ್ವರವಿದೆಯೇ ಎಂದು ಹಣೆ ಮುಟ್ಟಿ ಕಂಡಳು. ಜ್ವರವಿರಲಿಲ್ಲ. ಕೊಂಚ ಬೆವರಿತ್ತು. ಅಲ್ಲೇ ಟವೆಲಿನಿಂದ ಅವನ ಹಣೆ ಎದೆಗಳನ್ನು ಒರಸಿದಳು. ಅನಂತನಿಗೆ ಹಿತವೆನಿಸಿತು. ಬಳಿಕ ಹೊದ್ದಿಕೆಯನ್ನು ಅವನ ಎದೆ ತನಕ ಎಳೆದು ಹೊರ ತೆರಳಿದಳು.

"ಅಮ್ಮಾ...." ಎಂದು ತನ್ನ ದಿಂಬಿಗೆ ಕೇಳಿಸುವಷ್ಟು ಮಿದುವಾಗಿ ಅಕ್ಕನನ್ನು ಕರೆದ. ಅಕ್ಕನ ಹಿರಿಮೆಯೊಡನೆ ತನ್ನೆಲ್ಲಾ ಅನುಭವಗ ಳನ್ನು ತೂಗಿ ನೋಡಿದ. ಮಗ್ಗುಲು ಕೋಣೆಯಿಂದ ಅಕ್ಕ ಭಾವನವರ ಮಾತು ಕೇಳಿಸತೊಡಗಿತು.

'ಜ್ವರ ಇದೆಯೇ?'

'ಇಲ್ಲ, ಮೈ ಬೆವತಿತ್ತು.'

'ಅವನಿಗೆ ಸಂಪೂರ್ಣ ವಿಶ್ರಾಂತಿ ಸಿಗಬೇಕಂತೆ.'

'ನಾನು ಹೇಳಿದರೆ ಅವ ಕೇಳುವುದಿಲ್ಲ.'

'ಮತ್ತು ನಾನು ಹೇಳಬೇಕೇ?'

'ನೀವು ಹೇಳಿದರೆ ಬೇಸರಿಸಿಕೊಂಡಾನು.'

'ಇವರೆಲ್ಲಾ ತಿಳಿದವರು. ಹೀಗೇಕೆ ಮಾಡುತ್ತಾರೋ,' ಎಂಬ ಭಾವನವರ ಮಾತು ಕೇಳಿ ಅನಂತನಿಗೆ ನಗು ಬಂತು. ತಾನು ತಿಳಿದವನಂತೆ ಯಾವ ದೃಷ್ಟಿಯಿಂದ?

'ಡಾಕ್ಟರರು ಇವತ್ತೂ ಹಾಗೆ ಹೇಳಿದರು.'

'ವಿಶ್ರಾಂತಿ ವಿಶ್ರಾಂತಿ ಎಂದು ಬೊಬ್ಬೆ ಹಾಕಿದರೆ ವಿಶ್ರಾಂತಿ ಸಿಗು ತ್ತದೆಯೇ? ಅದಲ್ಲದೆ ಮೊನ್ನೆ ಯಾರೋ ಕಾಮತರಂತೆ—ಅವರ ತಾಯಿ ತಂದೆಯವರ ಚಿತ್ರ ತಂದಿದ್ದಾನೆ. ಈಗ ಅದನ್ನೇ ಮಾಡುತ್ತಾನೆ. ಅಲ್ಲಿ ಸಿಕ್ಕಿದ ಎಡ್ವಾನ್ಸ್ ಹಣ ನನ್ನಲ್ಲಿ ಕೊಟ್ಟಿರುತ್ತಾನೆ.'

'ನೀನೇಕೆ ತೆಗೆದುಕೊಂಡೀ?'

'ಅವನೇ ಕೊಟ್ಟದ್ದು.'

'ಅವನ ಹತ್ತಿರವೇ ಇರಲಿ ಬಿಡು. ಏನಾದರೂ ವೆಚ್ಚಕ್ಕೆ ಅವನಿಗೆಯೇ ಬೇಕಾದೀತು. ಬೇಕಾದರೆ ಪೋಸ್ಟಾಫೀಸಿನಲ್ಲಿಯೋ, ಬೇಂಕಿನಲ್ಲಿಯೋ ಇರಲಿ.'

'ಬೇಂಕಿನಲ್ಲಿ ಇಡುವಷ್ಟು ಇಲ್ಲ.'

ಅನಂತನಿಗೆ ಇನ್ನೊಮ್ಮೆ ನಗು ಬಂತು. ತನ್ನ ಇದು ತನಕದ ದುಡಿಮೆಯನ್ನು ಹಣದ ದೃಷ್ಟಿಯಿಂದ ನೋಡಿದರೆ, ಅದೇನು ಅಷ್ಟು ಹಗುರವೆಂದು ಕಾಣಿಸಲಿಲ್ಲ. ಆದರೆ ಬೇಂಕಿನಲ್ಲಿ ಇಡುವಷ್ಟು ಭಾರ ಆದಕ್ಕೆ ಬಂದಿರಲಿಲ್ಲ.

ಏಕೋ—ಮನಸ್ಸು ಕೆಲವು ವರುಷಗಳ ಹಿಂದೆ ಹಾರಿತು.

ಮದ್ರಾಸು.......

ಕಲಾ ಶಾಲೆ.....

ಗೆಳೆಯರು......

ಎಲ್ಲವನ್ನೂ ಆವರ್ತ ರೀತಿಯಲ್ಲಿ ಎಣಿಸಿಕೊಂಡ. ಅತ್ತ ಅಕ್ಕ ಭಾವಂದಿರ ಸಂಭಾಷಣೆ ನಿಂತಿತ್ತು. ಆಗೊಮ್ಮೆ ಈಗೊಮ್ಮೆ ಕೇಳುತಿದ್ದ ಗೂಗೆಯ ಹೊರತು ಪ್ರಕೃತಿ ಜಡವಾಗಿತ್ತು.

ಲಕ್ಷ್ಮಿಗೆ ತಾನು ಕಾಗದ ಬರೆದುದು—ಅದನ್ನು ಹಾಳುಗೆಡವಿದುದು—ಎಲ್ಲವೂ ಅರ್ಥಶೂನ್ಯವಾಗಿ ಕಂಡಿತು. ಮನಸ್ಸು ಭಾರವಾಗತೊಡಗಿತು. ಮುಚ್ಚಲೆಂದು ಭಾರವಾಗಿದ್ದ ಕಣ್ಣೆವೆಗಳು ಹಗುರವಾಗತೊಡಗಿದ್ದುವು. ಕಿಟಕಿಯ ಹೊರ ನೋಡುತಿದ್ದಂತೆ ದೂರದಿಂದ ಕೊರಗರ ಡೋಲಿನ ಶಬ್ದ ಕೇಳಿಸತೊಡಗಿತು. ಅವರಾದರೂ ಸಂಪೂರ್ಣ ತೃಪ್ತರು ಎಂದು ಅನಿಸಿತು........

''ನನ್ನ ಗಂಡ ನನಗೆ ಕೊಟ್ಟ ಕಷ್ಟಗಳನ್ನು ಎಣಿಸಲು ಸಾಧ್ಯವಿಲ್ಲ. ನಾನು ಮನುಷ್ಯ ಜೀವಿ ಎಂಬುದನ್ನು ಮರೆತು ಹೊಡೆಯುತಿದ್ದರು. ನನ್ನನ್ನು ಕಂಡು ತಂದೆಯವರು ಕೂಗುತಿದ್ದರು. ಆದರೂ ಅವರಿಗೆ ಕರುಣೆ ಬರುತ್ತಿರಲಿಲ್ಲ. ಎಷ್ಟೆಲ್ಲಾ ಕಷ್ಟಗಳನ್ನು ಗಂಡುಸಿಂದ ಪಡೆಯಬಹುದೋ, ಅದಕ್ಕೆ ನೂರು ಪಾಲು ಕಷ್ಟವನ್ನು ಗಂಡಸಿಂದ ಪಡೆದಿರುತ್ತೇನೆ. ಈ ಮಗುವಾದ ಬಳಿಕ ಕಷ್ಟಗಳು ಕಡಿಮೆಯಾಗಿವೆ.

ಅವರು ತಿರುಗಿ ಬಂದರೂ ಹೆದರಿಕೆ ಅನಿಸುವುದಿಲ್ಲ. ಹಿಂದಿನಂತೆ ಅವರು ಗದರಿಸಿದಾಗಲೆಲ್ಲಾ ನಾನು ಮಣಿಯುವಂತಿಲ್ಲ. ನಾನು ಬೆಳೆದಿದ್ದೇನೆ.......',

ಲಕ್ಷ್ಮಿಯು ಸಮೀಪದಲ್ಲಿ ಕುಳಿತು ಹೇಳಿದಂತೆ ಅನಿಸಿತು. ನಿದ್ದೆಯ ಜೊಂಪು ಲಕ್ಷ್ಮಿಯೇ ಬಂದಿರಬಹುದೆಂಬ ಭ್ರಮೆಯಿಂದ ಕಣ್ತೆರೆದು ಕಂಡ. ಯಾರಿರಲಿಲ್ಲ, ಸಂಜೆಯ ಹೊತ್ತಿನಲ್ಲಿ "ನನಗೆ ಜೇರೆಯುವರು ಹೆದರಬೇಕು" ಎಂದು ಆಕೆ ಹೇಳಿದ್ದ ಮಾತು ಕಿವಿಯಲ್ಲಿ ಜಿನುಗತೊಡಗಿತು.

ಅವಳ ಪರಿಚಯ ತಾನು ಮಾಡಿಕೊಂಡು ದೊರೆತ ಲಾಭವಾದರೂ ಏನು? ಏನೂ ಇಲ್ಲ. ಇದರೆಡೆಯಲ್ಲಿ ಯಮುನನ ಉಪದ್ರ ಬೇರೆ. ಅವಳ ಚಿತ್ರವನ್ನು ಬಿಡಿಸಿದರೂ ಬಿಡಿಸಬಹುದು. ಅವಳು ಎದುರು ಕುಳಿತಿರಲು ಒಪ್ಪಿಯಾಳು. ಹಿಂದಿನ ವಿದ್ಯಾರ್ಥಿ ಜೀವನಕ್ಕೆ ಇನ್ನೊಮ್ಮೆ ಹೋದಂತಾಯಿತು........

"ನೀವು ನನ್ನನ್ನು ಚೆಂದವಾಗಿದ್ದೀ ಎನ್ನುತ್ತೀರಿ. ಏನು ಚಂದವೋ ನನಗೆ ತಿಳಿಯುವುದಿಲ್ಲ. ನನ್ನ ತಾಯಿ ನನಗಿಂತ ಚಂದವಾಗಿದ್ದರಂತೆ ನೀವು ಅವಳ ಚಿತ್ರ ಬಿಡಿಸಬೇಕಿತ್ತು—ನನ್ನ ಚಿತ್ರವನ್ನಲ್ಲ. ನನ್ನ ಹಣೆಯ ಬಳಿ ಗಾಯವನ್ನು ಕಂಡಿಲ್ಲವೇ? ಸೀರೆ ಬಿಚ್ಚಿದೆನಾದರೆ ಮೈ ತುಂಬಾ ಗಾಯಗಳನ್ನು ಕಾಣಬಹುದು. ಎಲ್ಲವೂ ಗಂಡನ ಪ್ರಸಾದ. ಹೇಗೆ?"

ಲಕ್ಷ್ಮಿ ಮಾತು ಮುಂದರಿಸಿದಂತಾಯಿತು. ಈ ಹಾಳು ಹರಟೆಗಳು ಬೇಡವೆನಿಸಿತು. ಆದರೆ ಸಮಯ ಅಷ್ಟರಲ್ಲಿಯೇ ಹನ್ನೊಂದು ದಾಟಿತು.

— ೪೨ —

ಡಾಕ್ಟರರು ಚೆನ್ನಾಗಿ ಪರೀಕ್ಷಿಸಿದರು. ಹಲಬಾರಿ ಅವರ ದೃಷ್ಟಿಯನ್ನು ಎದುರಿಸುವುದು ಅಸಾಧ್ಯವೆನಿಸಿತು ಅನಂತನಿಗೆ. ತನ್ನದೊಂದು ಬಹುಚಿಕ್ಕ ಜೀವ, ಇದಕ್ಕಾಗಿ ಅಕ್ಕ–ಭಾವ–ಕೃಷ್ಣಪ್ಪ–ಲಕ್ಷ್ಮಿ–ಡಾಕ್ಟ

ರರು—ಇದಿಷ್ಟು ಮಂದಿ ಪರಿತಪಿಸುವುದು ಸೊಗಸೆನಿಸಲಿಲ್ಲ. ಹಾಗೆಂದು ಬಾಯ್ತೆರೆದು ಹೇಳುವಂತೆಯೂ ಇರಲಿಲ್ಲ.

ಡಾಕ್ಟರರು ಎಳೆ ಪ್ರಾಯದವರು. ಮೇಲಾಗಿ ಚಿತ್ರಕಲೆಯಲ್ಲಿ ಅಭಿರುಚಿ ಇದ್ದವರು. ಅನಂತನ ಮೇಲಣ ಮಮತೆ ಅವರದು ಎರಡು ಬಗೆಯದು. ಅಂತೂ ಡಾಕ್ಟರ್ ಮತ್ತು ಭಾವನವರ ಅಭಿಪ್ರಾಯದಂತೆ ಅನಂತ ಎರಡು ತಿಂಗಳುಗಳನ್ನು ಡಾಕ್ಟರರ ಚಿಕಿತ್ಸಾಲಯದಲ್ಲಿ ಕಳೆಯ ಬೇಕೆಂದು ನಿರ್ಣಯಿಸಲಾಯಿತು. ಆ ಎರಡು ತಿಂಗಳು ಇಂಜಕ್ಷನ್‌ಗಳ ಧಾಳಿ ಇದ್ದೀತೆಂದು ಯೋಚಿಸಿದ. ಮೇಲಾಗಿ ತನ್ನ ಮೆಚ್ಚಿನ ತಿರುಗಾಟ, ಕೃಷ್ಣಪ್ಪನೊಡನೆ ಹೊಡೆಯುತಿದ್ದ ಹರಟೆ– ಇವುಗಳಿಗೆ ಕಲ್ಲು ಬಿತ್ತಲ್ಲಾ ಎಂಬ ಬೇಸರ. ಎಲ್ಲವನ್ನೂ ನುಂಗಿಕೊಳ್ಳಬೇಕಾಯಿತು.

ಆತನ ಭಾವ ಡಾಕ್ಟರ್‌ರಲ್ಲಿಂದ ಬಂದೊಡನೆ ವಿಷಯವನ್ನು ಮಡದಿಯಲ್ಲಿ ತಿಳುಹಿಸಿದರು. ಪರಿಣಾಮವಾಗಿ ಆಕೆ ಕೂಗ ಹತ್ತಿದಳು. ಅನಂತ ತನ್ನ ಕೋಣೆಯಲ್ಲಿ ಕುಳಿತು ಅಸಂಪೂರ್ಣವಾಗಿದ್ದ ಕಾಮತರ ತಾಯಿ-ತಂದೆಯರ ಚಿತ್ರ ನೋಡುತಿದ್ದ. ಒಂದು ತಿಂಗಳೊಳಗಾಗಿ ಅವುಗಳನ್ನು ಕೊಡುತ್ತೇನೆಂಬ ಮಾತು ಮುರಿಯಿತಲ್ಲಾ ಎಂಬ ನೋವು ಆವನಿಗೆ. ಮರುದಿನದಿಂದ ಆತ ಚಿಕಿತ್ಸಾಲಯದಲ್ಲಿ ಉಳಿಯಬೇಕಿತ್ತು.

ಅಂದಿನ ಸಂಜೆ ಅಪೂರ್ವದ್ದು. ಮುಂದಿನ ಎರಡು ತಿಂಗಳುಗಳ ಸೌಮ್ಯ ಬಂಧನದ ಮೊದಲ ಸಂಜೆ. ಲಕ್ಷ್ಮಿಯಲ್ಲಿಗೆ ಹೋಗಬೇಕೆಂದು ಎಣಿಸಿದ. ತನಗೆ ಬೇಸರವಾದಾಗಲೆಲ್ಲ ತನ್ನಲ್ಲಿಗೆ ಬರಲು ಆಕೆ ಆಮಂತ್ರಿಸಿದ್ದಳು ತಾನೇ?

ಮನೆಯ ಗೇಟು ದಾಟುವುದರೊಳಗೆ ಎದುರಲ್ಲಿ ಯಮುನ ಸಿಕ್ಕಿದಳು. ಅವಳನ್ನು ದೂರದಲ್ಲಿ ಕಾಣುತಿದ್ದರೆ ದಾರಿ ಬದಲಿಸುತಿದ್ದನೋ, ಏನೋ, ಅಂತೂ ಕಂಡ ತಪ್ಪಿಗಾಗಿ ಮಾತನಾಡಿಸಬೇಕಾಯಿತು. ಯಮುನನ ಹಣೆಯಲ್ಲಿ ಕುಂಕುಮ ಕಂಡು ಅನಂತನಿಗೆ ಸೋಜಿಗವೆನಿಸಿತು.

“ಚಿತ್ರ ಇನ್ನೂ ಸಂಪೂರ್ಣಗೊಂಡಿಲ್ಲವೇ?”

ತನ್ನ ಸಹನೆಯನ್ನು ಯಮುನ ಕೆದುಕುತಿದ್ದಾಳೆಂದು ಅನಿಸಿತು ಅನಂತನಿಗೆ. ಅದೇ ನೆಟ್ಟ ನೋಟ. ದಿನಕ್ಕಿಂತ ಹೆಚ್ಚಿನ ಶೃಂಗಾರ ದಿಂದ ಯಮುನಾ ಬಂದಿದ್ದಳು.

‘‘ಅದೇನು ತಲೆ ಬಾಚಿ ಹೆರಳು ಹಾಕಿಕೊಳ್ಳುವಷ್ಟು ಸುಲಭವೇ?” ಎಂದು ನಗುತ್ತಾ ಕೇಳಿದ. ಆಕೆ ಉತ್ತರಿಸಲಿಲ್ಲ. ಬದಲಾಗಿ ಅವಳ ಕಾಲುಗಳು ಅನಂತನನ್ನು ಅನುಸರಿಸ ತೊಡಗಿದುವು.

ಬಾಗಿಲಲ್ಲಿದ್ದ ಅನಂತನ ಅಕ್ಕ ಯಮುನನನ್ನು ಕಂಡಳು. ಏನೋ ಎಣಿಸಿಕೊಂಡು ಒಳ ತೆರಳಿದಳು.

‘‘ಅದಷ್ಟು ನೋಡಬಹುದಲ್ಲಾ.”

‘‘ನೋಡಿ, ನೀವು ನಾನು ಬಿಡಿಸಿರುವ ಅಪೂರ್ಣ ಚಿತ್ರಗಳನ್ನು ನೋಡುವಂತಿಲ್ಲ. ಮೊದಲನೆಯ ದಿನ ಏನೋ ಒಂದು ಸೌಹಾರ್ದ ದಿಂದ ನಿಮ್ಮನ್ನು ನೋಡಲು ಬಿಟ್ಟದ್ದೆನಷ್ಟೆ. ಇವತ್ತು ಸಾಧ್ಯವಿಲ್ಲ”

‘‘ಅದೇ ಸೌಹಾರ್ದ ಇವತ್ತು ತೋರಬಾರದೇ?”

‘‘ಹಾಗೆ ಉದ್ದಕ್ಕೆ ಸೌಹಾರ್ದ ತೋರುತ್ತಾ ಹೋಗಬಾರದು. ಹಾಗಾದರೆ ಅದರ ಬೆಲೆ ಕಡಿಮೆಯಾಗುತ್ತದೆ.”

‘‘ಅದೇನು ವ್ಯಾಪಾರಕ್ಕೆ ಇಟ್ಟ ವಸ್ತುವೇ?”

ಯಮುನನ ಮಾತು ಸ್ಪಷ್ಟ ಮತ್ತು ವಾದಪೂರ್ಣವಾಗಿದ್ದುವು, ಅವಳ ಮನೋಸ್ಥಿತಿ ಚೆನ್ನಾಗಿಲ್ಲವೆಂದು ಯಾರೂ ಹೇಳುವಂತಿರಲಿಲ್ಲ.

‘‘ನಿಮ್ಮೊಡನೆ ವಾದ ಹೂಡಲು ನನ್ನಿಂದ ಸಾಧ್ಯವಿಲ್ಲ. ಅಂತೂ ಚಿತ್ರವನ್ನು ಎರಡು ತಿಂಗಳುಗಳ ತನಕ ಕೊಡುಲು ಸಾಧ್ಯವಿಲ್ಲ. ನಾನು ಬೇರೆಲ್ಲಿಗೋ ಹೋಗುತ್ತೇನೆ”.

ಯಮುನ ಮೌನವಾಗಿ ಅನಂತನನ್ನು ನೋಡಿದಳು. ಸಮೀಪದ ಜೀವನವನ್ನು ಕಳೆದುಕೊಳ್ಳುವಾಗ ಕಾಣಬಹುದಾದ ದುಃಖ ಛಾಯೆ ಆ ಕಣ್ಣುಗಳ ನೆರಿಗೆಯಲ್ಲಿ ಕಾಣಿಸಿತು. ಆದರದು ಕ್ಷಣದ ಭಾಗದಷ್ಟು ಸಮಯದಲ್ಲಿ ಕೂಡಲೇ ಹಿಂದಿನಂತಾದಳು.

‘‘ನಾನಿವತ್ತು ಕುಂಕುಮ ಹಾಕಿರುತ್ತೇನೆ.”

‘‘ನಾನದನ್ನು ಆಗಲೇ ಕಂಡಿರುತ್ತೇನೆ.”

“ಸರಿಯಾಗಿ ಇದೆಯಲ್ಲಾ.”

“ಚಿತ್ರಗಾರರು ಬರೆದಂತಾಗಿದೆ.”

ಒಳಗಿನಿಂದ ಅಕ್ಕ ನಕ್ಕ ದನಿ ಅನಂತನಿಗೆ ಕೇಳಿಸಿತು. ಅವನಿಗೂ ನಗು ಬಂತು, ತಡೆದಿಕ್ಕಿಕೊಂಡು ಮಾತು ಮುಂದರಿಸಿದ.

“ಕುಂಕುಮ ಹಾಕಿ ಕೊಳ್ಳುವುದು ನಮ್ಮ ಸ್ತ್ರೀಯರ ಪವಿತ್ರ ಕರ್ತವ್ಯ. ನೀವು ಇಲ್ಲೇ ಹುಟ್ಟಿ ಬೆಳೆದವರು. ಕುಂಕುಮವನ್ನು ಹಾಕಿ ಕೊಳ್ಳಲು ಮರೆತರೆ, ನಿಮ್ಮಲ್ಲಿ ಆರ್ಯತ್ವ ಇಲ್ಲವೆಂದು ಹೇಳಬಹುದು.”

‘ಕ್ರಿಶ್ಚನರು ಹಾಕಿಕೊಳ್ಳುತ್ತಾರೆಯೇ?’

‘ಅವರ ಮತ—ರೀತಿ ಬೇರೆ. ನಮ್ಮದು ಬೇರೆ. ನಾವು ನಾವಾಗಿಯೇ ಇರಲು ಯತ್ನಿಸಬೇಕಲ್ಲದೆ, ಬೇರೆಯವರನ್ನು ಅನುಸರಿಸಿ, ನಮ್ಮನ್ನು ನಾವೇ ಕೆಳಗೆ ಎಳೆದುಕೊಳ್ಳಬಾರದು,’ ಎಂದ ಅನಂತನ ಮಾತು ಯಮುನನಿಗೆ ಅರ್ಥವಾಗಲೂ ಇಲ್ಲ—ರುಚಿಸಲೂ ಇಲ್ಲ.

‘ನಾನೀಗ ಹೊರ ಹೋಗುತ್ತೇನೆ. ಬರುತ್ತೀರೋ?’

‘ತಿರುಗಾಟಕ್ಕೆಯೇ?’

‘ಹೌದು.’

‘ನಾನೂ ಬರುತ್ತೇನೆ.’

ಸರಿ ಎಂದು ಕೊಂಡು ಇಬ್ಬರೂ ಹೊರ ಹೊರಟರು. ಅನಂತನಿಗೆ ಒಳ ಒಳಗಿಂತ ನಗು ಬರುತಿತ್ತು. ತನ್ನ ಮತ್ತು ಯಮುನನ ಈ ರೀತಿಯ ಸಾಮಿಪ್ಯತೆ ಕೃಷ್ಣಪ್ಪನಿಗೆ ಹಾಸ್ಯಾಸ್ಪದವಾಗಿ ತೋರಲಿದೆ ಎಂದು ತಿಳಿಯಿತು. ಆದರೆ ಬೇರೆ ಹಾದಿ ಇರಲಿಲ್ಲ.

ಮಾರ್ಗದಲ್ಲಿ ಯಮುನ ಬಾಯಿ ತುಂಬಾ ಮಾತನಾಡಿದಳು. ಚಲಚಿತ್ರಗಳ ನಟನೆ–ಸಂಗೀತಗಳ ಕುರಿತು ವ್ಯಾಖ್ಯಾನ ಹೊರಡಿಸಿದಳು. ಇಂಗ್ಲಿಷ್ ಚಿತ್ರಗಳನ್ನು ದೂರಿದಳು. ಅನಂತ ಎಲ್ಲವನ್ನು ಸೂಕ್ಷ್ಮವಾಗಿ, ಸಮ್ಮತಿ ಸೂಚಕವಾಗಿ ಕೇಳುತಿದ್ದ.

ಮೈದಾನಿನ ಕಡೆ ಹೋಗುವ ರಸ್ತೆ ಬಂದಿತು ಅನಂತ ಬೇರೆಡೆಗೆ ತಿರುಗಿದುದನ್ನು ಕಂಡು ಯಮುನ ಅವಾಕ್ಕಾದಳು,

‘ನೀವು ಮೈದಾನಿಗೆ ಹೋಗುವುದಿಲ್ಲವೇ?’

'ಇಲ್ಲ.'

'ಇವತ್ತೊಂದು ಹೋಗಬಹುದಲ್ಲಾ.'

'ಯಾವಾಗಲೂ ಹೋಗುತ್ತೇನೆ.'

'ಬನ್ನಿ, ಬೇರೆ ವಿಶೇಷ ಕೆಲಸ ಇರಲಾರದು.'

'ನಿಮ್ಮ ಜೊತೆಗೆ ನಾನು ತಿರುಗಾಡಿದರೆ ಯಾರಾದರೂ ಏನು ಹೇಳಿಯಾರು?'

ನಾನು ಕುಂಕುಮ ಹಾಕಿಕೊಂಡಿದ್ದೇನೆ.'

ಅನಂತನಿಗೆ ಆವಳ ಮಾತಿನ ಅರ್ಥವಾಗಲಿಲ್ಲ. ಕೆಲವು ಮಾತುಗಳನ್ನು ಕೇಳುವಾಗ ಅವಳ ಜೊತೆ ಇದ್ದು ಬಿಡೋಣ ಎಂದೆನಿಸುತಿತ್ತು. ಮೇಲಾಗಿ ಅವಳ ಈ ರೀತಿಯ ಮನೋಸ್ಥಿತಿಗೆ ಏನು ಕಾರಣ ಎಂದು ತಿಳಿಯುವ ಕುತೂಹಲ.

'ಸರಿ, ಹೋಗೋಣ.'

ಇಬ್ಬರನ್ನು ಕಾಣುವ ಕಣ್ಣುಗಳ ಸಂಖ್ಯೆ ಹೆಚ್ಚಿದುವು. ಹೈಸ್ಕೂಲಿನ ಬೆಳೆದ ವಿದ್ಯಾರ್ಥಿಗಳ ಸುಮಧುರ ಸಿಳ್ಳು ಕೇಳಿಸಿತು. ಬೀಡಿ ಕಟ್ಟುತ್ತಾ ಅಂಗಡಿ ಬಾಗಿಲಲ್ಲಿ ಕುಳಿತಿದ್ದವರ 'ಸೋಕುಲಾ...' ಎಂಬ ರಾಗಪೂರಿತ ಮಾತು ಕೇಳಿಸಿತು. ಅನಂತ ಕಿವುಡನಂತೆ ಮುಂದರಿದ.

— ೪೩ —

ಯಮುನನನ್ನು ಮನೆ ತಲುಪಿಸಿ ಲಕ್ಷ್ಮಿಯಲ್ಲಿಗೆ ಅನಂತ ತೆರಳುವ ಸಮಯ ಗಂಟೆ ಎಂಟಾಗಿತ್ತು. ಅವಳಲ್ಲಿ ಯಾರೋ ಒಬ್ಬರು ಕುಳಿತಿದ್ದಂತೆ ದೂರದಿಂದ ಕಂಡಿತು. ಸರಿ. ಹಿಂತಿರುಗೋಣ ಎಂಬ ಅಭಿಪ್ರಾಯದಿಂದ ಲಕ್ಷ್ಮಿಯ ಮನೆಗೆ ಬೆನ್ನು ಹಾಕಿದ.

ಕೃಷ್ಣಪ್ಪನಲ್ಲಿ ಬಂದಾಗ ಆತ ಇದ್ದಿರಲಿಲ್ಲ, ಮನೆಯಲ್ಲಿಯೂ ಇರಲಿಲ್ಲ. ಲಕ್ಷ್ಮಿಯಲ್ಲಿ ಇದ್ದುದು ಕೃಷ್ಣಪ್ಪನೇ ಎಂದುಕೊಂಡು ಇನ್ನೊಮ್ಮೆ ಆವಳ ಮನೆ ಬಳಿ ಬಂದ, ಒಳ ತೆರಳಿದ.

ಚಾವಡಿ ಬರಿದಾಗಿತ್ತು.

ಆವಳ ತಂದೆಯ ಕೆಮ್ಮು ಕೇಳಿಸಿತು.

'ಅವರಿಲ್ಲವೇ?' ಎಂದು ಕೇಳಿದ.

ಕೆಮ್ಮುತ್ತಾ ಕೆಮ್ಮುತ್ತಾ ಲಕ್ಷ್ಮಿ ಒಳಗಿರುವಳೆಂದು ಆತ ಸೂಚಿಸಿದ ಏಕೋ—ಸೋಲು ತನ್ನ ಬೆನ್ನು ಹಿಡಿದು ಬರುತ್ತಿದೆ ಎಂಬಂತಾಯಿತು. ತಾಳ್ಮೆಯಿಂದ ಕುಳಿತ. ಸ್ವಲ್ಪ ಹೊತ್ತಲ್ಲಿ ಲಕ್ಷ್ಮಿ ಹೊರ ಬಂದಳು.

'ಒಳಗೆ ಒಲೆಯ ಬಳಿ ಇದ್ದೆ. ನಿಮ್ಮ ಸ್ವರ ಕೇಳಿಸಿತು.'

'ಸರಿ.'

'ಬೇಸರವಾಗುತ್ತಿದೆಯೇ?'

'ಇಲ್ಲ. ಒಂದು ವಿಷಯ ಹೇಳೋಣ ಎಂದು ಬಂದೆ.'

'ಏನು?'

'ನಾನು ನಾಳೆಯಿಂದ ಎರಡು ತಿಂಗಳು ಡಾಕ್ಟರರ ಚಿಕಿತ್ಸಾಲಯದಲ್ಲಿ ಇರುತ್ತೇನೆ. ಇಲ್ಲಿಗೆ ಬರಲು ಸಾಧ್ಯವಾಗುವಂತಿಲ್ಲ.'

'ಗುಣವಾದ ಬಳಿಕ ಬೇಕಷ್ಟು ಬಾರಿ ಬರಬಹುದಲ್ಲಾ.'

ಲಕ್ಷ್ಮಿ ಒಳತೆರಳಿ ನಾಲ್ಕು ಬಿಸ್ಕುಟುಗಳನ್ನು ತಂದಿತ್ತಳು. ಅನಂತ ಒಂದನ್ನು ಬಾಯಿಗೆ ತುಂಬಿಕೊಂಡ.

'ಮಗು?'

'ಮಲಗಿದೆ.'

ಮೂಲೆಯಿಂದ ಕೆಮ್ಮು ಕೇಳಿಸತೊಡಗಿತು. ಆ ರೀತಿಯಾಗಿ ಉಸಿರು ಹಿಡಿದಂತೆ ಒಂದೇ ಸವನೆ ಕೆಮ್ಮುತಿದ್ದುದನ್ನು ಅನಂತ ಅದು ತನಕ ಕೇಳಿರಲಿಲ್ಲ. ಅನಂತ ಮುದುಕನನ್ನೇ ನೋಡುತಿದ್ದ.

'ಹೋಗಲೇ?'

'ಊಟ ಮಾಡುತ್ತೀರಾ?'

'ಬೇಡ.'

'ಜಾಗ್ರತೆಯಾಗಿರಿ', ಎಂದು ಲಕ್ಷ್ಮಿ ನುಡಿಯುವ ಮೊದಲು ಆತ ಮೆಟ್ಟಲಿಳಿದು ಆಗಿತ್ತು. ಹತ್ತಾರು ಹೆಜ್ಜೆಗಳ ಬಳಿಕ ಹಿಂತಿರುಗಿ ಕಂಡ—ಲಕ್ಷ್ಮಿ ನಿಂತಿದ್ದ ಛಾಯೆ ಕಾಣಿಸಿತು.

— ೪೪ —

ಚಿಕಿತ್ಸಾಲಯದ ಆವರಣ ಅನಂತನಿಗೆ ಮೆಚ್ಚುಗೆಯಾಗಿ ಕಂಡಿತು. ಆ ಕೋಣೆಯಲ್ಲಿ ಅವನ ಹೊರತಾಗಿ ಇದ್ದುದು ಒಬ್ಬ ಮುದುಕ ಮಾತ್ರ. ಆತನಿಗೆ ಮೂತ್ರ ಕೋಶಕ್ಕೆ ಸಂಬಂಧಿಸಿದ ಏನೋ ರೋಗ. ಅನಂತ ಇದ್ದುದರಲ್ಲಿ ಮನಶ್ಯಾಂತಿ ತಂದುಕೊಳ್ಳಲು ಯತ್ನಿಸುತಿದ್ದ. ಪುಸ್ತಕಗಳನ್ನು ಓದಬಾರದು ಎಂದಿದ್ದರು ಡಾಕ್ಟರರು. ಹಾಗಾಗಿ ಇಡಿಯ ದಿನ ಹೇಗೋ ಹೇಗೋ ಕಳೆದು ಹೋಗುತಿತ್ತು. ಮನೆಯಿಂದ ಹೊತ್ತು ಹೊತ್ತಿಗೆ ಊಟ ತಿಂಡಿಗಳನ್ನು ಅಕ್ಕ ತರುತಿದ್ದಳು. ಅವನನ್ನು ತಾಯಿಗಿಂತ ಹೆಚ್ಚಾಗಿ ನೋಡಿಕೊಳ್ಳುತಿದ್ದಳು.

ಕೃಷ್ಣಪ್ಪ ಎರಡು ದಿನಗಳಿಗೆ ಒಮ್ಮೆ ಎಂಬಂತೆ ಬರುತಿದ್ದ. ಅನಂತನ ಹಾಸುಗೆಯ ಮಗ್ಗುಲಲ್ಲಿ ಕುಳಿತು ನೂರಾರು ಹಾಸ್ಯ ಚಟಾಕಿಗಳನ್ನು ಸಿಡಿಯುತಿದ್ದ. ಅವನ ಮನಸ್ಸಿಗೆ ಹಿತವೆನಿಸುತಿತ್ತು.

ಎರಡು ದಿನಗಳಿಗೆ ಒಂದೆಂಬಂತೆ ಇಂಜಕ್ಷನ್ ನಡೆಯುತಿತ್ತು. ಸೂಜಿ ಚುಚ್ಚುವ ವೇಳೆ ಸ್ವಲ್ಪ ನೋವೆನಿಸುತಿದ್ದುದು ನಿಜ. ಬಳಿಕ ಹಾಗೇನಿಲ್ಲ. ಮಲಗಿಕೊಂಡಲ್ಲಿಂದ ತನ್ನ ಕೈ ಬೆರಳುಗಳನ್ನು ಕಾಣುತ್ತಾನೆ. ತಾನು ಚಿತ್ರಗಾರ ಎಂಬ ಹೆಮ್ಮೆ ಮೂಡುತ್ತದೆ. ಇದರೆಡೆಯಲ್ಲಿ ಕಾಮತರಿಂದ ಐವತ್ತು ರೂಪಾಯಿಗಳನ್ನು ತರಿಸಿ, ಅಕ್ಕನಲ್ಲಿ ಕೊಟ್ಟಿದ್ದ. ಅವಳು ಬೇಡವೆಂದು ಕಣ್ಣೀರು ಸುರಿಸಿ ಹೇಳಿದ್ದಳು

'ನೀನು ಈ ಹಣ ತೆಗೆದುಕೊಳ್ಳದಿದ್ದರೆ, ನಾನಿಲ್ಲಿ ಇರುವುದೇ ಇಲ್ಲ", ಎಂದು ಗದರಿಸಿದ್ದ ಅಕ್ಕ ಉಪಾಯವಿಲ್ಲದೆ ಹಣ ತೆಗೆದುಕೊಂಡಿದ್ದಳು.

ಡಾಕ್ಟರರ ಚಿಕಿತ್ಸಾಲಯಕ್ಕೆ ಸೇರಿ ಹದಿನೈದು ದಿನಗಳು ಕಳೆದುವು. ಅಲ್ಲಿಯ ಕೋಣೆಯ ಸ್ವಚ್ಛತೆ, ಡೆಟ್ಟೋಲಿನ ಪರಿಮಳ ಡಾಕ್ಟರರ ಸಿಹಿಮಾತು—ಅನಂತನ ಮೈಯಲ್ಲಿ ಮಾಂಸ ತುಂಬಿದ್ದುವು. ಅದಕ್ಕೆ ಸರಿಯಾಗಿ ಸಾಕಷ್ಟು ಹಣ್ಣು ಹಂಪಲುಗಳನ್ನು ಭಾವ ತಂದೀಯುತಿದ್ದರು.

ತನ್ನ ಮನೆಯ ಕೋಣೆಯಿಂದ ಹೊರ ಕಂಡಾಗ ಕಾಣುವ ದೃಶ್ಯಕ್ಕಿಂತ ಭಿನ್ನವಾದ ನೋಟ ಅನಂತನ ಕಣ್ಣಿಗೆ ಬಿದ್ದಿತು. ಚಿಕಿತ್ಸಾ

ಲಯದ ಹಿಂಗಡೆಯಲ್ಲಿ ನಾಲ್ಕಾರು ಬಡ ಕುಟುಂಬಗಳಿದ್ದುವು. ಇದಿಷ್ಟು ಸಮೀಪದಲ್ಲಿ ಡಾಕ್ಟರರು ಇದ್ದಿದ್ದರೂ ಆ ಮಕ್ಕಳಿಗೆ ಅನಾರೋಗ್ಯವೇ. ಅವರು ಎಳೆಯ ಪ್ರಾಯದ ಡಾಕ್ಟರರು. ಆದರೆ ಕೈ ಚಾಚುವುದು ದೊಡ್ಡ ಗಂಟಿಗೆಯೇ.

ಕಿಟಕಿಯ ಹೊರ ನೋಡುತ್ತಾ ಕುಳಿತಿದ್ದ ಅನಂತ.

'ಈಗ ಹೇಗಿದ್ದೀರಿ?'

ಹಿಂತಿರುಗಿ ಕಂಡ, ಲಕ್ಷ್ಮಿ ನಿಂತಿದ್ದಳು.

'ಬನ್ನಿ, ಬನ್ನಿ, ಕುಳಿತುಕೊಳ್ಳಿ,' ಎಂದು ಮಂಚದ ತಲೆಯ ಬಳಿ ಇದ್ದ ಸ್ಟೂಲನ್ನು ಮುಂದೂಡುತ್ತಾ ಹೇಳಿದ, ಲಕ್ಷ್ಮಿ ಸಂಕೋಚದಿಂದ ಕುಳಿತಿಗಲಾರದೇ ಅಲ್ಲೇ ನಿಂತಿದ್ದಳು. ಕೋಣೆಯ ಇನ್ನೊಬ್ಬ ರೋಗಿ ಲಕ್ಷ್ಮಿಯನ್ನು ಕಾಣುತಿದ್ದ. ತಾನು ತಂದಿದ್ದ ಎರಡು ಮುಸುಂಬಿಗಳನ್ನು ಹಾಸುಗೆಯ ಮೇಲಿಟ್ಟಳು. ಅವಳ ಕೈಯ ಚಲನೆ ಲಾಸ್ಯಪೂರ್ಣವಾಗಿ ಕಂಡಿತು ಅನಂತನಿಗೆ.

'ನಿಮಗೆ ಇದನ್ನು ತರಲು ಯಾರು ಹೇಳಿದರು?'

'ಹೇಳದೆ ತರಬಾರದೇ?'

'ಹೌದು, ನಾನು ಹೇಳದೆ ತರಲೇ ಬಾರದು. ನಿಮ್ಮೆಲ್ಲ ನಡವಳಿಕೆ ನನಗೆ ಅರ್ಥವಾಗುವುದಿಲ್ಲ. ಆ ಕಡೆಯಿಂದ ಕಿಟ್ಟು ಬಂದು ಒಂದಷ್ಟು ಮುಸುಂಬಿ ತರುವುದು, ಈ ಕಡೆಯಿಂದ ಭಾವ—ಈಗ ನೀವು. ಇದನ್ನೆಲ್ಲಾ ತಿನ್ನುವ ಬಾಯಿ ಇರುವುದು ಒಂದೇ—ಕರಗುವ ಹೊಟ್ಟೆ ಇರುವುದೂ ಒಂದೇ ಎಂದು ತಿಳಿದಿಲ್ಲವೇ?'

'ಈಗ ಚೆನ್ನಾಗಿ ತಿನ್ನಬೇಕಂತೆ.'

'ಯಾರು ಹೇಳಿದ್ದು?'

'ಕಂಪೌಂಡರ್.'

ಅಲ್ಲಿನ ಕಂಪೌಂಡರಿನ ನೆನಪಾಯಿತು ಅನಂತನಿಗೆ. ಸಾಧಾರಣ ತನ್ನಷ್ಟೇ ಪ್ರಾಯದ ವ್ಯಕ್ತಿ. ಉತ್ತಮ ಉಡುಪನ್ನು ಧರಿಸಿಕೊಂಡು, ಕೆಲಸವಿಲ್ಲದಾಗ ಏನನ್ನಾದರೂ ಓದುವ ಅಭ್ಯಾಸ ಉಳ್ಳಾತ. ಡಾಕ್ಟರರು ಇಲ್ಲದ ವೇಳೆ ಎಷ್ಟೋ ಜನರು ಇವನನ್ನೇ ಡಾಕ್ಟರ್ ಎಂದು ತಿಳಿದುದಿತ್ತು.

'ಡಾಕ್ಟರ್ ಎಂದರೆ ಕಂಪೌಂಡರ್ ಅಲ್ಲ.'

'ಸಣ್ಣ ಡಾಕ್ಟರರು.'

ಅಷ್ಟು ಹೊತ್ತಿಗೆ ಸರಿಯಾಗಿ ಕಂಪೌಂಡರ್ ಅಲ್ಲಿಗೆ ಬಂದ. ಆತ ತೊಟ್ಟುಕೊಂಡಿದ್ದ ಸಿಲ್ಕ್ ಶರ್ವಾಣಿ, ಬಿಳಿ ಬಿಳಿ ಪ್ಯಾಜಾಮು—ಆತನಲ್ಲಿ ವಿಶೇಷತೆ ಹುಟ್ಟಿಸುವಂತಿತ್ತು. ಲಕ್ಷ್ಮಿಗೆ ಆತ ಪೂರ್ವಪರಿಚಿತನಂತೆ ನಕ್ಕ.

'ಇವರು ನಿಮಗೆ ಪರಿಚಿತರೋ?' ಎಂದು ಅನಂತನತ್ತ ಬೊಟ್ಟು ಮಾಡಿ ಲಕ್ಷ್ಮಿಯೊಡನೆ ಕೇಳಿದ. ಲಕ್ಷ್ಮಿ ತಲೆದೂಗಿದಳು. ತುಂಬಿದ ಕಣ್ಣುಗಳಿಂದ ಆತ ಲಕ್ಷ್ಮಿಯನ್ನು ನೋಡುತ್ತಾ ಹೇಳತೊಡಗಿದ.

"ಯಾವಾಗಲೂ ಕಿಟಕಿಯ ಹೊರಗೆ ನೋಡುತ್ತಾ ಕುಳಿತಿರುತ್ತಾರೆ. ಏನೋ ಯೋಚನೆಗಳಿರಬೇಕು. ಆದರೂ ಈಗ ಮುಂಚಿಗಿಂತ ವಾಸಿಯಾಗಿದ್ದಾರೆ" ಲಕ್ಷ್ಮಿ ಅನಂತನನ್ನು ಕಂಡು ಕಿರುನಗು ನಕ್ಕಳು ಕಂಪೌಂಡರ್ ಇನ್ನೊಬ್ಬ ರೋಗಿಯ ಬಳಿ ತೆರಳಿ, ವಿಚಾರಣೆ ನಡೆಸಿ, ಲಕ್ಷ್ಮಿಯನ್ನು ಮತ್ತೊಮ್ಮೆ ಕಣ್ತುಂಬಾ ಕಂಡು ಹೊರಹೋದ.

"ನಮ್ಮ ಮನೆಯ ಹತ್ತಿರವೇ ಇವರ ಮನೆ" ಎಂದಳು ಲಕ್ಷ್ಮಿ. ಅನಂತ ಲಕ್ಷ್ಮಿ ತಂದಿದ್ದ ಮುಸುಂಬಿಯನ್ನು ಒಳಗಿಟ್ಟು, ಅಲ್ಲೇ ಇದ್ದ ಬೇರೆ ನಾಲ್ಕು ಮುಸುಂಬಿಗಳನ್ನು ಒಂದು ಕಾಗದದಲ್ಲಿ ಕಟ್ಟಿ ಆಕೆಯ ಬಳಿ ಚಾಚಿದ.

"ನಾನು ತಂದದ್ದು ನಿಮಗೆಂದು."

"ನಾನು ಕೊಡುವುದು ನಿಮ್ಮ ಮಗುವಿಗೆಂದು"

ಲಕ್ಷ್ಮಿಗೆ ಕಸಿವಿಸಿಯಾಯಿತು. ಮಾತನಾಡದೆ ಆ ಕಟ್ಟನ್ನು ಕೈಗೆತ್ತಿಕೊಂಡು, ಹೋಗಿಬರುತ್ತೇನೆಂದು ನುಡಿದು ಹೊರತೆರಳಿದಳು. ಅನಂತ ಅವಳ ಹಿಂದಿನಿಂದಲೇ ಹೊರಟ. ಆತ ರೋಗಿಯಾಗಿದ್ದರೂ ಸ್ವಲ್ಪ ನಡೆಯುವಷ್ಟು ಸ್ವಾತಂತ್ರ್ಯ ದೊರಕಿಸಿಕೊಂಡಿದ್ದ ಆಕೆ ಚಿಕಿತ್ಸಾಲಯದ ಮೆಟ್ಟಲು ಇಳಿಯುವಾಗ ಕಂಪೌಂಡರ್ ಬಂದ.

"ನಾಳೆ ಬರುತ್ತೀರಾ?" ಎಂದು ಕಂಪೌಂಡರ್ ಕೇಳಿದ. ಅನಂತ

ನಿಗೆ ಆ ಮಾತು ರುಚಿಸಲಿಲ್ಲ. ಲಕ್ಷ್ಮಿಗೆ ಅದು ತಿಳಿಯಿತು. ನಿರುತ್ತರಳಾಗಿ ಮುಂದರಿದಳು.

— ೪೫ —

ಅನಂತನಿಗೆ ಮೋಜೆನಿಸಿತು. ಅಕ್ಕನೊಡನೆ ಯಮುನ ಬಂದಿದ್ದಳು—ಎಂದಿಗಿಂತ ಹೆಚ್ಚಿನ ಸಂಭ್ರಮದಿಂದ. ಲಕ್ಷ್ಮಿ ಬಂದುದು ಹಿತವೆನಿಸಿತ್ತು. ಆದರೆ ಯಮುನನ ಬರುವಿಕೆಯನ್ನು ಆತ ನಿರೀಕ್ಷಿಸಿರಲಿಲ್ಲ. ಮೇಲಿನಿಂದ ಅಸಮಾಧಾನ ತೋರದೆ ಬಾಯಿ ಮಾತಿನ ಉಪಚಾರಕ್ಕೆ ತೊಡಗಿದ. ಅಂದಿನ ತಮ್ಮಿಬ್ಬರ ತಿರುಗಾಟದ ಪರಿಣಾಮ ಇದಿಷ್ಟು ಉದ್ದಕ್ಕೆ ಹರಿದೀತೆಂದು ಆತ ಕಲ್ಪಿಸಿರಲಿಲ್ಲ.

"ನಿಮ್ಮ ಕೋಣೆಗಿಂತ ಇಲ್ಲಿ ಶುಚಿಯಾಗಿದೆ" ಎಂದು ಒಳ ಬಂದವಳೇ ನುಡಿದಳು. ಅವಳ ಮನೋಸ್ಥಿತಿಯ ಪೂರ್ವಪರಿಚಿತಿ ಇದ್ದ ಅನಂತ ಆ ಮಾತಿಗಾಗಿ ನೊಂದುಕೊಳ್ಳಲಿಲ್ಲ. ಬದಲಾಗಿ ಅವಳನ್ನು ಕುಳಿತಿರಲು ಹೇಳಿದ.

"ನನ್ನ ಕೋಣೆಯಲ್ಲಿ ನೂರಾರು ಬಣ್ಣಗಳಿವೆ. ಇಲ್ಲಿ ನೂರಾರು ಮದ್ದುಗಳ ವಾಸನೆ ಇದೆ.ಅಷ್ಟೇ ಭೇದ" ಎಂದ. ಆವನಕ್ಕ ಹಾಲನ್ನು ಬಟ್ಟಿಗೆ ಹಾಕಿ ಇತ್ತಳು. ಔಪಚಾರಿಕವಾಗಿ ಯಮುನನ ಬಳಿ ಅಪ್ಪಣೆ ಕೇಳಿ ಹಾಲು ಕುಡಿದ. ಅವನ ಹಾಸುಗೆ ಮುಟ್ಟಿ ಕಂಡಳು ಯಮುನ.

"ಇದು ಬಸ್ಸಿನ ಸೀಟಿನ ಹಾಗಿದೆ" ಎಂದಳು.

"ಇದೇ ಇಡಿಯ ಚಿಕಿತ್ಸಾಲಯವೇ ಒಂದು ಬಸ್ಸು. ನಾವೆಲ್ಲಾ ಆದರಲ್ಲಿ ಪ್ರಯಾಣಿಕರಷ್ಟೇ" ಎಂದ ಅನಂತ.

"ಇಳಿಯುವ ವೇಳೆ ಕೆಲವರು ತಮ್ಮ ಜೀವವನ್ನು ಇಲ್ಲಿಯೇ ಮರೆತು ಬಿಡುವುದೂ ಇದೆ" ಎಂದು ಮರುಮಂಚದಲ್ಲಿ ಮಲಗಿದ್ದ ಮುದುಕ ಮಾರ್ದನಿಸಿದ. ಅವನ ಹಾಸ್ಯ ಖೇದಪೂರ್ಣವಾಗಿದ್ದರೂ ಶುಚಿಯಾಗಿತ್ತು. ಹಾಗಾಗಿ ಎಲ್ಲರೂ ನಕ್ಕರು.

"ನಿಮಗೆ ಬೇಗನೇ ಗುಣವಾಗಬೇಕೆಂದು ನನ್ನ ಆಸೆ.'

"ಏಕೆ—ಮೈದಾನಿಗೆ ತಿರುಗಾಡಲು ಹೋಗಲೇ?"

"ಅದಕ್ಕೂ ಹೌದು, ಮತ್ತು ನನ್ನದೊಂದು ಚಿತ್ರ ಬರೆಸಬೇಕು– ಅದಕ್ಕೂ ಹೌದು. ನಾನು ತುಂಬಾ ಸ್ವಾರ್ಥಿ ಅಲ್ಲವೆ?" ಎಂದು ಕೊರಳು ಕೊಂಕಿಸಿ, ಕಡೆಗಣ್ಣ ನೋಟ ಹಾಯಿಸಿ, ಹಾಸುಗೆಯ ಮೇಲೆ ಕೈ ಎಳೆಯುತ್ತಾ ಹೇಳಿದಳು. ಇವಳು ಇಲ್ಲಿಗೆ ಬಂದಳೇಕಪ್ಪಾ ಎಂದು ಅನಂತನ ಅಕ್ಕನಿಗೆ ಅನಿಸಿತು. ಅನಂತನ ಮನಸ್ಸಿನ ನೆಮ್ಮದಿ ಕೆಡಿಸಲು ಇದಿಷ್ಟು ಚಿಕ್ಕ ಪುಟ್ಟ ಕಾರಣಗಳೇ ಸಾಕೆಂದು ಆವಳಿಗೆ ಗೊತ್ತು

'ಇನ್ನು ಹೋಗುವಾ, ಆಗದೇನಮ್ಮಾ?' ಎಂದು ಯಮುನನ ಬಳಿ ಕೇಳಿದಳು. ಯಮುನ ಕಿಟಕಿಯಿಂದ ಹೊರಕಂಡಳು. ಸಮಯವಾಗಿರಲಿಲ್ಲ. ಮುಸ್ಸಂಜೆಯ ಹೊರತು ಮನೆ ಸೇರುವುದು ಅವಳಿಗೆ ಹಿತವೆನಿಸಲಿಲ್ಲ.

'ಇನ್ನೂ ಕತ್ತಲೆಯಾಗಿಲ್ಲ. ಇಷ್ಟು ಬೇಗ ಮನೆಗೆ ಹೋಗಿ ಮಾಡುವುದಾದರೂ ಏನು?' ಎಂದಳು ಯಮುನಾ. ಅನಂತನ ಅಕ್ಕನಿಗೆ ಅವಳ ಮಾತನ್ನು ಸಹಿಸಲಾಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಸಿಟ್ಟು ತೋರುವುದು ಅಶಕ್ಯವಾಗಿತ್ತು. ಹಾಗಾಗಿ ವಿಷಾದಪೂರ್ಣ ನೆಗೆಯಾಡಿದಳು.

'ನಾನು ಹೋಗುತ್ತೇನೆ. ನೀವು ಬೇಕಾದರೆ ಕತ್ತಲಾಗುವ ತನಕ ಇಲ್ಲೇ ಕುಳಿತಿರಿ. ನನ್ನಿಂದೇನೂ ಅಭ್ಯಂತರವಿಲ್ಲ,' ಎಂದೆನ್ನುತ್ತಾ ಅನಂತನ ಅಕ್ಕ ಲೋಟಿ, ಥರ್ಮಾಸ್‌ಗಳನ್ನು ಚೀಲಕ್ಕೆ ತುಂಬಿ ಹೊರಟಳು. ಸ್ವಲ್ಪ ಸಮಯದಲ್ಲಿ ಕಂಪೌಂಡರ ಬಂದ. ಅನಂತನಲ್ಲಿಗೆ ಕೆಲವು ಹೆಂಗಸರು, ಸಂಬಂಧಿಕರು ಅಲ್ಲದವರು ಬಂದು ಹೋಗುವುದು ಆತನಿಗೆ ಆಶ್ಚರ್ಯಕರವಾಗಿ ಕಂಡಿತ್ತು. ಕೆಲವೊಮ್ಮೆ ಕುಚೋದ್ಯವಾಗಿಯೂ ಕಾಣಿಸಿತ್ತು. ಯಮುನನನ್ನು ಕಂಡು ನಗೆಯಾಡಿದ. ಆಕೆ ಸಿಟ್ಟಿನ ಮೊಗದಿಂದ ಅವನನ್ನು ಕಂಡಳು. ಕಂಪೌಂಡರ್ ಮೆಲ್ಲನೆ ಆ ಕಡೆ ಸಾಗಿದ.

'ನಿನ್ನೆ ನಾನು ಒಂದು ಪುಸ್ತಕ ಓದಿದ್ದೆ. ಬಹಳ ಚೆನ್ನಾಗಿತ್ತು. ನಿಮಗೆ ಓದಬೇಕೆಂದು ಅನಿಸುತ್ತದೋ?' ಎಂದು ಕೇಳಿದಳು

'ನಾನು ಓದುವುದರಲ್ಲಿ ಹಿಂದೆ. ಆದರೂ ಇಲ್ಲಿ ಡಾಕ್ಟರೇ ಓದಲು

ಬಿಡುವುದಿಲ್ಲ. ಸಂಪೂರ್ಣ ವಿಶ್ರಾಂತಿ ಪಡೆಯಬೇಕೆಂದು ಹೇಳಿದ್ದಾರೆ. ಹಾಗಾಗಿ ಓದಲಾಗುವುದಿಲ್ಲ. ಕ್ಷಮಿಸಿ.'

'ಇಲ್ಲಿ ಇರಲು ನಿಮಗೆ ಬೇಸರವಾಗುವುದಿಲ್ಲವೇ?'

'ಆಗುತ್ತದೆ, ಆದರೆ ತಾಳಬೇಕು.'

'ತಿರುಗಾಡಿಕೊಂಡು ಬರಲು ಬಿಡುವುದಿಲ್ಲವೇ?'

ಅಷ್ಟರಲ್ಲಿ ಸಂಜೆಯ ಹೊತ್ತಿನ ಸಂದರ್ಶನಕ್ಕೆಂದು ಹೊರಟಿದ್ದ ಡಾಕ್ಟರರು ಆ ಕಡೆ ಬಂದರು. ಅನಂತ ಕೈಸನ್ನೆಯಿಂದ 'ಅವರಲ್ಲಿ ಕೇಳು,' ಎಂದು ಯಮುನನಿಗೆ ಸೂಚಿಸಿದ. ಆಕೆಗೆ ಸಂಕೋಚವಿಲ್ಲವೆಂದು ಗೊತ್ತು, ಅವರು ಒಳಬಂದರು. ಯಮುನ ಎದ್ದು ನಿಂತಳು. ಡಾಕ್ಟರರು ನಗುತ್ತಾ ಮೊದಲು ಮುದುಕನನ್ನು ಪರೀಕ್ಷಿಸಿದರು. ನರ್ಸಿನ ಬಳಿ ಏನೋ ಹೇಳಿದರು. ಬಳಿಕ ಅನಂತನ ಬಳಿ ಬಂದು ಪರೀಕ್ಷಿಸತೊಡಗಿದರು.

'ಇವರಿಗೆ ಇಲ್ಲಿ ಇರಲು ಬೇಸರವಾಗುತ್ತದಂತೆ ಡಾಕ್ಟರರೇ ತಿರುಗಾಡಿಕೊಂಡು ಬರಬಹುದೇ?' ಎಂದು ಯಮುನ ಕೇಳಿದಳು. ಡಾಕ್ಟರರು ನಗುತ್ತಾ ಆಕೆಯನ್ನು ಕಂಡು, ತನ್ನ ಪರೀಕ್ಷೆ ಮುಂದರಿಸಿದರು. ಅವರ ಬಳಿ ಇದ್ದ ನರ್ಸ್ ಯಮುನನನ್ನು ಕಣ್ಣು ಬಾಯಿ ಬಿಟ್ಟು ನೋಡುತಿದ್ದಳು.

'ಏನು? ಏನು ಕೇಳಿದಿರಿ?' ಎಂದು ಪರೀಕ್ಷೆಯನ್ನು ಮುಗಿಸಿದ ಬಳಿಕ ಯಮುನನತ್ತ ತಿರುಗಿ ಕೇಳಿದರು ಡಾಕ್ಟರರು. ಮಂಚದ ಅಂಚನ್ನು ಕೈಯಿಂದ ಸವರುತ್ತಾ ಯಮುನ ಹಿಂದಿನಂತೆ ಹೇಳಿದಳು. ಡಾಕ್ಟರರು ಬಾಯಿ ತುಂಬಾ ನಕ್ಕರು.

'ಹಾಗೆಲ್ಲಾ ತಿರುಗಾಡಲು ಹೋಗಬಹುದಾಗಿದ್ದರೆ, ಅವರು ಇಲ್ಲೇಕೆ ಇರಬೇಕಿತ್ತು? ಅವರ ಮನೆಯಲ್ಲಿಯೇ ಇರಬಹುದಿತ್ತಲ್ಲಾ,' ಎಂದರು.

"ತಿರುಗಾಟ ಬೇಡ, ಪುಸ್ತಕ ಓದಬಹುದೇ?"

"ನೋಡಿ, ನಿಮಗಿನ್ನೂ ಅವರ ಅನಾರೋಗ್ಯದ ಪರಿಚಯ ಇಲ್ಲ

ವೆಂದು ಕಾಣುತ್ತದೆ. ಇಂತಹ ರೋಗಕ್ಕೆ ವಿಶ್ರಾಂತಿಯೇ ಔಷಧಿ; ಇನ್ನು ಪುಸ್ತಕ ಓದಿದರೆ ಹೇಗೆ?"

"ನನಗೊಮ್ಮೆ ಮೈ ಚೆನ್ನಾಗಿಲ್ಲದಾಗ ಡಾಕ್ಟರರು ಪುಸ್ತಕ ಓದಲು ಹೇಳಿದ್ದರು. ನಾನು ದಿನಕ್ಕೆ ಎರಡೆರಡು ಪುಸ್ತಕ ಓದುತಿದ್ದೆ"

"ನಿಮ್ಮ ಅಸೌಖ್ಯ ಬೇರೆ ರೀತಿಯದಿರಬಹುದು."

ಯಮುನಾ ಮಾತು ಮುಂದರಿಸಲಿದ್ದಾಳೆ ಎಂದು ಅನಂತನಿಗೆ ತಿಳಿಯಿತು. ಹಾಗಾಗಿ ಕಣ್ಸನ್ನೆಯಿಂದ ಮಾತು ಬೇಡ ಎಂದು ಸೂಚಿಸಿದ. ಡಾಕ್ಟರ್ ನಗುತ್ತಾ ಹೊರ ತೆರಳಿದರು. ಯಮುನ ಬಂದು ಇದಿಷ್ಟು ಘಟನೆಗಳು ಜರಗಿದುದು ಅನಂತನಿಗೆ ಹಿತವೆನಿಸಿತು. ದಿನವೂ ಬರುತಿದ್ದ ಅಕ್ಕ—ಒಂದೇ ಧಾಟಿಯಲ್ಲಿ ಮಾತನಾಡುತಿದ್ದ ಭಾವ—ಇವರೆಲ್ಲರಕ್ಕಿಂತ ಯಮುನನ ಮಾತು ಜೀವ ತುಂಬಿಕೊಂಡಿದ್ದಂತೆ ಕಂಡಿತು.

"ಡಾಕ್ಟರ್ ಏನು ಹೇಳಿದರು?"

"ನೀವೇ ಕೇಳಲಿಲ್ಲವೇ?"

"ಅವರು ಕೊನೆಗೆ ಹೇಳಿದ ಮಾತು ಹೇಗೆ?"

"ಯಾವುದು?"

"ನಿಮಗೆ ಬಂದಿದ್ದ ರೋಗ ಬೇರೆ ಎಂದು," ಎಂದು ಅವಳನ್ನು ಚುಚ್ಚಿ ಮಾತನಾಡಿದ. ಅವನ ಮಾತಿನ ಚುಚ್ಚುವಿಕೆ ಯಮುನನಿಗೆ ತಿಳಿಯದಿರಲಿಲ್ಲ. ಸ್ವಲ್ಪ ಹೊತ್ತು ನೀರವವಾಗಿ ಕಳೆಯಿತು. ಕಂಪೌಂಡರ್ ತಿರುಗಿ ಬಂದ.

"ಅವರೊಡನೆ ಬಹಳ ಹೊತ್ತು ಮಾತನಾಡುವುದು ಒಳ್ಳೇಯದಲ್ಲ. ಅವರಿಗೆ ಸಂಪೂರ್ಣ ವಿಶ್ರಾಂತಿ ಬೇಕು", ಎಂದು ದನಿ ಏರಿಸಿ, ಯಮುನನೊಡನೆ ಹೇಳಿದ. ತನ್ನ ಮೊದಲ ನಗೆಯನ್ನು ಯಮುನ ಒಣಕಲಾಗಿ ಮಾಡಿದ ಉರಿ ಆತನಿಗೆ.

"ನನಗಷ್ಟು ಗೊತ್ತು,"

ಆತ ಅಲ್ಲಿಂದ ಹಿಂತಿರುಗಿದ. ಅವನು ಹೋದ ಹಾದಿಯನ್ನು ನೋಡುತ್ತಾ ನಿಂತಳು ಯಮುನಾ, ಸಿಟ್ಟಿನಿಂದ ಅವಳ ಮೊಗ ಕೆಂಪಾಗಿತ್ತು. ತುಟಿಗಳು ನೂರಾರು ಬಾರಿ ಸ್ಥಾನ ಬದಲಿಸುತಿದ್ದುವು. ಅವಳ

ಕುತ್ತಿಗೆಯಲ್ಲಿ ನಯವಾದ ಬೆವರ ಮುತ್ತುಗಳು ಮೂಡಿ, ಕೆಲವು ಕೂದಲನ್ನು ಅವುಚಿ ಹಿಡಿದಿದ್ದುವು. ಪ್ರಕೃತಿಯಲ್ಲಿ ಸೊಗಸಾದ ಇಂತಹ ಅದೆಷ್ಟು ಚಿಕ್ಕ ಪುಟ್ಟ ರಸಮಯ ನೋಟಗಳಿರುತ್ತವೆಯೋ—ಎಂದು ಅನಂತನಿಗೆ ಅನಿಸಿತು.

ಸ್ವಲ್ಪ ಹೊತ್ತಲ್ಲಿ ಯಮುನ ಶಾಂತವಾದಳು. ಅನಂತನನ್ನು ಕಂಡಳು. ಆಗಷ್ಟೇ ತನ್ನ ಹಣೆಯಲ್ಲಿ ಮೂಡಿದ್ದ ಬೆವರ ಹನಿಗಳನ್ನು ಒರೆಸಲೆಂದು ಆತ ಟವೆಲ್ ಹುಡುಕು ತಿದ್ದುದನ್ನು ಕಂಡು, ತಾನು ಸೊಳ್ಳೆ ಪರದೆಯ ಮೇಲೆ ಜೋತಾಡುತಿದ್ದ ಟವೆಲನ್ನು ತೆಗೆದು ಅವನ ಕೈಗಿತ್ತಳು. ಅನಂತ ನಯವಾಗಿ ಥ್ಯಾಂಕ್ಸ್ ಎಂದ.

'ನಾನಿನ್ನು ಹೋಗಲೇ?'

'ಇನ್ನೂ ಕತ್ತಲಾಗಿಲ್ಲವಲ್ಲಾ.'

'ಇಲ್ಲಿ ಕುಳಿತು ಮಾಡುವುದಾದರೂ ಏನು?'

'ಒಂದು ಹಾಡು ಹೇಳಿ.'

ಅನಂತನ ಬಾಯಿಯಿಂದ ಕೇಳಬಾರದ ಕೇಳಿಕೆ ಹೊರಟಿತು. ಹಾಸ್ಯಕ್ಕೆಂದು ಆತ ಹೇಳಿದುದು. ಯಮುನ ಅವನ ಸೂಚನೆಗೆ ಅನುಮೋದನೆ ಸೂಚಿಸಿ, ಹಾಡಲೆಂದು ಕಂಠ ಸರಿಮಾಡಿಕೊಳ್ಳ ತೊಡಗಿದಳು.

ಅಷ್ಟರಲ್ಲಿ ಕೃಷ್ಣಪ್ಪ ಬಂದ. ಬದುಕಿತು ಜೀವ ಎಂದೆಣಿಸಿಕೊಂಡ ಅನಂತ, ನಮಸ್ಕಾರಗಳೊಡನೆ ಯಮುನನನ್ನು ಬೀಳ್ಕೊಟ್ಟ.

— ೨೬ —

ಲಕ್ಷ್ಮಿಯ ಬರವನ್ನು ಅನಂತ ಆಗೊಮ್ಮೆ ಈಗೊಮ್ಮೆ ಹಾರೈಸುತಿದ್ದ. ಹಾಗೆಂದು ತನ್ನಕ್ಕ ಆಕೆಯನ್ನು ನೋಡಬಾರದು ಎಂಬ ಆಶಯವೂ ಇದ್ದಿತ್ತು. ಅನಂತ ಚಿಕಿತ್ಸಾಲಯದಲ್ಲಿದ್ದ ಎರಡು ತಿಂಗಳಲ್ಲಿ ಲಕ್ಷ್ಮಿ ಅಲ್ಲಿಗೆ ತೆರಳಿದುದು ಮೂರು ಬಾರಿ ಮಾತ್ರ. ಎರಡನೆಯ ಬಾರಿ ಆಕೆ ಅಲ್ಲಿಗೆ ತೆರಳಿದ್ದಾಗ ತನ್ನ ಜೀವನದ ಒಂದು ಕಹಿ ಘಟನೆಯನ್ನು ಅನಂತನಲ್ಲಿ ಹೇಳ ಬೇಕಾಯಿತು.

ಅಂದು ಬೆಳಗ್ಗೆ ಹತ್ತರ ಸಮಯ. ಅನಂತ ಎಂದಿನಂತೆ ಕಿಟಕಿಯ ಮೂಲಕ ಕಾಣಿಸುತಿದ್ದ ಬಡಗುಡಿಸಲುಗಳನ್ನು ಕಾಣುತಿದ್ದ. ಇಬ್ಬರು ಮಕ್ಕಳು ಜಗಳವಾಡುತಿದ್ದರು. ಚಿಕ್ಕ ಮಗುವನ್ನು ದೊಡ್ಡ ಮಗು ಕೆಳದೂಡಿತು. ಗದ್ದಲವಾಯಿತು. ಮಗು ಅರಚಿತು. ತಾಯಿ ಹೊರಬಂದಳು. ಇಬ್ಬರಿಗೂ ಎರಡೆರಡು ಏಟುಕೊಟ್ಟಳು. ಕೆಳ ಬಿದ್ದಿದ್ದ ಮಗುವಿನ ಮೊಣಗಂಟೆನಿಂದ ಸ್ವಲ್ಪ ರಕ್ತ ಬರುತಿತ್ತು. ಅದನು ತನ್ನ ಸೀರೆಯ ಸೆರಗಿನಿಂದ ಒರಸಿದಳು.

ಆಗ ಲಕ್ಷ್ಮಿ ಒಳಬಂದುದು.

ಲಕ್ಷ್ಮಿ ತನ್ನ ಬಟ್ಟೆಬರೆಗಳ ಓರಣೆಯ ಕುರಿತು ಹೆಚ್ಚಿನ ಗಮನ ಇರುವಾಕೆ. ಅಂದೇನೋ ಅವಳ ಓರಣತೆಗೆ ಕುಂದು ಬಂದಂತಾಗಿತ್ತು. ತಲೆಗೂದಲ ಮೇಲೆ ಬಾಚಣಿಗೆ ಎಳೆದಿದ್ದಳೆ ವಿನಹ, ಮುಡಿಯನ್ನು ಶೃಂಗರಿಸಿರಲಿಲ್ಲ. ಕಣ್ಣುಗಳು ಕೆಂಪಾಗಿದ್ದುವು. ಅನಂತನಿಗೆ ಬೇಸರ ವೆನಿಸಿತು. ಆತನನ್ನು ಕಂಡೊಡನೆ ಲಕ್ಷ್ಮಿಗೆ ದುಃಖ ಒತ್ತರಿಸಿ ಬಂತು. ಮೆಲ್ಲಗೆ ಮಂಚಕ್ಕೆ ಆತು ನಿಂತಳು. ಅನಂತ ಅವಳನ್ನು ಕುಳಿತಿರಲು ಹೇಳಿದ.

"ನಿನ್ನೆ ರಾತ್ರೆ ನಿದ್ದೆ ಇರಲಿಲ್ಲವೇ?"

"ನಮ್ಮಂಥವರಿಗೆ ನಿದ್ರೆಮಾಡಲು ಸಾಧ್ಯವಿದೆಯೇ?"

"ಎಂದರೆ?"

ಹಿಂದಿನ ದಿನ ರಾತ್ರೆ ನಡೆದ ಕತೆಯನ್ನು ಲಕ್ಷ್ಮಿ ಹೇಳಿದಳು ಯಾರೋ ಪೋಲಿಸ್ ಕೋನ್‌ಸ್ಟೇಬಲ್, ಅವಳ ಮನೆಗೆ ಬಂದಿದ್ದನಂತೆ ಸಂಪೂರ್ಣ ಅಮಲಿನಲ್ಲಿಯೇ ಇದ್ದನಂತೆ. ಒಳಬಂದವನೇ ಈಕೆಯನ್ನು ಹೊರಕರೆದನಂತೆ ಈಗ ಮಗುವನ್ನು ಮಲಗಿಸುತಿದ್ದಳಂತೆ. ಹೊರ ಬರಲು ವಿಳಂಬವಾಯಿತು. ಆತನೇ ಒಳ ತೆರಳಿ ಅವಳನ್ನು ಕಂಡು ಹಿಂಸಿಸಿದನಂತೆ. ಮಾತ್ರವಲ್ಲದೆ ಸುಮ್ಮಗೆ "ಕುಳಿತುಕೋ-ಏಳು" ಎಂದು ನೂರಾರು ಬಾರಿ ಹೇಳಿದನಂತೆ. ಅವನ ತಲೆಗೆ ಏರಿದ್ದ ಅಮಲು ಇಳಿಯುವ ತನಕವೂ ಈಕೆ ಮೂಲೆಯಲ್ಲಿ ಕುಳಿತು ಏಳುತಿದ್ದಳಂತೆ. ತೊಟ್ಟಿಲಲ್ಲಿ ಮಗು ಕೂಗುತಿದ್ದುದು ಅವನಿಗೆ ಕೇಳಿಸಲಿಲ್ಲ. ಬಳಿಕ

ಎಂದಿನಂತೆ ಅವನ ಅಮಲು ತುಂಬಿದ ದೇಹದ ಚಿತ್ರಹಿಂಸೆ ಪಡೆದಿದ್ದಳಂತೆ.

ಅನಂತನಿಗೆ ಸಿಟ್ಟು ಬಂದಿತು. ಅವನ ಮೊಗ ತುಂಬಾ ರಕ್ತ ಹರಿಯದೊಡಗಿತು, ಲಕ್ಷ್ಮಿ ಅಳುತಿದ್ದಳು. ಮಗ್ಗುಲು ಮಂಚದ ಮುದುಕ ನರಳುತಿದ್ದ.

“ಈ ಊರು ಬಿಟ್ಟು ಎಲ್ಲಿಗಾದರೂ ಹೋಗಬೇಕೆಂದಿದೆ” ಎಂದು ಕೊನೆಗೆ ನುಡಿದಳು. ಆಕೆ ಎಲ್ಲಿಗೆ ತೆರಳಿದರೂ ಆಕೆಯ ಯೌವನ ಕಣ್ಣಿಗೆ ಎದ್ದುತೋರುವಷ್ಟು ದಿನ ನೆಮ್ಮದಿ ಇರಲಾರದೆಂದು ಅನಂತನಿಗೆ ಗೊತ್ತು.

“ಯಾವ ಊರಿಗೆ?”

‘‘ದೂರ!’

“ಏಕಾಗಿ?’

“ಈ ಉಪದ್ರಗಳನ್ನು ಸಹಿಸಿರಲು ಸಾಧ್ಯವಿಲ್ಲ.”

“ಅಲ್ಲಿ ತೆರಳಿದರೆ ಉಪದ್ರ ಇರಲಾರದೇ?’

ಅನಂತನ ಪ್ರಶ್ನೆಗೆ ಲಕ್ಷ್ಮಿಯ ಉತ್ತರವಿರಲಿಲ್ಲ. ಕಣ್ಣಂಚಿನಲ್ಲಿ ನಿಂತಿದ್ದ ನೀರನ್ನು ಸೆರಗಿನಿಂದ ಒರಸಿಕೊಂಡಳು. ಬಾಗಿಲ ಬಳಿಯಿಂದ ಕಂಪೌಂಡರ್ ಒಂದೆರಡು ಬಾರಿ ಆ ಈ ಕಡೆಗೆ ಹಾದ.

“ನೋಡಿ, ನಿಮ್ಮ ತಂದೆಯಿಂದ ದುಡಿಯಲು ಸಾಧ್ಯವಿಲ್ಲ. ಗಂಡ ಇದ್ದೂ ಇಲ್ಲದವನಂತಾಗಿದ್ದಾನೆ. ಸಮೀಪದ ಸಂಬಂಧಿಕರು ಇಲ್ಲವೇ?”

“ಸಂಬಂಧಿಕರು ಇದ್ದಾರೆ. ಆದರೆ ನಮಗೆ ಪ್ರವೇಶವಿಲ್ಲ”, ಎಂದಳು ಲಕ್ಷ್ಮಿ. ಅವಳ ದುಃಖವನ್ನು ಹೇಗಾದರೂ ಮಾಡಿ ಹೋಗಲಾಡಿಸಬೇಕೆಂದು ಎಣಿಸಿದ. ಅನಂತ. ತನ್ನ ಅಕ್ಕನಲ್ಲಿ ಕೊಟ್ಟಿದ್ದ ಐವತ್ತು ರೂಪಾಯಿಗಳಲ್ಲಿ ಕೆಲವನ್ನು ಲಕ್ಷ್ಮಿಗೆ ಕೊಡುವುದು ಹಿತವೆನಿಸಿತು. ಅಂದು ಸಂಜೆ ಲಕ್ಷ್ಮಿಯನ್ನು ಬರಲು ಹೇಳಿದ. ಆಕೆ ಅನಂತನನ್ನು ನೋಡಿಕೊಂಡು ಹೋಗಲು ಬಂದಿದ್ದಳೇ ವಿನಹ, ಸಹಾಯ ದೊರಕೀತು ಎಂಬ ಆಶಯದಿಂದಲ್ಲ.

ಮಧ್ಯಾಹ್ನ ಅಕ್ಕ ಊಟ ತಂದಳು. ತನಗೆ ಇಪ್ಪತ್ತು ರೂಪಾಯಿ ಬೇಕೆಂದ. ಅವಳು ಸಂಜೆ ಕಾಫಿಯ ಸಮಯ ತಂದಿತ್ತಳು. ಬಳಿಕ ಲಕ್ಷ್ಮಿ ಬಂದಳು. ಅಷ್ಟರಲ್ಲಿ ಅಕ್ಕ ಹಿಂತಿರುಗಿದ್ದಳು. ಲಕ್ಷ್ಮಿ ಬೆಳಗ್ಗಿನಿಂದ ಬೇರೆಯಾಗಿ ಕಾಣುತಿದ್ದಳು.

"ನಾನೊಂದು ಬಗೆ ನಿಮಗೆ ಕೊಡುತ್ತೇನೆ. ನೀವು ಅದನ್ನು ತೆಗೆದುಕೊಳ್ಳಲೇ ಬೇಕು", ಎಂದ. ಲಕ್ಷ್ಮಿಗೆ ಅನಂತನ ಕೊಡುಗೆಯು ಅರ್ಥವಾಗಲಿಲ್ಲ.

"ನನಗೇನೂ ಬೇಕಿಲ್ಲ ಈಗ."

"ನಿಮಗೆ ಬೇಕೆಂದು ನಾನು ಕೊಡುತ್ತಿಲ್ಲ. ನನಗೆ ಕೊಡಬೇಕು ಅನಿಸಿತು. ನಾನು ಇದು ತನಕ ನಿಮಗೆ ಏನನ್ನೂ ಕೊಟ್ಟಿಲ್ಲ. ನೀವು ತೋರುತ್ತಿರುವ ಪ್ರೀತಿಗೆ ಬದಲಾಗಿ ನಾನೇನನ್ನೂ ಬೇರೆ ಕೊಡುವಂತಿಲ್ಲ."

ಲಕ್ಷ್ಮಿ ಮಾತನಾಡಲಿಲ್ಲ. ಕಿಟಕಿಯ ಹೊರಗಿನ ದೃಶ್ಯವನ್ನು ಶೂನ್ಯವಾಗಿ ನೋಡುತಿದ್ದಳು. ಅನಂತ ಮೆಲ್ಲನೆ ಇಪ್ಪತ್ತು ರೂಪಾಯಿಗಳನ್ನು ಹೊರತೆಗೆದು ಅವಳತ್ತ ಚಾಚಿದ.

"ತೆಗೆದುಕೊಳ್ಳಿ."

ರೂಪಾಯಿಗಳನ್ನು ಕಂಡೊಡನೆ ಲಕ್ಷ್ಮಿ ಸಂಪೂರ್ಣ ಅತ್ತುಬಿಟ್ಟಳು. ಅನಂತನಿಗೂ ಬೇಸರವಾಯಿತು. ತನ್ನ ಬೇಸರಿಕೆಯು ಆಕೆಗೆ ತಿಳಿದರೆ ಕೊಡುಗೆಯು ಸ್ವೀಕೃತವಾಗಲಾರದು ಎಂದು ಅನಿಸಿತು. ಹಾಗಾಗಿ ದುಃಖವನ್ನು ತಡೆದಿರಿಸಿದ.

"ನೀವು ತೆಗೆದುಕೊಳ್ಳಲೇ ಬೇಕು."

ಲಕ್ಷ್ಮಿ ತೆಗೆದುಕೊಂಡಳು. ಆಗಷ್ಟೇ ಬಾಗಿಲಿನಿಂದ ಹಾದು ಹೋಗುತಿದ್ದ ಕಂಪೌಂಡರ್ ಅದನ್ನು ಕಂಡ. ಅವನ ಮೊಗದಲ್ಲಿ ಕಹಿ ನಗು ಮೂಡಿತು. ಲಕ್ಷ್ಮಿ—ಏಕೋ—ಅನಂತನಿಗೆ ನಮಸ್ಕರಿಸಿದಳು. ಮುಂದೆ ಅಲ್ಲಿ ನಿಲ್ಲಲಾಗಲಿಲ್ಲ—ಎದ್ದು ಹೊರ ಓಡಿದಳು.

ಅನಂತ ಹೊರ ಬಂದು ಕಂಡ. ಕಂಪೌಂಡರ್ ಮುಂಬಾಗಿಲ ಬಳಿ ನಿಂತಿದ್ದು ವ್ಯಂಗ್ಯ ನಗು ನಗುತಿದ್ದ.

— ೪೭ —

ಮರುದಿನ ಅಕ್ಕ ಬಂದಾಗ ಪ್ರಶ್ನಾತ್ಮಕ ದೃಷ್ಟಿಯಿಂದ ಕಂಡಳು. ಅನಂತ ತನ್ನಿಂದ ತೆಗೆದುಕೊಂಡಿದ್ದ ಇಪ್ಪತ್ತು ರೂಪಾಯಿಗಳನ್ನು ಯಾವುದಕ್ಕಾದರೂ ವೆಚ್ಚ ಮಾಡಿರಬಹುದು ಎಂಬುದು ಅವಳ ಭಾವನೆ ಯಾಗಿತ್ತು. ಆದರೆ ಚಿಕಿತ್ಸಾಲಯದ ಮೆಟ್ಟಲೇರುವ ಸಮಯ ಕಂಪೌಂಡರ್ ಹೇಳಿದ್ದ ಮಾತಿನಿಂದ ಸತ್ಯತೆ ತಿಳಿದಿತ್ತು—ಅನಂತ ಯಾವುದೋ ಕೆಟ್ಟ ನಡತೆಯ ಹೆಂಗುಸಿಗೆ ರೂಪಾಯಿ ಕೊಟ್ಟಿರುವ ನೆಂದು. ಲಕ್ಷ್ಮಿಯ ಮೇಲೆ ಕಂಪೌಂಡರನಿಗೆ ಏನು ದ್ವೇಷವೋ?

ಅಕ್ಕನ ಮೊಗವನ್ನು ಕಂಡಾಗಲೇ ವಿಷಯದ ಅರ್ಥವಾಯಿತು. ಕಂಪೌಂಡರ್ ಮೇಲೆ ಎಲ್ಲಿಲ್ಲದ ಸಿಟ್ಟು ಬಂದಿತು. ಆತನೂ ಲಕ್ಷ್ಮಿ ಯನ್ನು ತಿಳಿದವ—ಅವಳ ನೆರೆಯಾತ. ತಾನು ಮಾಡಿದ ಸಹಾಯ ಅವನಿಗೆ ಸಮರ್ಪಕವಾಗಿ ಕಾಣಿಸುವ ಬದಲು ಅಸಮರ್ಪಕವಾಗಿ ಕಂಡುದು ಏಕೋ!

"ಅಕ್ಕಾ, ಕಂಪೌಂಡರ್ ನಿನ್ನ ಬಳಿ ಏನಾದರೂ ಹೇಳಿದನೇ?" ಎಂದು ಅಕ್ಕನೊಡನೆ ಕಣ್ಣು ತೆರೆದು ಕೇಳಿದ. ಮನೆಯಿಂದ ಒಗೆದು ತಂದ ಬಟ್ಟೆಯನ್ನು ಅಲ್ಲೇ ಕವಾಟಿನಲ್ಲಿ ಇಡುತಿದ್ದಳು ಅಕ್ಕ. ಅನಂತನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಅಕ್ಕ ಸಾಕಷ್ಟುನೊಂದಿರಬೇಕೆಂದು ತಿಳಿದ. ಸ್ವಲ್ಪ ಹೊತ್ತಾದ ಬಳಿಕ ಆಕೆಯೇ ಮಾತಿಗೆ ತೊಡಗಿದಳು.

'ಅದು ನಿಜವೆ?'

'ಯಾವುದು? ಹೌದು.'

'ಅವಳು ಯಾರು?'

ಲಕ್ಷ್ಮಿಯನ್ನು ಯಾರೆಂದು ವಿವರಿಸಲು ಅಸಾಧ್ಯ ಅನಂತನಿಗೆ. ಮನದಲ್ಲಿ ಅಕ್ಕ ಪ್ರಶ್ನೆ ಕೇಳಿ ನಗು ಬಂತಾದರೂ, ಎದುರಲ್ಲಿ ತೋರಲಿಲ್ಲ. ಕಂಪೌಂಡರ್ ಆ ಕಡೆ ಹಾದ. ಅನಂತ ಅವನನ್ನು ಕರೆದ. ಅವನಕ್ಕ ಸುಮ್ಮಗಿರೆಂದು ಹೇಳಿದರೂ ಕೇಳಲಿಲ್ಲ.

ನೋಡಿ ಮಿಸ್ಟರ್, ನೀವು ಕಂಪೌಂಡರ್ ಆಗುವ ಮೊದಲು ಯಾವುದಾದರೂ ಪತ್ರಿಕೆಗೆ ಬಾತ್ಮಿದಾರರು ಆಗಿದ್ದಿರೋ?'

'ಇಲ್ಲ.'

'ನಿಮಗೆ ಸಾಕಷ್ಟು ಅನುಭವ ಸಿಕ್ಕಿಲ್ಲ, ಚಿಂತಿಲ್ಲ. ವಾರ್ತೆಯನ್ನು ಹೇಗೆ ಸಂಗ್ರಹಿಸಬೇಕು---ಹೇಗೆ ಕೇಳುಪವರ ಮುಂದಿಡಬೇಕೆಂದೂ ಗೊತ್ತು. ನೀವು ಏಕೆ ಯಾವುದಾದರೂ ಪತ್ರಿಕೆಗೆ ಸೇರಿಕೊಳ್ಳಬಾರದು?'

ಕಂಪೌಂಡರನಿಗೆ ವಿಷಯ ತಿಳಿಯಿತು.

'ಡಾಕ್ಟರ್ ನಿಮಗೆ ಸಂಪೂರ್ಣ ವಿಶ್ರಾಂತಿಬೇಕೆಂದು ಹೇಳಿರುವರು. ನೀವು ಈ ರೀತಿಯಾಗಿ ಮಾತನಾಡಿದರೆ ಹೇಗೆ?'

'ಡಾಕ್ಟರ್ ಹೇಳಿದ್ದು ನಿಜ. ಆದರೆ ನಿಮ್ಮಂಥ ಕಂಪೌಂಡರ್ ಇಲ್ಲಿ ಇದ್ದಾರೆಂದು ಬಹುಶಃ ಅವರಿಗೆ ತಿಳಿದಿರಲಿಕ್ಕಿಲ್ಲ' ಎಂದು ಅನಂತ ನುಡಿಯುವ ಸಮಯ ಆತ ಸಿಟ್ಟಿನ ಮೊಗ ಹಾಕಿಕೊಂಡು ಹೊರ ತೆರಳಿದ. ಆನಂತ ನಕ್ಕುಬಿಟ್ಟ.

'ನೀನು ಇಲ್ಲಿಯವರೊಡನೆ ಹೀಗೆಲ್ಲಾ ಮಾತನಾಡಿದರೆ ಹೇಗೆ?' ಎಂದು ಕಂಪೌಂಡರ್ ಹೋದ ಬಳಿಕ ಅಕ್ಕ ಕೇಳಿದಳು. ಅನಂತ ಕಿಟಕಿಯಿಂದ ಹೊರ ಕಾಣುತಿದ್ದ. ಅಕ್ಕನ ಮನಸ್ಸಿನಲ್ಲಿ ಲಕ್ಷ್ಮಿಯ ಕುರಿತಾಗಿ ಹುಟ್ಟಿರುವ ಕೆಟ್ಟ ಭಾವನೆಗಳನ್ನು ಹೇಗಾದರೂ ಹೋಗಲಾಡಿಸಬೇಕೆಂದು ಯೋಚಿಸುತಿದ್ದ

'ಅವಳಿಗೂ ನನಗೂ ವಿಶೇಷ ಸಂಬಂಧ ಇಲ್ಲಕ್ಕಾ. ಹಿಗೆಯೇ ಗುರುತಷ್ಟೇ. ಕೆಲವು ದಿನಗಳ ಹಿಂದೆ ಎರಡು ಮುಸುಂಬಿ ತಂದು ಕೊಟ್ಟಿದ್ದಾಳಲ್ಲಾ ಅವಳೇ. ಏನೋ ಕಷ್ಟದಲ್ಲಿ ಇದ್ದಳಂತೆ. ನನ್ನಲ್ಲಿ ಹಣವಿತ್ತಲ್ಲ—ಉಪಕಾರ ಮಾಡೋಣ ಎಂದಾಯಿತು.'

'ಅವಳು ಕೆಟ್ಟ ಹೆಂಗುಸಂತೆ.'

'ಬೇರೆಯವರಿಗೆ ಕೆಟ್ಟವಳು ಆಗಿರಬಹುದು, ನನಗಲ್ಲ. ನಿನಗೆ ಬಹುಶಃ ಆ ಕಂಪೌಂಡರ್ ಎಲ್ಲವನ್ನೂ ದೊಡ್ಡದು ಮಾಡಿ ಹೇಳಿರಬಹುದು, ಅಲ್ಲವೇ?'

ಆಕೆ ಮಾತನಾಡಲಿಲ್ಲ ತಾನು ಅಕ್ಕನ ಮನಸ್ಸಿನ ಸಂಶಯ ದೂರೀಕರಿಸಲು ಯತ್ನಿಸಿದರೂ, ಪರಿಣಾಮಕಾರಿಯಾಗಲಿಲ್ಲ ಎಂದು ಆಕೆಯ ಮೊಗ ನೋಡಿ ಅನಂತನಿಗೆ ತಿಳಿಯಿತು.

— ೪೮ —

ಚಿಕಿತ್ಸಾಲಯದಿಂದ ಬಿಡುಗಡೆ ಹೊಂದಿದ ದಿನ. ಅನಂತ ಡಾಕ್ಟರರ ಬಳಿ ತೆರಳಿದ. ಅವರು ನಗುತ್ತಾ ಅವನನ್ನು ಸ್ವಾಗತಿಸಿದರು.

"ಈಗ ನೀವು ಚನ್ನಾದಿರಿ. ಇನ್ನು ಮುಂದಕ್ಕೆ ಯಾವ ಹೆದರಿಕೆಯೂ ಇಲ್ಲ. ಆದರೆ ಆರೋಗ್ಯದ ಕಡೆ ಸ್ವಲ್ಪ ಗಮನಬೇಕು," ಎಂದರು. ಅನಂತ ಅವರ ಸೂಚನೆಗಳನ್ನು ಗ್ರಾಹಕದಂತೆ ಹೀರಿದ. ಅವರೊಡನೆ ಮಾತು ಮುಂದರಿಸದಂತೆ ತನಗೆ ಬಿಡಿಸಲು ಬಂದಿರುವ ಕೆಲವು ಚಿತ್ರಗಳ ಕುರಿತಾಗಿಯೂ ಹೇಳಿದ.

'ನೀವು ಚಿತ್ರಕಾರರೆಂದು ತಿಳಿದಿತ್ತು. ಆದರೆ ಇಷ್ಟು ದೊಡ್ಡ ಚಿತ್ರಕಾರರೆಂದು ತಿಳಿದಿರಲಿಲ್ಲ. ಇರಲಿ. ನಿಮ್ಮ ಸ್ನೇಹದ ಉಪಯೋಗವನ್ನು ಮುಂದಕ್ಕೆ ಮಾಡಿಕೊಳ್ಳುವ ಸಂದರ್ಭ ಸಿಕ್ಕೀತು. ಬಿಡುವು ದೊರೆತಾಗಲ್ಲೆಲ್ಲಾ ಈ ಕಡೆ ಬನ್ನಿರಿ,' ಎಂದರು. ಅನಂತ ಅವರಿಗೆ ವಂದಿಸಿ ಹೊರ ಬಂದ. ಕಂಪೌಂಡರ್ ತನ್ನ ಕಣ್ಣು ತಪ್ಪಿಸುತಿದ್ದಾನೆಂದು ಅವನಿಗೆ ಮೊದಲೇ ತಿಳಿದಿತ್ತು. ಹಾಗಾಗಿ ತಿರುಗೊಮ್ಮೆ ಡಾಕ್ಟರರ ಬಳಿ ಸೇರಿದ.

'ಏನು?'

'ನಿಮ್ಮ ಕಂಪೌಂಡರ್ ಹತ್ತಿರ ಸ್ವಲ್ಪ ಮಾತನಾಡಬೇಕಿತ್ತು.'

ಡಾಕ್ಟರ್ ಕಂಪೌಂಡರನ್ನು ಕರೆದರು. ಅನಂತನನ್ನು ಕಂಡೊಡನೆ ಅವನ ಮೊಗಭ್ಭಾವ ಬದಲಾಯಿತು. ಡಾಕ್ಟರರ ಇದಿರಲ್ಲೇ 'ಏನು?' ಎಂದು ದರ್ಪದಿಂದ ಕೇಳಿದ.

'ಏನು ಎಂದು ಅಷ್ಟು ಗರ್ಜಿಸಬೇಡ. ಅವರಿಗೆ ನಿನ್ನಲ್ಲಿ ಮಾತನಾಡಲು ಇದೆಯಂತೆ,' ಎಂದರು ಡಾಕ್ಟರ್. ಅನಂತ ಹೊರ ಬಂದ. ಕಂಪೌಂಡರ್ ಬೇರೆ ಉಪಾಯವಿಲ್ಲದೆ ಆತನ ಬೆನ್ನು ಹಿಡಿಯಬೇಕಾಯಿತು.

'ನಿಮ್ಮಲ್ಲಿ ಇರುವಷ್ಟು ತ್ರಾಣ ನನ್ನಲ್ಲಿ ಇಲ್ಲ ಮಿಸ್ಟರ್, ಆದರೆ ನಿಮ್ಮ ಮನಸ್ಸಿನಲ್ಲಿ ಇರದ ತ್ರಾಣ ನನ್ನ ಮನಸ್ಸಿನಲ್ಲಿದೆ ಇಲ್ಲಿಯ ಡಾಕ್ಟರು ಬಹಳ ಒಳ್ಳೆಯವರು, ಸಭ್ಯರು. ನೀವೂ ಒಳ್ಳೆಯವರೆನ್ನಿ

ಆದರೆ ತುಂಬಾ ಒಳ್ಳೆಯವರಾಗಿ ಇರುವುದು ಉತ್ತಮವಲ್ಲವೆಂದು ಕೆಲವು ಕೆಟ್ಟ ಕೆಲಸಮಾಡುತ್ತೀರಿ.'

ಕಂಪೌಂಡರ್ ಹೊರಡಲು ಅನುವಾದ.

'ಸ್ವಲ್ಪ ನಿಲ್ಲಿ, ಬೇರೆಯವರಲ್ಲಿ ಏನೇನೆಲ್ಲಾ ಹೇಳಲು ತಿಳಿದವರಿಗೆ, ಕೇಳುವ ಕಿವಿಯೂ ಇರಬೇಕು. ಇಲ್ಲವಾದರೆ ಅರ್ಥವಿಲ್ಲ.'

'ನನಗೆ ನೀವೇನೂ ಹೇಳಿ ಕೊಡಬೇಕಿಲ್ಲ. ಲಕ್ಷ್ಮಿಯ ಹತ್ತಿರ ಎಲ್ಲಾ ಹೇಳಿ, ಅವಳಿಂದ ಸಾಕಷ್ಟು ಬೈಗಳು ಸಿಗುವಂತೆ ಮಾಡಿದಿರಿ. ಅಷ್ಟೇ ಉಪಕಾರ ಸಾಕು!

ಲಕ್ಷ್ಮಿ ಕಂಪೌಂಡರರಿಗೆ ಬೈದುದು ಅನಂತನಿಗೆ ತಿಳಿದಿರಲಿಲ್ಲ.

'ಯಾವಾಗ?'

"ಯಾವಾಗ ಎಂದು ದಿನ, ಗಂಟೆ, ನೆನಸಿ ಹೇಳಬೇಕೇ? ಅಂತೂ ನಿಮ್ಮ ಒಳ್ಳೇಯವರ ದೃಷ್ಟಿಯಿಂದ ನಾನು ಮಾಡಿದ್ದು ಹಾಳಾಗಿ ಕಂಡಿತು ನಿಮಗೆ. ಚಿಂತಿಲ್ಲ," ಎಂದು ಹೇಳುತ್ತಾ ಆತ ಮುಂದರಿದ. ಆವನ ತಲೆಗೆ ಪೂಸಿಕೊಂಡಿದ್ದ ಪರಿಮಳದ ಎಣ್ಣೆಯ ಗಮಗಮ ಅನಂತನ ಮೂಗುತುಂಬಿತ್ತು.

ಚಿಕಿತ್ಸಾಲಯದಲ್ಲಿ ತನ್ನ ಮಗ್ಗುಲು ಮಂಚದಲ್ಲಿ ಇದ್ದಾತನನ್ನು ಮಾತಾಡಿಸಿದ ಅನಂತ.

"ನೀನು ಸುಖವಾಗಿರಪ್ಪಾ. ನಮ್ಮದು ಹೇಗೋ—ಹಾಗೆಯೇ" ಎಂದು ಕೈಯಿಂದ ಮೇಲನ್ನು ತೋರಿ ಹೇಳಿದ. ಅಲ್ಲಿಂದ ಹೊರಬರುವ ಸಮಯ ಭಾವನವರು ಟಾಕ್ಸಿ ತಂದಿದ್ದರು. ಅನಂತ ಚಿಕಿತ್ಸಾಲಯವನ್ನು ಒಮ್ಮೆ ಕಣ್ತುಂಬಾ ಕಂಡು, ಕಾರು ಹತ್ತಿದ.

— ೪೯ —

ತನ್ನ ಕೋಣೆ ಇದಲ್ಲ ಎನ್ನುವಷ್ಟು ಬದಲಾಗಿತ್ತು ಅನಂತನ ಕೋಣೆ. ಬಣ್ಣದ ಟ್ಯೂಬುಗಳು, ಬ್ರಶ್‌ಗಳು, ಕೆನ್‌ವಾಸ್‌ಗಳು, ನಿಲುವು—ಎಲ್ಲವೂ ಮೂಲೆಯಲ್ಲಿ ಓರಣವಾಗಿ ಸೇರಿದ್ದುವು. ಹಾಸುಗೆಯನ್ನು ಬಿಡಿಸಿ ಬಿಳಿ ವಸ್ತ್ರವನ್ನು ಹಾಸಿತ್ತು. ಅನಂತ ಹಾಸುಗೆಯಲ್ಲಿ

ಮಲಗಿರಬೇಕಾದ ರೋಗಿಯಲ್ಲ. ಆದರೂ ಅವನ ಅಕ್ಕನ ಸಿದ್ಧತೆಗಳು. ಅಕ್ಕನ ಮನಸ್ಸು ನೋಯಬಾರದೆಂದು ಬಂದವನೇ ಹಾಸುಗೆಯಲ್ಲಿ ಉರುಳಿದ. ಮನಸ್ಸಿಗೆ ಹಿತವೆನಿಸಿತು. ಇದೇ ಕೋಣೆಯಲ್ಲಿ ಕುಳಿತು ತಾನು ಲಕ್ಷ್ಮಿಗೆ ಪತ್ರ ಬರೆಯಲು ಹೊರಟಿದ್ದೆ ಎಂದು ಎಣಿಸುವಾಗ ನಗು ಬಂತು. ಅಕ್ಕ ಹಾಲು ತಂದಿತ್ತಳು. ಅದನ್ನು ಕುಡಿದ ಬಳಿಕ ಹಾಸುಗೆಯಲ್ಲಿ ಇರಲು ಮನಸ್ಸಾಗಲಿಲ್ಲ. ಮೇಲೆದ್ದು, ಕುರ್ಚಿಯನ್ನು ಕಿಟಕಿಯ ಬಳಿಗೆಳೆದು ಕುಳಿತ. ಸಂಜೆಯ ತಿಳಿಗಾಳಿ ಬೀಸುತ್ತಿತ್ತು. ದೂರದ ತೆಂಗಿನ ಮರಗಳ ತೂಗು ಕಾಣಿಸುತಿತ್ತು.

ಕತ್ತಲಾಗುವ ತನಕ ಹಾಗೆಯೇ ಕುಳಿತಿದ್ದ. ಅವನ ಅಕ್ಕನಿಗೆ ತುಂಬು ಉತ್ಸಾಹ. ರೋಗಿಯಾಗಿದ್ದ ತನ್ನ ತಮ್ಮ ಗುಣ ಹೊಂದಿದನಲ್ಲಾ ಎಂಬ ಸಂತೋಷ. ಗಂಟೆಗೆ ಆರು ಬಾರಿ ಬಂದು ಏನು ಬೇಕೆಂದು ಅವನೊಡನೆ ಕೇಳುತಿದ್ದಳು. ಅವಳ ಉತ್ಸಾಹ ಅನಂತನಿಗೆ ಸುಖವೆನಿಸಿತು. ತಾಯಿಯನ್ನು ತಾನು ಕಳೆದು ಕೊಂಡವನಾದರೂ, ಅಕ್ಕ ತಾಯಿಗಿಂತ ಕಡಿಮೆಯಲ್ಲ ಎಂದೆನಿಸಿತು.

ಲಕ್ಷ್ಮಿ ಕಂಪೌಂಡರಿಗೆ ಬೈದುದು ಅಷ್ಟು ಹಿತ ಎನಿಸಲಿಲ್ಲ. ಆಕೆ ಹ್ಯಾಗೆಲ್ಲ ಕೆಟ್ಟ ಮಾತುಗಳನ್ನು ಆಡುವವಳಲ್ಲ ಎಂಬ ವಿಶ್ವಾಸ ಅನಂತನಲ್ಲಿತ್ತು. ಲಕ್ಷ್ಮಿಯನ್ನು ಇನ್ನೊಮ್ಮೆ ಕಂಡಾಗ ವಿಚಾರ ಕೇಳಬೇಕೆಂದು ಯೋಚಿಸಿದ. ಅಷ್ಟರಲ್ಲಿ ಕೃಷ್ಣಪ್ಪ ಒಳಬಂದ. ತಾನು ತಂದಿದ್ದ ಮುಸುಂಬಿಗಳನ್ನು ಮಂಚದ ಮೇಲಿರಿಸಿ, ಸ್ಟೂಲನ್ನು ಕುರ್ಚಿಯ ಬಳಿಗೆ ಎಳೆದು ಕುಳಿತ.

"ನಿನ್ನ ಕೋಣೆ ಬಹಳ ಬದಲಾಗಿದೆ. ಈಗಷ್ಟೇ ಕೆರೆ ಮುಳುಗಿ ಮೇಲೆದ್ದು ಗೋಪಿ ಹಚ್ಚಿಕೊಂಡಿರುವ ಬ್ರಾಹ್ಮಣನ ಹಾಗೆ ಕಾಣಿಸುತ್ತದೆ", ಎಂದು ಕೋಣೆಯ ಸುತ್ತು ಕಣ್ಣು ಹರಿಸಿ ನುಡಿದ ಕೃಷ್ಣಪ್ಪ.

"ಎಲ್ಲಾ ಅಕ್ಕನ ಕೆಲಸ".

"ಅದಿರಲಿ, ಮೊನ್ನೆ ಲಕ್ಷ್ಮಿಗೆ ರೂಪಾಯಿ ಕೊಟ್ಟೆಯಂತೆ."

ವಿಷಯ ಸ್ಪಷ್ಟವಾಗಿ ಕೃಷ್ಣಪ್ಪನಿಗೆ ತಿಳಿದಿದೆ ಎಂದು ಅನಂತ ಅರಿತ. ಇನ್ನು ಮರೆಮಾಚಿಕೆಯಿಂದ ಉಪಯೋಗವಿಲ್ಲವೆಂದು ಅನಿಸಿತು.

"ಹೌದು."

"ನಿನಗೇನು ರೂಪಾಯಿ ಹೆಚ್ಚಾಗಿದೆಯೋ?"

"ಎಂದರೆ?"

'ಅವಳಿಗೆ ಏನೀಗ ಕಡಿಮೆಯಾಗಿದೆ?'

'ಹೊಟ್ಟೆಗೆ ಕಡಿಮೆಯಾಗಿದೆ, ಮೈಬಟ್ಟೆಗೆ ಕೊರತೆ ಇದೆ. ಉಳಿದೆಲ್ಲ ದೃಷ್ಟಿಯಿಂದ ಅವಳು ಬಹಳ ಶ್ರೀಮಂತೆ', ಎಂದು ವ್ಯಂಗ್ಯವಾಗಿ ಹೇಳಿದ ಅನಂತ.

'ಅವಳು ಆ ಇಪ್ಪತ್ತು ರೂಪಾಯಿಯನ್ನು ಹಿಂದೆ ಕೊಡುವುದಾದರೆ ನೀನು ತೆಗೆದುಕೊಳ್ಳುತ್ತಿಯಾ?'

'ಅವಳಿಗೆ ಹಣದ ಅವಶ್ಯಕತೆ ಇತ್ತು. ತೆಗೆದು ಕೊಂಡಳು. ಈಗ ಹಿಂದಕ್ಕೆ, ಪಾಪ, ಎಲ್ಲಿಂದ ಕೊಡಬೇಕು?'

'ಅಂದು ನಿನ್ನ ಮನಸ್ಸಿಗೆ ನೋವಾಗಬಾರದೆಂದು ಆಕೆ ಹಣ ತೆಗೆದು ಕೊಂಡಿದ್ದರೆ?' ಎಂದು ಕೃಷ್ಣಪ್ಪ ಸಮಸ್ಯೆಯೊಂದನ್ನು ಎದುರು ಹಾಕಿದ. ಅನಂತ ನಸು ಕತ್ತಲಲ್ಲಿ ಕೃಷ್ಣಪ್ಪನ ಮೊಗ ನೋಡಲು ಯತ್ನಿಸಿದ. ಆಗಲಿಲ್ಲ. ಮೇಲಕ್ಕೆದ್ದು ವಿದ್ಯುದ್ದೀಪ ಉರಿಸಿದ. ಕೃಷ್ಣಪ್ಪ ಒಮ್ಮೆಗೆಯೇ ಮೊಗ ಕಿವುಚಿಕೊಂಡ. ಬಳಿಕ ರೆಪ್ಪೆಯನ್ನು ಸ್ವಲ್ಪ ಸ್ವಲ್ಪವೇ ಬಿಡಿಸಿಕೊಂಡ.

'ಅವಳು ಹಾಗೆಂದು ನಿನ್ನಲ್ಲಿ ಹೇಳಿದಳೇ?'

'ಹೇಳಿಲ್ಲ. ಆದರೆ ಹಾಗೆ ಆಗಬಹುದೆಂದು ಊಹಿಸಿದೆ. ನೋಡು ಅನಂತಾ, ಅವಳ ಒಳ ಹೊರಗನ್ನು ತಿಳಿದವ ನಾನು. ಮೊದಲೇ ಹೇಳಿದ್ದೆ—ಅವಳಿಂದ ದೂರವಿರುವುದು ಒಳ್ಳೆಯದೆಂದು. ನೀನು ಅವಳ ಚೆಲುವಿಗೆ ಮಾರು ಹೋದೆ.'

ಅನಂತನಿಗೆ ಕೃಷ್ಣಪ್ಪನ ಮಾತು ಕೇಳಲಾಗಲಿಲ್ಲ ತಾನು ತಿಳಿದುಕೊಂಡಿರುವ ಲಕ್ಷ್ಮಿಯ ವ್ಯಕ್ತಿತ್ವಕ್ಕೂ—ಉಳಿದವರು ತಿಳಿದಿರುವ ಲಕ್ಷ್ಮಿಯ ವ್ಯಕ್ತಿತ್ವಕ್ಕೂ ಅಜಗಜಾಂತರ ಭೇದವಿರುವುದು ಅಸಹನೀಯವಾಗಿ ತೋರಿತು.

'ಆ ವಿಚಾರವನ್ನು ಬಿಟ್ಟುಬಿಡು ಕಿಟ್ಟೂ. ಬೇರೇನಾದರೂ ಇದ್ದರೆ ಮಾತನಾಡೋಣ', ಎಂದ ಅನಂತ. ಕೃಷ್ಣಪ್ಪ ಸೂಕ್ಷ್ಮ ವಿಚಾರಿ. ಕೂಡಲೇ ವಿಷಯ ಬದಲಿಸಿದ.

ಕತ್ತಲು ದಟ್ಟವಾಗ ತೊಡಗಿತು. ಕೃಷ್ಣಪ್ಪ ಮರುದಿನ ಸಿಗುತ್ತೇನೆಂದು ನುಡಿದು ಹೊರ ತೆರಳಿದ. ಅನಂತ ವಿದ್ಯುದ್ದೀಪವನ್ನು ಆರಿಸಿಬಿಟ್ಟು ಯೋಚಿಸ ತೊಡಗಿದ. ದೂರದ ದೇಗುಲದ ಘಂಟಾ ಸ್ವರ ಕೇಳಿಸಿತು. ಸ್ವಲ್ಪ ಹೊತ್ತಲ್ಲಿ ಇಗರ್ಜಿಯ ಗಂಟೆ ಕೂಡಾ......

ಆಯಾಸವಾದಂತಾಯಿತು.

ಎದ್ದು ಹಾಸುಗೆಯಲ್ಲಿ ಉರುಳಿದ.

'ಜನರು ನನ್ನನ್ನು ಇಷ್ಟು ಜರೆಯುತ್ತಾರೆ. ನನ್ನ ಜೀವನದ ತುಣುಕು ತುಣುಕನ್ನು ತಿಳಿದ ಕೃಷ್ಣಪ್ಪನವರು ನನ್ನನ್ನು ತೆಗುಳುತ್ತಾರೆ. ನಾನು ಕೆಟ್ಟ ಹೆಂಗುಸು ಎಂಬ ಬಿರುದು ಕೊಡುತ್ತಾರೆ. ಆ ಕ[illegible]ಡರ್—ಒಂದು ದಿನ ರಾತ್ರೆ ಮನೆಗೆ ಬಂದ. ನಾನು ಸೂಳೆಯಲ್ಲ ಎಂದು ಹೇಳಿ ಅವನನ್ನು ಹಿಂತಿರುಗಿಸಿದೆ. ಹಾಗಾಗಿ ನಾನು ಅವನ ಪಾಲಿಗೆ ಕೆಟ್ಟವಳು. ಎಲ್ಲರ ಪಾಲಿಗೆ ಕೆಟ್ಟವಳು ಆಗಿರುವಾಗ ನೀವು ಇಪ್ಪತ್ತು ರೂಪಾಯಿ ಕೊಟ್ಟದ್ದು ಎಷ್ಟು ವಿನಾಕಾರಣ ಆಯಿತು ನೋಡಿ ನಿಮ್ಮ ಮನಸ್ಸಿಗೆ ನಾನು ಒಳ್ಳೆಯವಳೆಂದು ತಿಳಿದಿರಬಹುದು. ಅದು ನಿಮ್ಮ ದೊಡ್ಡ ಮನಸ್ಸನ್ನು ತೋರಿಸುತ್ತದೆ. ಆದರೆ ಅದನ್ನು ಬೇರೆಯವರಲ್ಲಿ ತೋರಿಸಲ್ಕು ಹೋಗಬೇಡಿ. ಇದರಿಂದ ನಿಮಗೆಯೇ ಕೇಡು.'

ಯಾವುದೋ ಮೂಲೆಯಿಂದ ಲಕ್ಷ್ಮಿ ನುಡಿದಂತಾಯಿತು. ತನ್ನ ಮತ್ತು ಆಕೆಯ ಸಂಬಂಧಕ್ಕೆ ಹೊಸ ಹೊಸ ಚಿಗುರೆಲೆಗಳು ಮೂಡುವಂತೆ ಕಾಣಿಸಿತು. ಮಗ್ಗುಲು ಬದಲಿಸಿ ಕಣ್ಣೆವೆ ಮುಚ್ಚಿಕೊಂಡ.

'ನೋಡಿ, ಇಲ್ಲಿ ನೋಡಿ. ಈ ಗಾಯ—ಈ ಹುಣ್ಣು—ಈ ಕಲೆ, ಎಲ್ಲವನ್ನೂ ನೋಡಿ ನಿಮ್ಮೆದುರಿಗೆ ನನಗೆ ಬತ್ತಲೆಯಾಗಿ ನಿಲ್ಲಲು ನಾಚುಗೆ ಇಲ್ಲ. ಕಾರಣ ನನ್ನ ದೇಹದಲ್ಲಿ ಚೆಲುವು ಕಂಡವರು ನೀವು. ನನ್ನ ಚಿತ್ರ ಬಿಡಿಸಲು ಹೊರಟವರು ನೀವು. ನನ್ನ ಚಿತ್ರದಲ್ಲಿ ಈ ಗುರುತುಗಳೆಲ್ಲವೂ ಬರಬೇಕು. ನಾನು ನಿಮ್ಮೆಲ್ಲರ ಕಣ್ಣಿಗೆ ಬಿದ್ದು ಕೆಟ್ಟ

ಹೆಂಗುಸಾಗುವಂತೆ ಮಾಡಿದುದು ಈ ಗಾಯಗಳು', ಎಂದು ಕಂಬನಿ ತುಂಬಿ ಹೇಳುತ್ತಾ, ಸಂಕೋಚ ಬದಿಗಿರಿಸಿ, ರವಕೆ ಬಿಚ್ಚಿ ತನ್ನ ಎದೆಯ ಮೇಲಿನ ಹಲವಾರು ಗಾಯಗಳ ಗುರುತನ್ನು ತೋರಿದಳು, ಬೆನ್ನಲ್ಲಿ ಆಗಿದ್ದ ಗಾಯಗಳನ್ನು ತೋರಿದಳು. ಮೈಬಟ್ಟೆ ಬಿಚ್ಚಿ, ತೊಡೆ, ಸೊಂಟಗಳಲ್ಲಿದ್ದ ಗಾಯಗಳ ಗುರುತನ್ನು ಬೊಟ್ಟುಮಾಡಿ ತೋರಿದಳು.

ಅನಂತನಿಗೆ ಎಣಿಸಲಾಗಲಿಲ್ಲ. ದಿಗ್ಗನೆ ಮೇಲೆದ್ದು ತಾನೇನು ಮಾಡುತಿದ್ದೇನೆ ಎಂಬುದರ ಅರಿವಿಲ್ಲದೆ ಹೊರಹೊರಟ. ಅಕ್ಕ ಎಲ್ಲೋ ಒಳಗಿದ್ದಳು. ಭಾವನವರು ಮನೆಯಲ್ಲಿರಲಿಲ್ಲ. ಅವನ ಕಾಲುಗಳಿಗೆ ಬಿಡುಗಡೆ ದೊರೆತಂತಿತ್ತು. ಮನದ ಮೇಲೆ ನೂರಾರು ಗಾಯಗಳಾಗಿದ್ದುವು.

ಲಕ್ಷ್ಮಿಯ ಮನೆ ಇದುರ್ಳು ಬಂದು ನಿಂತ.

ತಾನು ಇಲ್ಲಿಗೆ ಬಂದೆನೇಕೆ ಎಂದು ತಿಳಿಯದು ಆತನಿಗೆ.

— ೫೦ —

"ಬನ್ನಿ, ನೀವು ಇವತ್ತು ಇಲ್ಲಿಗೆ ಬರುತ್ತೀರೆಂದು ಎಣಿಸಿದ್ದೆ. ಆದರೆ ಗುಣವಾದ ಕೂಡಲೇ ಹೀಗೆ ಬರುವುದು ಒಳ್ಳೆಯದಲ್ಲ. ನಿಮ್ಮ ಅಕ್ಕನಿಗೆ ತಿಳಿದರೆ ಹೇಗೆ? ಭಾವನವರು ಏನೆಂದಾರು?" ಎಂದು ಲಕ್ಷ್ಮಿ ಸ್ವಾಗತಿಸುತ್ತಾ ನುಡಿದಳು. ಅನಂತ ಮೂಕನಂತೆ ಕುರ್ಚಿಯಲ್ಲಿ ಕುಳಿತ. ತೆರೆದ ಕಣ್ಣುಗಳಿಂದ ಲಕ್ಷ್ಮಿಯನ್ನು ನೋಡತೊಡಗಿದ. ಆದು ತನಕ ಚಿಕ್ಕದಾಗಿ ಉರಿಯುತಿದ್ದ ದೀಪವನ್ನು ದೊಡ್ಡದು ಮಾಡಿದಳು. ಅವನ ಎದುರಲ್ಲಿ ಬೆಳಕಿಗೆ ಮೊಗ ಮಾಡಿ ಕಂಭಕ್ಕೆ ಒರಗಿ ಕುಳಿತಳು. ಅನಂತ ನೆಲ ನೋಡಿದ.

"ನೀವು ಮೊನ್ನೆ ಹೇಳಿದ್ದ ಮಾತು ನೆನಪಿಗೆ ಬರುತ್ತದೆ. ನಾವು ಎಲ್ಲಿಗೆ ಹೋದರೂ ಕಷ್ಟಗಳು ನಮ್ಮ ಬೆನ್ನು ಬಿಡುವುದಿಲ್ಲ. ಇಲ್ಲೇ ಬಾವಿಗೆ ಏಕೆ ಬೀಳಬಾರದು ಎಂದು ಕಾಣುತ್ತದೆ. ಆದರೆ ಮಗು ಇದೆಯಲ್ಲಾ?"

"ಮಗುವನ್ನು ಮೊದಲು ಕುತ್ತಿಗೆ ಹಿಸುಕಿ ಕೊಲ್ಲಬೇಕು. ಆದರ

ತಣ್ಣಗಿನ ಗಲ್ಲಕ್ಕೆ ನಿಮ್ಮ ಗಲ್ಲವನ್ನು ಒತ್ತಬೇಕು. ಬಳಿಕ ಬಾವಿಗೆ ಹಾರಬೇಕು" ಎಂದು ಅನಂತ ಆವೇಶದಿಂದ ನುಡಿದ. ತನಗೆ ಹಿತ ವಾದವರಿಂದ ಕಹಿ ಮಾತುಗಳನ್ನು ಕೇಳಲು ಆತ ಸಿದ್ಧನಿರಲಿಲ್ಲ.

ಲಕ್ಷ್ಮಿ ಮೂಕಳಾದಳು. ಅನಂತ ಈ ರೀತಿಯ ಕಟು ಮಾತು ಗಳನ್ನು ಆಡಿಯಾನೆಂದು ಆಕೆ ಎಣಿಸಿರಲಿಲ್ಲ ಮನಸ್ಸಿಗೆ ಏನು ಅನಿಸಿತೋ ಏನೋ. ದಿಗ್ಗನೆ ಮೇಲೆದ್ದಳ. ಒಳಗೆ ಮಲಗಿಕೊಂಡಿದ್ದ ಮಗುವನ್ನು ಕರೆತಂದು ಅವನ ತೆರೆದ ಕೈಯ ಮೇಲಿಟ್ಟಳು.

"ನೀವು ಕತ್ತು ಹಿಚುಕಿಬಿಡಿ-ಮತ್ತು ನಾನು ಬಾವಿಗೆ ಹಾರುತ್ತೇನೆ" ಎಂದು ಬಿಕ್ಕಿಬಿಕ್ಕಿ ಅಳತೊಡಗಿದಳು. ತನ್ನ ಜೀವನದಲ್ಲಿ ಬರುತ್ತಿರುವ ಇಂತಹ ಘಟನೆಗಳಿಗೆ ಅರ್ಥ ಹಚ್ಚಲಾಗದವನಂತೆ ಅನಂತ ಅವಳನ್ನು ನೋಡಿದ. ಮಗುವಿಗೆ ಎಚ್ಚರಾಯಿತು, ಅಳತೊಡಗಿತು. ಅನಂತ ಕೈಯಿಂದಲೇ ತೂಗಿ ಸಂತಯಿಸ ತೊಡಗಿದ.

ಲಕ್ಷ್ಮಿಯ ದುಃಖದ ಒತ್ತಡ ಇಳಿಯಿತು.

ಮಗುವನ್ನು ಮೆಲ್ಲಗೆ ಅವಳ ಕೈಗಿತ್ತ. ಬಳಿಕ ಅವಳ ಗಲ್ಲ ಸವರಿ "ನಾಳೆ ಎಲ್ಲಿಗೂ ಹೋಗಬೇಡಿ ನಿಮ್ಮ ಚಿತ್ರ ಬಿಡಿಸಲು ಬರುತ್ತೇನೆ," ಎಂದು ನುಡಿದು ಹೊರಬಿದ್ದ.

— ೫೧ —

ಮುಂಜಾನೆ ಮಂಜಿನ ಮಧ್ಯದಲ್ಲಿ ಬಣ್ಣದ ಪೆಟ್ಟಿಗೆ, ಚಿತ್ರ ಹಲಗೆ ಹೊತ್ತು ಕೊಳ್ಳಲು ಅಣಿಮಾಡುತಿದ್ದ ಅನಂತನನ್ನು ಅಕ್ಕ ಕಂಡಳು.

"ಎಲ್ಲಿಗೆ ?"

"ಇಲ್ಲೇ ಒಂದು ಕಡೆ ಹೋಗಿ ಬರುತ್ತೇನೆ"

"ಸ್ವಲ್ಪ ತಡೆದು ಹೋಗಬಹುದಲ್ಲಾ...."

"ಇಲ್ಲ ಬೇಗ ಬರುತ್ತೇನೆ," ಎಂದವನೇ ಅವಳ ಮುಂದಿನ ಮಾತುಗಳತ್ತ ಗಮನ ಹಾಯಿಸದೆ ಹೊರ ತೆರಳಿದ. ಅವನ ಭಾವನವರ 'ಅನಂತಾ," ಎಂಬ ಕರೆ ಕಿವಿಗೆ ಕೇಳಿಸುವ ಸಮಯ, ಆತ ಸಾಕಷ್ಟು ದೂರ ಸಾಗಿದ್ದ.

ಲಕ್ಷ್ಮಿಯ ಮುಳಿ ಹುಲ್ಲಿನ ಮಾಡಿನೆಡೆಯಿಂದ ಕಡು ದಪ್ಪಗಿನ ಹೊಗೆ ಮೇಲೇಳುತಿತ್ತು. ಮೌನ. ಪ್ರಕೃತಿ ಮುಂಜಾವಿನ ಹೊತ್ತು ಮೋಹಹುಟ್ಟಿಸುವಂತೆ ಕಾಣಿಸುತಿತ್ತು.

ಅನಂತ ಅದಷ್ಟು ಮುಂಜಾನೆ ಬಂದಾನೆಂದು ಲಕ್ಷ್ಮಿ ತಿಳಿದಿರಲಿಲ್ಲ. ಚಾವಡಿಗೆ ಆತ ಬಂದೊಡನೆ ಚಾ ಮಾಡಿ ಕೊಟ್ಟಳು. ಬಹಳಷ್ಟು ಒತ್ತಾಯದ ಬಳಿಕ ಒಂದಿಷ್ಟು ಗಂಜಿ ತಿಂದ. ಸರಿ. ಚಾವಡಿಯಲ್ಲಿ ಲಕ್ಷ್ಮಿಯನ್ನು ಬೆಳಕಿಗೆ ಎದುರಾಗಿ ಮಗುವಿನ ಜೊತೆ ಕುಳ್ಳಿರಿಸಿದ. ರೇಖೆಗಳು ಮೂಡ ತೊಡಗಿದ[illegible]ವು.

ಮಧ್ಯಾಹ್ನದ ಊಟ [illegible]ಗೂ ಇಲ್ಲ--ಆತನಿಗೂ ಇಲ್ಲ. ಮಗುವಿಗೆ ಆಕೆ ಆಗಾಗ ಎದೆ ಹಾ[illegible] ಕೊಡುತಿದ್ದಳು. ಮಧ್ಯಾಹ್ನ ಹೊತ್ತಿಗೆ [illegible] ತಂದೆ ತಾನಾಗಿಯೇ ಅಡುಗೆ ಮನೆಗೆ ತೆರಳಿ, ಬೆಳಗ್ಗೆ ಉಳಿದಿದ್ದ [illegible]ನ್ನು ಉಂಡು, ಬೀ[illegible]ಯೊಂದನ್ನು ಹಚ್ಚಿ, ಹಲ್ಲಿನೆಡೆ ಕುಳಿತಿದ್ದ [illegible]ತುಣುಕನ್ನು ಬೀಡಿ[illegible] ಬುಡದಿಂದ ಕೆರೆಸಿಕೊಂಡು, ನಿರ್ಲಿಪ್ತನಾಗಿ [illegible]ರ ತೆರಳಿದ.

ಸಂಜೆಯ ಹೊತ್ತು ಲಕ್ಷ್ಮಿಗೆ ಆಯಾಸನಾಯಿತು. ಮೇಲಾಗಿ ಬೆನ್ನುನೋಯ ತೊಡಗಿತು. ಅಷ್ಟರಲ್ಲಿ ಅನಂತನ ಚಿತ್ರಣವೂ ಮುಗಿದಿತ್ತು. ಲಕ್ಷ್ಮಿ ಚಿತ್ರವನ್ನು ಕಂಡಳು. ಸೊಗಸಾಗಿತ್ತು. ಅನಂತನ ಚಿತ್ರಿಗ ಮನೋವೃತ್ತಿಯ ರಸಪೂರ್ಣ ಸಮ್ಮಿಲನ ಅಲ್ಲಾಗಿತ್ತು. ಅವನ ಬಹಳಷ್ಟು ದಿನಗಳ ಮಾನಸಿಕ ತೊಳಲಾಟ ತಾಯಿ ಮಗು ಚಿತ್ರದಿಂದ ಅಂತ್ಯಗೊಂಡಿತ್ತು.

"ಸ್ವಲ್ಪ ಚಾ ಮಾಡುತ್ತೇನೆ."

"ಬೇಡ," ಎನ್ನುತ್ತಾ ಕುಂಚಗಳನ್ನು ತೊಳೆದು, ಬಣ್ಣಗಳನ್ನು ಪೆಟ್ಟಿಗೆಗೆ ಸೇರಿಸ ತೊಡಗಿದ. ತಾಯಿ ಮಗು ಚಿತ್ರ ಹಗುರವಾದ ಸುರುಳಿಯಾಯ್ತು. ಚಿತ್ರ ಹಲಗೆಯನ್ನು ತೋಳ ಮಧ್ಯದಲ್ಲಿ ಸಿಲುಕಿಸಿದ.

"ಇನ್ನು ಎಂದು ಬರುತ್ತೀರಿ?"

"ಬಹುಶಃ ಬರಲಾರೆ" ಎಂದು ಸಾಕಷ್ಟು ದೂರ ಹೋದ ಬಳಿಕ ಲಕ್ಷ್ಮಿಗೆ ಕೂಗಿ ಹೇಳಿದ. ಆವನ ಉತ್ತರ ಕೇಳಿ ಲಕ್ಷ್ಮಿ ಮಗುವನ್ನೆತ್ತಿ

ಕೊಂಡು ಅವನೆಡೆಗೆ ವೇಗವಾಗಿ ಬರತೊಡಗಿದಳು. ಅನಂತನ ನಡುಗೆ ಇನ್ನೂ ತೀವ್ರವಾಯಿತು.

— ೫೧ —

ಕೃಷ್ಣಪ್ಪನಿಗೆ ಚಿತ್ರ ತೋರಿಸಿದ. ಅಕ್ಕ ನೋಡಿದಳು. ಅಪೂರ್ವಕ್ಕೆಂದು ಮನೆಗೆ ಬಂದಿದ್ದ ಯಮುನನೂ ಕಂಡಳು. ಎಲ್ಲರೂ ಮೆಚ್ಚಿದರು. ಅವನ ಅಕ್ಕನಿಗೆ ಮಾತ್ರ ಚಿತ್ರ ನೋಡುವ ಸಮಯ ಗಂಟಲು ಉಬ್ಬಿದಂತಾಗಿತ್ತು.

ಕಾಮತರ ತಾಯಿ-ತಂದೆಯರ ಚಿತ್ರ ಪೂರ್ಣಮಾಡಿ ಅವರಲ್ಲಿಗೆ ಕೊಂಡ್ಹೋದ. ಅವರಿಗೆ ಮೆಚ್ಚುಗೆಯಾಯಿತು. ಐವತ್ತು ರೂಪಾಯಿಗಳನ್ನು ಮುಂದೆ ಚಾಚಿದರು.

“ನಿಮ್ಮಿಂದ ನಾನು ಹಿಂದೆಯೇ ಹ[illegible] ಪಡೆದಿರುತ್ತೇನೆ”, ತಗಿತು[illegible] ಅನಂತ. ಅವರು ಇಲ್ಲವೆಂದರು. ಕೂಡ[illegible] ಕೃಷ್ಣಪ್ಪನ ನಗ[illegible] ತುಂಟ ಕಣ್ಣುಗಳು ಕಣ್ಣ ಮುಂದೆ ಬ[illegible]ತ್ತ ನಿಂತವು. ರೂಪಾ[illegible] ತೆಗೆದುಕೊಂಡು ಕೃಷ್ಣಪ್ಪನಲ್ಲಿಗೆ ಬಂದ.

ಅವನ ಮನಸ್ಸಿನ ಗಲಿಬಿಲಿಕಂಡು ಕೃಷ್ಣಪ್ಪನಿಗೆ ಅಂಜಿಕೆಯಾ[illegible]ತ್ತು. ಒಂದೆರಡು ದಿನ ಎಲ್ಲಿಗಾದರೂ ಹೋಗೋಣ ಎಂದು ಸೂಚಿಸಿದ. ಅನಂತ ಮಂಕನಂತೆ ಹ್ಞೂಂ ಎಂದ.

— ೫೨ —

ರೈಲಿನಲ್ಲಿ ಪ್ರಯಾಣಿಸುವ ವೇಳೆ ಅನಂತ ಮೂಕನಾಗಿದ್ದ. ಕೃಷ್ಣಪ್ಪನೇ ಎಲ್ಲಾ ಮಾತುಗಳನ್ನು ಆಡಬೇಕಿತ್ತು.

ಬೇಕಲಕೋಟೆ—ಅದರೊಳಗಿನ ದೃಶ್ಯಗಳು ಅನಂತನಿಗೆ ಮೆಚ್ಚುಗೆಯಾದುವು. ಎಲ್ಲಿಂದಲೋ ಹುಟ್ಟಿ ಬರುತಿದ್ದ ಕಡಲ ಮೇಲಿನ ಮೊದಲ ಗಾಳಿ ಅವನಿಗೆ ಹಿತವೆನಿಸಿತು. ಕೋಟೆಯೊಳಗಿನಿಂದ ದಕ್ಷಿಣದಲ್ಲಿ ಕಣ್ಣೋಟಕ್ಕೆ ಸಿಲುಕುವಷ್ಟು ದೂರದ ತೆಂಗುಗಳ ತೂಗಿನ ಜೊತೆಗಿದ್ದ ತೆರೆಯ ಬಿಳಿಯಾಟ ಆತನ ಮನದಲ್ಲಿದ್ದ ಉದ್ವೇಗ ತಣಿಸಿತು. ಕೃಷ್ಣಪ್ಪನ ಸಾನಿಧ್ಯದಲ್ಲಿ ನಾಲ್ಕು ದಿನಗಳು ಕಳೆದುವು. ಅಷ್ಟರಲ್ಲಿ

ಏಳೆಂಟು ಸೊಗಸಾದ ಪ್ರಾಕೃತಿಕ ದೃಶ್ಯ ಚಿತ್ರಿಸಿದ. ಬಳಿಕ ಇಬ್ಬರೂ ಊರಿಗೆ ಹಿಂತಿರುಗಿದರು.

ಅನಂತನ ಮನಸ್ಸಿಗೆ ತೃಪ್ತಿ ದೊರೆತುದು ಅಕ್ಕನಿಗೆ ಸಂತೋಷ ವೆನಿಸಿತು. ಭಾವನವರು "ಒಮ್ಮೆಗೆ ಮುಗಿಯಿತಲ್ಲಾ" ಎಂದು ಉದ್ಗಾರ ಹೊರಡಿಸಿದರು.

ನಾಲ್ಕು ದಿನಗಳು ಕಳೆದುವು ಒಂದು ಸಂಜೆ ಕೃಷ್ಣಪ್ಪನ ಅಂಗಡಿ ಯಲ್ಲಿ ಅನಂತ ಕುಳಿತಿದ್ದ.

"ಲಕ್ಷ್ಮಿ ಯಾರೋ [illegible]ನುಳಿಯಾಳಿ ಮೇಸ್ತ್ರಿಯೊಡನೆ ಊರು ಬಿಟ್ಟು ಹೋಗಿದ್ದಾಳೆ. [illegible] ಮೇಸ್ತ್ರಿ ಇಲ್ಲಿ ಸಂಕದ ಕೆಲಸ ಮಾಡು ತಿ[illegible]ನಂತೆ."

ಅನಂತ ನೆಟ್ಟ ನೋ[illegible]ಂದ ಕೃಷ್ಣಪ್ಪನನ್ನು ಕಂಡ. ಅಂಗಡಿಯ [illegible]ಲಾಗುತಿದ್ದಂತೆ [illegible]ಟ್ರೊಮೇಕ್ಸ್ ಹಚ್ಚಿ, ಮೇಲೆ ತೂಗಿದ.

ತಾನು ಚಿಕ್ಕವನಿ[illegible]ಗ ಪೆಟ್ರೊಮೇಕ್ಸಿನ ಬೆಳಕಲ್ಲಿ ಪ್ರಥಮ [illegible]ರಿ ಲಕ್ಷ್ಮಿಯನ್ನು ಕಂ[illegible]ನೆನಪು ಉಕ್ಕಿ ಬಂತು ಅನಂತನಲ್ಲಿ, ಅಂಗಡಿ ಯಿಂದ ಕೆಳಗಿಳಿದು ಹೊರಟ. ದೂರದ ದೇಗುಲದಲ್ಲಿ ಪೂಜೆಗಾಗಿ ಬಾರಿಸುತಿದ್ದ ಗಂಟಾ ನಿನಾದ ಅಲೆಅಲೆಯಾಗಿ ಬಂದು, ಅವನೆದೆಯ[illegible]ಲ್ಲಿ ಆಯ್ಯೋ ಎಂದೆನಿಸಿತು.

ಲಕ್ಷ್ಮಿ ತಟ್ಟಿದ್ದ ಗಲ್ಲಭಾಗವನ್ನು ಮೆಲ್ಲನೆ ಮುಟ್ಟಿ ಕಂಡ ಅನಂತ!

Navayuga Press, Udipi—1000/12-58.

ಕಿರಿಯರ ಪ್ರಪಂಚದ ಪ್ರಕಟಣೆಗಳು

1	ಸ್ವತಂತ್ರ ಜೀವನೋಪಾಯ	(ಕೆ. ಹೊ[illegible]ಯ್ಯ ಶೆಟ್ಟಿ)	ಪ್ರಹಸನ	0	4
2	ಸಂಶಯ ಪಿಶಾಚಿ	(ಕೆ[illegible]ಕೆ. ಶೆಟ್ಟಿ)	ನಾಟಕ	0	10
3	ನಾಡ ಕತೆಗಳು	(ಕಥಾಸಂಕಲನ)		0	4
4	ಕುಶಲವ	(ಕೆ[illegible]ಕೆ. ಶೆಟ್ಟಿ)	ನಾಟಕ	[illegible]	
5	ಕಾವ್ಯ ಸಾಮ್ರಾಜ್ಯ	(ಕವಿತಾ [illegible]ಕಲನ)	ಪ್ರತಿಗಳು	[illegible]	
6	ಮಧುವನ	([illegible]ಕಥಾಸಂಕಲನ)		[illegible]	
7	ಮುಂದಿನ ದೇವರು	(ಕೆ. ಕೆ[illegible]ಶೆಟ್ಟಿ)	ಪ್ರಬಂಧ	0	[illegible]
8	ವ್ಯಭಿಚಾರಿಣಿ ಯಾರು	(,,)	ನಾಟಕ	1	0
9	ಹೆಂಡ್ತಿ ಗಂಡನಾದರೆ	(,,)	ಪ್ರಹಸನ	0	4
10	ಪ್ರ[illegible]ಷ ವಧು	(,,)	,,	0	4
11	ಸನ್ಯಾಸಿಯ ಸೊಲಿಗಿನಲ್ಲಿ	(,,)	ಕಾದಂಬರಿ	0	12
12	ನಂದಾ ದೀ[illegible]	(ಕೊರಡ್ಕಲ್ ಶ್ರೀನಿವಾಸರಾವ್)	ಕಥಾಸಂಗ[illegible]	0	14
13	ದೇಶಭಕ್ತ	(ಕೆ ಕೆ. ಶೆಟ್ಟಿ)	ನಾಟಕ	1	4
14	ಪ್ರೇಮ ವಿಜಯ	(,,)	,,	1	0
15	ರಂಗ ಭೂಮಿ	(ಎಸ್. ವೆಂಕಟರಾಜು)	ನಾಟಕ	0	10
16	ಸೇವಾಪಥ	(ಶೇಟ್ ಗೋವಿಂದ ದಾಸ)	ನಾಟಕ	0	8
17	ನಾರೀ ಹೃದಯ	(ಶಿವರಾಣಿ ದೇವಿ)	ಕಥೆಗಳು	1	8
18	ಭಾರತೀಯ ಕತೆಗಳು	(ಕೊರಡ್ಕಲ್ ಶ್ರೀನಿವಾಸರಾವ್)		1	12
19	ಪ್ರಕಾಶ	(ಸರಸ್ವತಿಬಾಯಿ ರಾಜವಾಡೆ)	ನಾಟಕ	2	8
20	ನೂರು ಪ್ರಹಸನಗಳು	(ಕೊರಡ್ಕಲ್ ಶ್ರೀನಿವಾಸರಾವ್)		1	4

21	ನಗೆ ಸೋಟಗಳು (ಕೆ. ವಿಟ್ಠಲ ಶೆಟ್ಟಿ) ಕತೆಗಳು	1	4
22	ಅನ್ನ ದೇವರು ಮತ್ತು ಇತರ ಕತೆಗಳು (ಕಯ್ಯಾರ ಕಿಞ್ಞಣ್ಣ ರೈ)	1	0
23	ಭಾರತದಲ್ಲಿ ಜಾತಿ ಭೇದ (ಎಸ್. ಎಲ್. ಸುಬ್ರಹ್ಮಣ್ಯಂ)	1	0
24	ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ (ಎಂ. ವಿ. ಹೆಗ್ಡೆ)	0	12
25	ಆಕಾಶ ಗಂಗೆ (ಎಸ್. ವೆಂಕಟರಾಜ) ಕತೆಗಳು	1	12
26	ಸ್ವಾತಂತ್ರ್ಯವೀರ ಸಾವರಕರರು (ಇಂದಿರಾಬಾಯಿ)	1	4
27	ಜೀವನ ಸಂಗ್ರಾಮ (ಪಿ. ಶೀನ ಶೆಟ್ಟಿ) ನಾಟಕ	1	8
28	ಕದಂಬ (ಸರಸ್ವ[illegible]ಯಿ ರಾಜವಾಡೆ) ಕಥೆಗಳು	1	4
29	ಕವಿತಾಕಾಮಿನಿ ([illegible]ಸ್. ವೆಂಕಟರಾಜ) ಕವಿತೆಗಳು	2	0
30	[illegible] ವಿಜಯ (ಎಂ. ವಿ. ಹೆಗ್ಡೆ) ಯಕ್ಷಗಾನ ನಾಟಕ	0	8
31	[illegible]ಗರ ([illegible]ಸ್. ವೆಂಕಟರಾಜ) ಕತೆಗಳು	0	12
32	[illegible] ([illegible]ರಾಸಮನೆ ಗುಡ್ಡಪ್ಪ) ಕಾದಂಬರಿ	1	8
33	[illegible]ನ ಬೆಡಗು (ಯ[illegible] ನಾರಾಯಣ ಭಟ್ಟ) ಕಾದಂಬರಿ	1	4
34	[illegible]ಲೋಪಾಮುದ್ರೆ (ರಂಗನಾಥ)	1	0
35	ಚಿಗುರು (ಕತೆಗಳ ಸಂಗ್ರಹ)	0	10
36	ನನ್ನ ಕಥೆಗಳು (ಕೆ. ವಿ. ಆಚಾರ್ಯ)	0	1[illegible]
37	ನಕ್ಕರೂ ನಗಬಹುದು (ಕೆ. ದೇವಕಿ ಎಂ. ಶೆಟ್ಟಿ) ವಿನೋದ ಚಿತ್ರಗಳು	0	10
38.	ಧರ್ಮಸಂ[illegible]ಟ (ಕೊರಡ್ಕಲ್) ನಾಟಕ	0	6
39	ಮದುವೆಯ [illegible] (ಎಸ್. ಎಲ್ ಸುಬ್ರಹ್ಮಣ್ಯಂ) ಕತೆಗಳ ಸಂಗ್ರಹ	1	0

ಮೇಲಿನ ಒಟ್ಟು ಬೆಲೆ ರೂ 38-6-0ಯ ಎಲ್ಲಾ ಪುಸ್ತಕಗಳನ್ನೂ ಒಮ್ಮೆಯೇ ತರಿಸಿಕೊಂಡರೆ ರೂ 30ಕ್ಕೆ ಕೊಡಲಾಗುವುದು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕಗಳು ಸಿಗುವ ಮುಖ್ಯ ಸ್ಥಳಗಳು:

1. ಕಿರಿಯರ ಪ್ರಪಂಚ, ಉಡುಪಿ.
2. ನವಯುಗ ಪ್ರೆಸ್ ಉಡುಪಿ.
3. ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಆಂಗ್ಲ ಸ್ವಯಂಬೋಧಿನಿ.

ಬೆಲೆ:— ರೂ. ೧—೮—೦. (ಟ. ಖರ್ಚು ಬೇರೆ)

ಮನೆಯಲ್ಲಿ ಕಾಹಿಲೆಯಾದರೆ ಕಳವಳ[illegible]ಗಿತು.
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿ[illegible]

ಮನೆ ಮದ್ದು

ಬರೆದವರು: ಡಾ| ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

"A[illegible] written- Quite up-to-date valu[illegible]ervice"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ [illegible]ಲೇಜಿನ ಮಾಜಿ
ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜ[illegible]ನಿವಾಸ ಮೂರ್ತಿ,
ಎಮ್. ಬಿ. ಸಿ. ಎಮ್. ಇವರು [illegible] ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿ[illegible] ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ [illegible]ಷಧವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರ[illegible]ವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—[illegible] (ಟ. ಖರ್ಚು ಬೇರೆ.)

ವಿಕ್ರಯಾಧಿಕಾರಿಗಳು:—ನವಭಾರತ ಪುಸ್ತಕ ಭಂಡಾರ, ಉಡುಪಿ.

ಫಂಟಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"

—ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆ[illegible] ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾ[illegible] ಸರ್ವೋತ್ತಮವೆಂದು ಹೇಳಲು ಅಡ್ಡಿಯಿಲ್ಲ. ಅನುವಾ[illegible]ಮಾಡಿದ ಶ್ರೀ [illegible]ಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದ[illegible]

—ಇಂಡಿಯನ್ ಎಕ್ಸ್‌ಪ್ರೆಸ್.

[illegible]ಕೆ ಈ ಕಾದ[illegible]ಬರಿಯ ಬೆಲೆ ರೂ.2—0—0

• •

[illegible]ಶಿಯ[illegible]ದ ಸಂಪತ್[illegible]

[illegible]ಶಿ[illegible] ಆರ್ಥಿಕ ಸ್ಥಿತಿಯ ಚಿತ್ರ)

[illegible]ಶಿ. ಹರಿದಾಸ ಭಟ್ಟ, ಎಂ. ಎ.

[illegible]ಯದಲ್ಲಿ ಚರ್ಚಾಸ್ಪದ ಭೂಖಂ[illegible]ದ

[illegible]ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು

[illegible]ಗಿಯೂ, ಸಚಿತ್ರವಾಗಿಯೂ

[illegible]ಮಾತ್ರ ಗ್ರಂಥ

ವಿಶಿಯ[illegible]ರೂ, ರಾಜಕೀಯಜ್ಞರೂ,

ಓದಬೇಕ[illegible]ಲೆ: ಎರಡು ರೂಪಾಯಿ.

ನವಭಾ[illegible] ಭಂಡಾರ, ಉಡುಪಿ.

ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜರ್ಮನ್ ಕಾದಂಬರಿ

ನಡುಹಗಲಿನ ಕಗ್ಗತ್ತಲೆ

ಅನುವಾದಕರು: ಕು. ಶಿ. ಹರಿದಾಸ ಭಟ್ಟರು.

೩೦೮ ಪುಟಗಳು ಬೆಲೆ 2 · 50 ರೂಪಾಯಿ

● ಯುರೋಪಿನಲ್ಲಿ ಈಗ ನಲ್ವತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ದುರಂತದ ಒಂದು ಮಾರ್ಮಿಕ ಕಾದಂಬರಿ.

● ರಶಿಯದ ರಕ್ತಮಯ ಕ್ರಾಂ[illegible]ಯು ವ್ಯಕ್ತಿ[illegible] ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರು[illegible] ಭೀಕರ[illegible]

● ಇದರಲ್ಲಿ ಪ್ರಚಲಿತ ಪ್ರಪಂಚದ [illegible]ರಾಜನೀತಿ[illegible]ಗಿತು. ಅಂತಾರಾಷ್ಟ್ರೀಯ ರೀತಿ ನೀತಿಯ ಒಳ[illegible]ಟ ದ[illegible]

●

ಅದೃಷ್ಟಶಾಲಿ ರಾ[illegible]ನಾಯ[illegible]

[illegible]ಜಾರ್ಜ್ ವಾ[illegible]ಂಗ್[illegible]

ಲೇಖಕಿ: ಜಿನೇ [illegible]

ಅನುವಾದಕ[illegible]

[illegible]. ಎಲ್. ಆಚಾರ್ಯ, [illegible]aluab[illegible] erv[illegible]

ಅ[illegible]ರಿಕದ ಮೊದಲ ಅಧ್ಯಕ್ಷನ — ಜಾರ್ಜ್ [illegible]ಜಿನ ವ[illegible]ವನ ಚರಿತ್ರೆಯಿದು. ಈತನ ಬಾಲ್ಯ, ಯೌವ[illegible] ನಿವಾಸ ಮೂರ್ತಿ ವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ [illegible] ಕೊಂಡಾಡಿದಾ[illegible] ಆತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾ[illegible] ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಬೆಲೆ: ರೂಪ[illegible]

[illegible]

1. ನವಯುಗ ಪ್ರೆ[illegible]
2. ನವಭಾರತ ಪ[illegible] ([illegible]) [illegible]ಉಡುಪಿ.

ಪುಸ್ತಕ